
ಪ್ರಬೋಧನೆ

ಲಂಕೇಶ್

ಫೆಬ್ರವರಿ 05, 2014 ಪುಟ 20 ರೂ. 15/-

ಬಾನು ಮುಷ್ತಾಕ್

ನನ್ನ ಮಗನಿಗೆ ನ್ಯಾಯ ಕೊಡುವಿರಾ?



ಅಕ್ಕಿನೇನಿ ಯುಗಾಂತ್ಯ



ಗೆದ್ದು ಸೋತ ಸುನಂದ



ಭಜರಂಗಿ ಲಾಭ! ಅಯ್ಯೋ ಪಾಪ!!

ರ್ವಣಂಕರ ಅಟ್ಟಹಾಸ

ಂಗ್ರೆಸ್ ನಾಯಕಿ ಾಪತ್ತೆ

ಶಿವಮೊಗ್ಗ


ನಡೆದೀತೆ ಯಡ್ಡಿ ಆಟ?



ಮಂಡ್ಯ:

'ಕೃಷ್ಣಾಂಬಿ' ಕಾಳಗದಲ್ಲಿ 'ರಮ್ಯ' ಕಥಾ...

ದೇಶದ ಶಿಕ್ಷಣ ವ್ಯವಸ್ಥೆಯ ರೋಗಕ್ಕೆ ಮದ್ದು ಏಕೆ ಸಿಗುತ್ತಿಲ್ಲ?



ಕಳೆದ ಬುಧವಾರ ಅಧ್ಯಯನ ಸಂಸ್ಥೆಯೊಂದು ಬಿಡುಗಡೆ ಮಾಡಿದ ವರದಿಯ ಆಧಾರದ ಮೇಲೆ ಕನ್ನಡ ಪತ್ರಿಕೆಗಳು ಒಂದು ವರದಿಯನ್ನು ಪ್ರಕಟಿಸಿವೆ. 'ಐದನೇ ತರಗತಿ ಮಕ್ಕಳಲ್ಲಿ ಎರಡನೇ ತರಗತಿಯ ಪಾಠವನ್ನು ಅರ್ಥ ಮಾಡಿಕೊಂಡವರ ಸಂಖ್ಯೆ ಅರ್ಧಕ್ಕಿಂತ ಕಡಿಮೆಗೆ ಇಳಿದಿದೆ', 'ಭಾಗಾಕಾರ ಮಾಡಲು ಬರುವವರು ಎಂಟನೇ ತರಗತಿಯಲ್ಲೂ ಅರ್ಧಕ್ಕಿಂತ ಕಡಿಮೆ'. ಇದನ್ನು ಕೆಲವು ಪತ್ರಿಕೆಗಳು 'ಯುಪಿಎ ಸರ್ಕಾರದ ಅವಧಿಯಲ್ಲಿ ಶಿಕ್ಷಣದ ಗುಣಮಟ್ಟದಲ್ಲಿ ಇಳಿತ' ಎಂಬ ತಲೆಬರಹದಡಿ ಪ್ರಕಟಿಸಿವೆ. ಇದಕ್ಕೆ ಯುಪಿಎ ಸರ್ಕಾರವೂ ಕಾರಣ ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ ನಮ್ಮ ವಿವಿಧ ರಾಜಕೀಯ ಪಕ್ಷಗಳು ಅನುಸರಿಸಿಕೊಂಡು ಬರುತ್ತಿರುವ ಶಿಕ್ಷಣ ನೀತಿಯಲ್ಲಿ ಸಮಸ್ಯೆ ಹುಡುಕುವ ಬದಲು, 'ಮೇಲುಮೇಲಿನ' ಕಾರಣಗಳನ್ನು ಪತ್ತೆ ಹಚ್ಚುವಲ್ಲಿ ಸರ್ಕಾರೀ ಸಂಸ್ಥೆಗಳು ಪರಿಣಿತಿ ಪಡೆದುಕೊಂಡಿದ್ದಾರೆ.

ಹಾಗಾಗಿ ಬಿಸಿಯೂಟ, ಕ್ಷೀರಭಾಗ್ಯದ ನಂತರ, ಇದೇ ತಿಂಗಳಲ್ಲಿ ಸಿದ್ದರಾಮಯ್ಯನವರ ಸರ್ಕಾರ ಇನ್ನೊಂದು ಯೋಜನೆ ಪ್ರಕಟಿಸಿದೆ. ಅದು ಶಾಲೆಗೆ ಬರುವ ಮಕ್ಕಳಿಗೆ ದಿನಕ್ಕೆ ಎರಡು ರೂ. ಪ್ರೋತ್ಸಾಹಧನ ಕೊಡುವುದು. ಇವೆಲ್ಲದರ ಪರಿಣಾಮವಾಗಿ ಒಂದಂತೂ ಸಾಧ್ಯವಾಗುತ್ತದೆ. 'ನಾವು ಶಾಲೆ ತೆರೆದಿದ್ದೇವೆ, ಶಿಕ್ಷಕರನ್ನು ನೇಮಿಸಿದ್ದೇವೆ, ಸಮವಸ್ತ್ರ ಕೊಡುತ್ತೇವೆ, ಊಟವನ್ನೂ ಕೊಡುತ್ತೇವೆ, ಪುಸ್ತಕ ಕೊಡುತ್ತೇವೆ, ಸಾಕಾಗಿಲ್ಲ ಅಂದರೆ ದಿನಕ್ಕೆ 2 ರೂ. ಕಾಸೂ ಕೊಡುತ್ತೇವೆ. ಇನ್ನು ಈ ದೇಶದಲ್ಲಿ ಮಕ್ಕಳು ಒಳ್ಳೆಯ ಶಿಕ್ಷಣ ಪಡೆದುಕೊಳ್ಳದಿದ್ದರೆ ಅದು ಪೋಷಕರ ಕರ್ಮ ಅಷ್ಟೇ, ಅದರಲ್ಲಿ ಸರ್ಕಾರದ ತಪ್ಪೇನೂ ಇಲ್ಲ' ಎಂದು ಹೇಳಬಹುದು.



ಇದೇ ಅವಧಿಯಲ್ಲಿ ಇನ್ನೂ ಒಂದು ಬೆಳವಣಿಗೆ ನಡೆಯುತ್ತಿದೆ. ಫೆಬ್ರವರಿ 7, 8 ಮತ್ತು 9ಕ್ಕೆ 'ಶಿಕ್ಷಣದ ಹಕ್ಕಿಗಾಗಿ ಅಖಿಲ ಭಾರತ ವೇದಿಕೆ'ಯು ಅದರ ರಾಷ್ಟ್ರೀಯ ಮಂಡಳಿ ಸಭೆಯನ್ನು ಕರ್ನಾಟಕದಲ್ಲೇ ನಡೆಸುತ್ತಿದೆ. ಅದರ ಭಾಗವಾಗಿರುವವರು ಕಳೆದ ಹಲವಾರು ವರ್ಷಗಳಿಂದ ಇದರ ಕುರಿತೇ ಮಾತನಾಡುತ್ತಿದ್ದಾರೆ. ಲಕ್ಷಗಟ್ಟಲೆ ಶಾಲೆಗಳು ಮತ್ತು ಶಿಕ್ಷಕರು, ಕೋಟ್ಯಾಂತರ ರೂಪಾಯಿ, ಬಣ್ಣಬಣ್ಣದ ವಿವಿಧ ಯೋಜನೆಗಳು ಇವೆಲ್ಲದರ ಆಚೆಗೂ ನಮ್ಮ ದೇಶದ ಶಿಕ್ಷಣದ ಗುಣಮಟ್ಟ ಹೆಚ್ಚಾಗಿಲ್ಲ ಅಂದಮೇಲೆ ಮೂಲಭೂತವಾಗಿ ಎಲ್ಲೋ ಸಮಸ್ಯೆ ಇದೆ ಎಂದು ಏಕೆ ಯೋಚಿಸುತ್ತಿಲ್ಲ? ತಿಳಿಯುತ್ತಿಲ್ಲವೋ ಅಥವಾ ಆ ದಿಕ್ಕಿನಲ್ಲಿ ಮುಂದುವರೆಯಲು ಇಷ್ಟವಿಲ್ಲವೋ?

ಏಕೆಂದರೆ ಶಿಕ್ಷಣದ ಮಹತ್ವದ ಕುರಿತು ಬಹಳ ಮಾತನಾಡಲಾಗುತ್ತದೆ. ಅಷ್ಟೆಲ್ಲಾ ಮಹತ್ವ ಅದಕ್ಕೆ ಇರುವುದಾದರೆ, ಕೇವಲ ಮಾತುಗಳಿಂದ ಅದನ್ನು ಸಾಧಿಸಲಾಗುತ್ತದೆಯೇ? ಎಷ್ಟರಮಟ್ಟಿಗೆ ಶಿಕ್ಷಣದ ಮತ್ತು ಶಿಕ್ಷಕರ ಪಾತ್ರದ ಕುರಿತು ಹೊಗಳಲಾಗುತ್ತದೆಂದರೆ, ಹೆಚ್ಚು ಕಡಿಮೆ ಅವರನ್ನು ಹುತಾತ್ಮರನ್ನಾಗಿಸಲು ಬೇಕಾದಷ್ಟು. ಪ್ರಯೋಜನಕ್ಕೆ ಬಾರದ ಯೋಜನೆಗಳು ಮತ್ತು ಹೊಗಳಿಕೆ ಈ ವೈರುಧ್ಯದ ಅಪಾಯವನ್ನು ಬೇಗ ಅರಿತುಕೊಳ್ಳಬೇಕು.

ಸ್ವತಂತ್ರ ಭಾರತದ ಮೊದಲ ಶಿಕ್ಷಣ ಆಯೋಗ ಕೊಥಾರಿ ಆಯೋಗವು (1964-66) ಸರ್ಕಾರಕ್ಕೆ ಸಲ್ಲಿಸಿರುವ ವರದಿಯ ಮೊದಲ ವಾಕ್ಯ ಹೀಗೆ ಹೇಳುತ್ತದೆ - 'ದೇಶವೊಂದರ ಭವಿಷ್ಯವು ಅದರ ಶಾಲೆಯ ತರಗತಿಗಳಲ್ಲಿ ರೂಪುಗೊಳ್ಳುತ್ತದೆ'. ಈ ವರದಿಯಲ್ಲಿ ಎರಡು ಮುಖ್ಯ ಶಿಫಾರಸ್ಸುಗಳನ್ನು ಆಯೋಗವು ಮಾಡುತ್ತದೆ. ಒಂದು, ದೇಶದಲ್ಲಿ ಸಮಾನ ಶಾಲಾ ವ್ಯವಸ್ಥೆ ಬರಬೇಕು ಮತ್ತು ಶಿಕ್ಷಣಕ್ಕೆ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದ ಶೇ.6ರಷ್ಟನ್ನು ವೆಚ್ಚ ಮಾಡಬೇಕು. ಎರಡರ ವಿಚಾರದಲ್ಲೂ ಇಂದು ವಿರುದ್ಧ ದಿಕ್ಕಿನಲ್ಲಿ ಪ್ರಯಾಣ ಸಾಗಿದೆ.

ಸಮಾನ ಶಾಲೆ ಕನಸೆನ್ನುವಂತೆ, ಅಸಮಾನ ಶಾಲಾ ವ್ಯವಸ್ಥೆ ದಿನೇದಿನೇ ಹಿಗ್ಗುತ್ತಿದೆ; ಒಟ್ಟು ಜಿಡಿಪಿಯಲ್ಲಿ ಶಿಕ್ಷಣದ ಪಾಲು ಕುಗ್ಗುತ್ತಿದೆ. ಈ ಮಧ್ಯೆ 90ರ ದಶಕದಲ್ಲಿ ಡಿಪಿಇಪಿ ಯೋಜನೆ, ಹೊಸ ಶತಮಾನದಲ್ಲಿ ಸರ್ವ ಶಿಕ್ಷಣ ಅಭಿಯಾನಗಳು ಜಾರಿಗೆ ಬಂದು, 2010ರ ಏಪ್ರಿಲ್ ಒಂದರಿಂದ 'ಶಿಕ್ಷಣ ಹಕ್ಕು ಕಾಯ್ದೆ' ಜಾರಿಗೆ ಬಂದಿದೆ. 1989-90ರಲ್ಲಿ ಜಿಡಿಪಿಯ ಶೇ.4ರಷ್ಟನ್ನು ಶಿಕ್ಷಣದ ಮೇಲೆ ಖರ್ಚು ಮಾಡುತ್ತಿದ್ದರು. 1997-98ರ ಹೊತ್ತಿಗೆ ಅದು ಶೇ.3.49ಕ್ಕೆ ಇಳಿದಿತ್ತು.

ಇವೆಲ್ಲದರಿಂದ ಏನೂ ಪ್ರಯೋಜನವಾಗಿಲ್ಲ ಎನ್ನುವ ಹಾಗಿಲ್ಲ. ತೀರಾ ಇತ್ತೀಚೆಗೂ (2005) 1ನೇ ತರಗತಿಗೇ ದಾಖಲಾತಿಯಾಗದ ಮಕ್ಕಳ ಸಂಖ್ಯೆ ಶೇ.7ರಷ್ಟಿತ್ತು, ಆದರೆ ಶಾಲೆಗೆ ಮಕ್ಕಳನ್ನು ದಾಖಲು ಮಾಡಿಸಲು ಸರ್ಕಾರ ವಿಶೇಷ ಆಸಕ್ತಿ ತೆಗೆದುಕೊಂಡಿತು. ಹಾಗೆಯೇ ಶಾಲೆ ಬಿಟ್ಟ ಮಕ್ಕಳನ್ನು ಕರೆದುಕೊಂಡು ಬರಲೂ ಶಿಕ್ಷಕರಿಗೆ ಕೆಲಸ ಕೊಟ್ಟು (ಅಂದರೆ ಶಾಲೆಯಲ್ಲಿ ಪಾಠ ಮಾಡಲು ಉಳಿದಿದ್ದ ಸ್ವಲ್ಪ ಸಮಯದಲ್ಲೇ) ಮಕ್ಕಳನ್ನು ಬರಮಾಡಿಕೊಳ್ಳಲಾಯಿತು. ಅವೆಲ್ಲದರ ಫಲವಾಗಿ 2013ರ ಹೊತ್ತಿಗೆ ಶೇ.97ರಷ್ಟು ಮಕ್ಕಳು ಶಾಲೆಗೆ ಬರುವಂತೆ ಮಾಡಲಾಗಿದೆ.

ಹಾಗಾದರೆ ಶಿಕ್ಷಣದ ಗುಣಮಟ್ಟ ಏಕೆ ಕುಸಿಯುತ್ತಿದೆ. ಈ ವರದಿಯನ್ನು ಬಿಡುಗಡೆ ಮಾಡಿದವರು ಬೇರಾರೂ ಅಲ್ಲ, ಯೋಜನಾ ಆಯೋಗದ ಉಪಾಧ್ಯಕ್ಷ ಮಾಂಟೆಕ್ ಸಿಂಗ್ ಅಹ್ಲುವಾಲಿಯಾ. 'ಮಕ್ಕಳ ಕಲಿಕೆಯ ಮಟ್ಟ ಬಹಳ ಅತೃಪ್ತಿಕರವಾಗಿದೆ' ಎಂದು ಅಹ್ಲುವಾಲಿಯಾ ಬಿಡುಗಡೆ ಕಾರ್ಯಕ್ರಮದಲ್ಲಿ ಒಪ್ಪಿಕೊಂಡರು. ಆದರೆ ಹಾಗಾಗುವುದರಲ್ಲಿ ತನ್ನ ಪಾಲೂ ಇದೆ ಎಂದು ಮಾತ್ರ ಅವರು ಹೇಳಲಿಲ್ಲ.

ಅದೇ ವರದಿಯಲ್ಲಿ ಹೇಳಿರುವ ಎರಡು ಅಂಶಗಳು ಅದನ್ನು ಸ್ಪಷ್ಟಪಡಿಸುತ್ತವೆ. 2005ರಲ್ಲಿ ಖಾಸಗಿ ಶಾಲೆಗಳಿಗೆ ದಾಖಲಾಗುತ್ತಿದ್ದ ಮಕ್ಕಳ ಪ್ರಮಾಣ ಶೇ.16.3 ಇದ್ದರೆ, 2013ರಲ್ಲಿ ಅದು ಶೇ.29 ಇದೆ ಮತ್ತು ಈ ಅವಧಿಯಲ್ಲಿ ಶಿಕ್ಷಕರ ಪ್ರಮಾಣ ಗಮನಾರ್ಹವಾಗಿ ಕಡಿಮೆಯಾಗಿದೆ. ಶಿಕ್ಷಣ ಹಕ್ಕು ಕಾಯ್ದೆ 2009 ಸ್ಪಷ್ಟವಾಗಿ ಹೇಳುತ್ತದೆ. ಪ್ರತಿ 30 ಮಕ್ಕಳಿಗೆ ಒಬ್ಬರು ಶಿಕ್ಷಕರು ಇರಲೇಬೇಕು. ಆದರೆ ಈ ದೇಶದಲ್ಲಿ 2011ರಲ್ಲಿ ಶೇ.40.8 ಮಕ್ಕಳಿಗೆ ಒಬ್ಬ ಶಿಕ್ಷಕರಿದ್ದರೆ, 2013ರಲ್ಲಿ ಅದೇ ಒಬ್ಬ ಶಿಕ್ಷಕರು 45.3 ಮಕ್ಕಳಿಗೆಂದು ನಿಯೋಜಿತವಾಗಿದ್ದಾರೆ!



ನಿಯೋಜಿತವಾಗಿದ್ದಾರೆ ಅಷ್ಟೆ. ಅಂದರೆ ಅಷ್ಟು ಮಕ್ಕಳು ಈ ಶಿಕ್ಷಕರಿಂದ ಪಾಠ ಕೇಳುತ್ತಿರುತ್ತಾರೆ ಎಂದರ್ಥವಲ್ಲ. ಕರ್ನಾಟಕದ್ದೇ ಉದಾಹರಣೆ ತೆಗೆದುಕೊಳ್ಳುವುದಾದರೆ ಈಗ ಶಿಕ್ಷಣ ಇಲಾಖೆಯು 'ನಿರಂತರ ಮತ್ತು ಸಮಗ್ರ ಮೌಲ್ಯಮಾಪನ' (ಸಿಸಿಇ) ಎಂಬ ಹೊಸ ಪದ್ಧತಿಯನ್ನು ತಂದಿದೆ. ಅದನ್ನು ಜಾರಿ ಮಾಡಲೇಬೇಕಾದ ಎಲ್ಲಾ ಶಾಲೆಗಳಲ್ಲೂ ಶಿಕ್ಷಕರ ಬೋಧನಾ ಅವಧಿ ಹೆಚ್ಚುಕಡಿಮೆ ಅರ್ಧದಷ್ಟು ಕಡಿಮೆಯಾಗಿದೆ.

ಶಿಕ್ಷಣ ಹಕ್ಕು ಕಾಯ್ದೆಯು ಖಾಸಗೀಕರಣವನ್ನು ಪ್ರೋತ್ಸಾಹಿಸುವ ಹಲವು ಅಂಶಗಳನ್ನು ಹೊಂದಿದೆ ಎಂಬುದು ಬೇರೆ ಮಾತು. ಆದರೆ ಅದು ಹೇಳಿರುವಷ್ಟನ್ನೂ ಏಕೆ ಜಾರಿ ಮಾಡಲಾಗಿಲ್ಲ? ಇದಕ್ಕೆ ಉತ್ತರವನ್ನು ಕೊಠಾರಿ ಆಯೋಗದ ಆ ಎರಡು ಮುಖ್ಯ ಶಿಫಾರಸ್ಸುಗಳಲ್ಲೇ ಹುಡುಕಬೇಕು. ಶೇ.6ರಷ್ಟು ಜಿಡಿಪಿ ಮತ್ತು ಸಮಾನ ಶಾಲಾ ವ್ಯವಸ್ಥೆ ಜಾರಿಗೆ ಬರದೇ ನಡೆಸುವ ಯಾವ ಪ್ರಯೋಗಗಳೂ ಗುರಿ ಮುಟ್ಟುವ ಸಾಧ್ಯತೆಯಿಲ್ಲ.

ಇದೇ ನಿಲುವನ್ನು ಹೊಂದಿರುವ 'ಶಿಕ್ಷಣದ ಹಕ್ಕಿಗಾಗಿ ಅಖಿಲ ಭಾರತ ವೇದಿಕೆ'ಯು ಇದೇ ಫೆಬ್ರವರಿ 9ರಂದು ಬೆಂಗಳೂರಿನಲ್ಲಿ 'ಶಿಕ್ಷಣದ ವ್ಯಾಪಾರೀಕರಣ ಮತ್ತು ಕೋಮುವಾದೀಕರಣದ ರದ್ಧತಿಗಾಗಿ ಮತ್ತು ಸಮಾನ ಶಾ[illegible] ವ್ಯವಸ್ಥೆಗಾಗಿ ರಾಜ್ಯ ಮಟ್ಟದ ಹಕ್ಕೊತ್ತಾಯ ಸಮಾವೇಶ'ವ[illegible] ಏರ್ಪಡಿಸಿದೆ. ಇದು ಒಂದು ಆಂದೋಲನವಾಗದ[illegible] ಬಹುಶಃ ನಮ್ಮ ಶಿಕ್ಷಣ ವ್ಯವಸ್ಥೆಗೆ ಹಿಡಿದಿರುವ ರೋ[illegible] ಗುಣವಾಗುವ ಯಾವುದೇ ಸಾಧ್ಯತೆ ಇಲ್ಲ.

ಶಿಕ್ಷಣದ ಗುಣಮಟ್ಟವನ್ನು ಕೇವಲ ಮೂ[illegible] ಮಾನದಂಡಗಳನ್ವಯ (ಓದುವುದು, ಬರೆಯುವುದು ಮ[illegible] ಲೆಕ್ಕ ಮಾಡುವುದು) ಗುರುತಿಸಿದಾಗ ಕಂಡು ಬಂ[illegible] ಅಂಶಗಳನ್ನಷ್ಟೇ ದಾಖಲಿಸಿ ಮಾಡಿದ ವರದಿಯಲ್ಲಿ [illegible] ದುಸ್ಥಿತಿ ಕಂಡಿದೆ. ಇನ್ನು ಶಿಕ್ಷಣದ ಇತರ ಉದ್ದೇಶಗಳಾದ 'ವಿಮರ್ಶಾತ್ಮಕ ಚಿಂತನೆ, ಸೃಜನಶೀಲತೆ, ವೈಜ್ಞಾನಿ[illegible] ಮನೋಭಾವ, ವಿಶ್ಲೇಷಣಾ ಸಾಮರ್ಥ್ಯ, ಇತಿಹಾಸ ಮ[illegible] ತತ್ವಶಾಸ್ತ್ರದ ಕುರಿತಾದ ಅರಿವು ಮತ್ತು ಸೌಂದರ್ಯ[illegible] ಪ್ರಜ್ಞೆ'ಗಳನ್ನು ನಮ್ಮ ಮಕ್ಕಳಲ್ಲಿ ಎಷ್ಟು ಬೆಳೆಸಲಾಗುತ್ತ[illegible] ಎಂದು ಹುಡುಕಿದರೆ, ಅದು ಯಾವ ಪ್ರಮಾಣಕ್ಕ[illegible] ಎಂಬುದರ ಅರಿವಾಗುತ್ತದೆ. ●

ಕೊನೆಗೂ ಬಾಡಿಗೆ ಮನೆ ಸಿಕ್ಕಿತು

ಫೇಸ್‌ಬುಕ್‌ನ ಎಲ್ಲಾ ಸ್ನೇಹಿತರಿಗೆ
ಸಂತೋಷ ಗುಡ್ಡಿಯಂಗಡಿ ಎಂಬ ಈ ನಿಮ್ಮ ಗೆಳೆಯ
ಸಂತಸದ ಸುದ್ದಿಯನ್ನು ಹೇಳುತ್ತಿದ್ದಾನೆ:

"ನನಗೆ ನಂಜನಗೂಡಿನಲ್ಲಿ ಬಾಡಿಗೆಗೆ ಮನೆ ಸಿಕ್ಕಿದೆ!"

ನನ್ನ ಮೇಲೆ ಪ್ರೀತಿಯಿಂದ ಅಭಿಯಾನವನ್ನೇ ನಡೆಸಿದ
ಶಶಿಧರ ಹೆಮ್ಮಾಡಿ, ಶಂಕರ ದೇವಾಡಿಗ ಕಂಚನೂರು,
ಗೌರಿ ಲಂಕೇಶ್ ಪತ್ರಿಕೆ, ಡೆಕ್ಕನ್ ಕ್ರೋನಿಕಲ್ ಪತ್ರಿಕೆ
ಹಾಗೂ ಎಲ್ಲಾ ಗೆಳೆಯರು, ಹಿರಿಯರು,
ಗುರುವೃಂದಕ್ಕೂ
ವಂದನೆಯನ್ನು ಸಲ್ಲಿಸುತ್ತಿದ್ದೇನೆ.

ನನ್ನ ಬಾಡಿಗೆ ಮನೆಯ ಅಭಿಯಾನಕ್ಕಾಗಿ ಸಾವಿರಾರು ಜನ
ನನಗೆ ಪರಿಚಯವಿಲ್ಲದ ಅದೆಷ್ಟೋ ಜನರು
ಕೈಜೋಡಿಸಿದ್ದರು;
ನೊಂದಿದ್ದರು. ಗುರುಗಳಾದ ರಘುನಂದನ ಅವರು
ಪಟ್ಟ ಸಂಕಟವಂತೂ
ಹೇಳತೀರದು.

ನನ್ನ ಹುಡುಕಾಟಕ್ಕೆ ಕಡೆಗೂ ಒಂದು ಚಂದದ ಮನೆ ಸಿಕ್ಕಿದೆ.
ಮುಂದಿನ ವಾರ ಹೊಸಮನೆಗೆ ನಾನು ನನ್ನ ಪತ್ನಿ
ವಾಸಕ್ಕೆ ತೆರಳುತ್ತಿದ್ದೇವೆ.

ನಿಮ್ಮೆಲ್ಲರ ಪ್ರೀತಿ ಹೀಗೇ ಸದಾ ಇರಲಿ
ಮತ್ತೊಮ್ಮೆ ಕೂಗಿ ಕೂಗಿ
ಹೇಳುತ್ತಿದ್ದೇನೆ
ಜಾತಿಯನ್ನೇ
ಜೀವಂತವಾಗಿಟ್ಟುಕೊಂಡ
ನಂಜನಗೂಡಿನಲ್ಲಿ
ಸಂತೋಷ
ಗುಡ್ಡಿಯಂಗಡಿಗೆ
ಬಾಡಿಗೆಗೆ ಮನೆ ಸಿಕ್ಕಿದೆ!!



● ಸಂತೋಷ್ ಗುಡ್ಡಿಯಂಗಡಿ

...ನ್ನ ಮಗನ ಜೀವತ್ಯಾಗದ ಬಗ್ಗೆ ರಿಗ್ರೆಟ್ಸ್ ಇಲ್ಲ'


...ವರ ಮನೆಯ ಬಾಗಿಲ ಮುಂದೆ ನಿಂತಾಗ ...ಷ್ಟು ಮೂರು ಗಂಟೆಯಾಗಿತ್ತು. ಅವರು ನಿದ್ರಿಸು ...ದು; ಬೆಲ್ ಒತ್ತಬೇಕೆ ಬೇಡವೇ ಎಂದು ...ರಡು ಕ್ಷಣ ಯೋಚಿಸಿದೆ. 'ಅವರನ್ನು ನೋಡಿ ...ು ವರ್ಷಗಳೇ ಕಳೆದಿವೆ. ಮತ್ತೆ ಇಲ್ಲಿಗೆ ಬರುವುದು ...ಾಗಲೋ. ಬೆಲ್ ಒತ್ತಿ ಒಂದೆರಡು ನಿಮಿಷ ...ನ್ನು ಅವರು ಬಾಗಿಲು ತೆರೆಯದಿದ್ದರೆ ವಾಪಸ್ ...ದರಾಯಿತು' ಎಂದು ಯೋಚಿಸಿ ಬೆಲ್ ಒತ್ತಿದೆ.

...ರತ್ತು ಸೆಕೆಂಡ್ ... ಬಾಗಿಲನ್ನು ... ಮಹಿಳೆ ...ರು?" ಎಂದು ...ದರು.

..."ನಾನು ಮ್ಯಾಮ್, ... ಲಂಕೇಶ್" ಎಂದೆ.

...ಅವರಿಗೆ ನಾನು ...ದ್ದು ಸ್ಪಷ್ಟವಾಗಿ ...ಲಿಲ್ಲ. ಮತ್ತೆ ...ರು ನೀವು?" ...ು ಕೇಳಿದರು.

..."ನಾನು ಮ್ಯಾಮ್, ..., ಸಾಕೇತನ ...ಕ್" ಎಂದು ಸ್ವಲ್ಪ ದನಿಯಲ್ಲಿ ...ದೆ.



ಸಾಕೇತ್ ರಾಜನ್

...ಕೂಡಲೆ ಅವರು ...ನ್ನು ತಬ್ಬಿಕೊಂಡು ...ು ಗೌರಿ, ಒಂದುಕ್ಷಣ ನಿನ್ನ ಗುರುತು ಸಿಗಲಿಲ್ಲ" ...ು ಹೇಳುತ್ತಾ ನನ್ನನ್ನು ತಮ್ಮ ಫ್ಲಾಟ್ ಒಳಗೆ ...ುಕೊಂಡು ಹೋದರು.

...ಅವರು ರಾಜಲಕ್ಷ್ಮಿ ರಾಜನ್. ಒಂಭತ್ತು ವರ್ಷಗಳ ...ೆ ಪೊಲೀಸ್ ಎನ್‌ಕೌಂಟರ್‌ನಲ್ಲಿ ಮರಣ ಹೊಂದಿದ ...ವೋವಾದಿ ಸಾಕೇತ್ ರಾಜನ್ ಅವರ ತಾಯಿ.

...ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿರುವ ಒಂದು ...ರ್ಟ್‌ಮೆಂಟ್ ಬ್ಲಾಕ್‌ನ ಎರಡನೆ ಅಂತಸ್ತಿನಲ್ಲಿರುವ ...ು ಫ್ಲಾಟ್‌ನಲ್ಲಿ ರಾಜಲಕ್ಷ್ಮಿ ವಾಸಿಸುತ್ತಿದ್ದಾರೆ; ಏಕಾಂಗಿ ...ಗಿ.

...ರಾಜಲಕ್ಷ್ಮಿ ಅವರಿಗೆ ಈಗ ತುಂಬಾ ವಯಸ್ಸಾಗಿದೆ. ...ನ್ನುನೋವಿನ ನಿಯಂತ್ರಣಕ್ಕೆಂದು ಉಪಯೋಗಿಸುವ ...ಬವಾದ ಬೆಲ್ಟ್ ಅವರ ಬೆನ್ನಿಗೇರಿ ಹಲವಾರು ...ಗಳೇ ಆಗಿವೆ. ಆದರೂ ಈಗಲೂ ಅವರಿಂದ ...ಳ ಹೊತ್ತು ಕುರ್ಚಿಯಲ್ಲಿ ಕೂರಲಾಗುವುದಿಲ್ಲ. ...ಗೊಮ್ಮೆ ಕೂತರೆ ಎದ್ದು ನಿಂತಾಗ ಅವರು ಬಹಳ ...ದಿಂದ ಹಲವು ನಿಮಿಷಗಳ ನಂತರ ನೆಟ್ಟಗೆ ...ುತ್ತಾರೆ. ಹಲವೊಮ್ಮೆ ಎದ್ದು ನಿಲ್ಲುವಾಗ ಆಯ ...ತ್ತದೆ. ಅವರ ಬಲ ಕಿವಿ ಮಂದವಾಗಿರುವುದರಿಂದ ...ರು ಭೇಟಿಗಾರರನ್ನು ತಮ್ಮ ಎಡಕ್ಕೆ ಕೂರಿಸಿ ...ಳ್ಳುತ್ತಾರೆ. ಇಷ್ಟೆಲ್ಲ ಇದ್ದರೂ ರಾಜಲಕ್ಷ್ಮಿ ಅವರ ...ಸ್ಯಪ್ರಜ್ಞೆ ಒಂದಿಷ್ಟೂ ಕುಂದಿಲ್ಲ.

... ನನ್ನ ಕೈಹಿಡಿದು ಹಾಲ್‌ನಲ್ಲಿರುವ ಸೋಫಾದ ಮೇಲೆ ...ನ್ನು ತಮ್ಮ ಎಡಕ್ಕೆ ಕೂರಿಸಿಕೊಂಡರು. "ಬಹಳ ...ವಾಯಿತು ತಮ್ಮನ್ನು ಭೇಟಿ ಮಾಡಿ. ಹೇಗಿದ್ದೀರಿ?" ...ದೆ.

"ಹೀಗೆ ಇದ್ದೀನಿ... ಈ ವಯಸ್ಸಿನಲ್ಲಿ ಇನ್ನು ಹೇಗೆ ...ಲು ಸಾಧ್ಯ ಗೌರಿ. ಇತ್ತೀಚೆಗೆ ಅಮೆರಿಕಾದಲ್ಲಿರುವ ... ಮಗಳ ಮನೆಗೆ ಹೋಗಿದ್ದೆ. ಅಲ್ಲಿ ನಾಲ್ಕು ತಿಂಗಳ ...ು ವಿಶ್ರಾಂತಿ ಪಡೆದಿದ್ದರಿಂದ ನನ್ನ ಬೆನ್ನುನೋವು ...ಮೆ ಆಗಿತ್ತು. ಆದರೀಗ ಮತ್ತೆ ಹಿಂದಿನ ಸ್ಥಿತಿಗೆ ...ದಿರುಗಿದೆ."

"ಮತ್ತೆ ಯಾವಾಗ ಅಮೆರಿಕಕ್ಕೆ ಹೋಗುತ್ತೀರಿ?" ...ದು ಕೇಳಿದೆ.

"ಮತ್ತೆ ಅಲ್ಲಿಗೆ ಹೋಗುತ್ತೀನೋ ಇಲ್ಲವೋ ...ತ್ತಿಲ್ಲ. ಯಾಕೆಂದರೆ 24 ಗಂಟೆ ವಿಮಾನದಲ್ಲಿ ಕೂತು ...ಯಾಣಿಸುವುದು ಇನ್ನು ಮುಂದೆ ನನ್ನಿಂದ ಸಾಧ್ಯವಿಲ್ಲ"

"ಅಮೆರಿಕದಲ್ಲಿ ಏನು ಮಾಡಿದಿರಿ?"

"ಅಮೆರಿಕದಲ್ಲಿರುವ ನನ್ನ ತಮ್ಮಂದಿರು ಮತ್ತು ...ರೆ ಸಂಬಂಧಿಗಳು ನನ್ನನ್ನು ಭೇಟಿ ಆಗಲು ಬಂದಿದ್ದರು. ...ಗಳ ಸಂಸಾರದೊಂದಿಗೆ ಮತ್ತು ಇತರೆ ಸಂಬಂಧಿಕ ...ಂದಿಗೆ ಸಮಯ ಕಳೆದೆ. ಹಾ... ಫೋಟೋಗಳನ್ನು ...ೋರಿಸುತ್ತೇನೆ ಇರು...." ಎಂದ ರಾಜಲಕ್ಷ್ಮಿ ಅವರು ...ನಷ್ಟು ಎದ್ದು ನಿಂತರು. ತಮ್ಮ ದೇಹವನ್ನು ನಿಧಾನಕ್ಕೆ ನೆಟ್ಟಗೆ ಮಾಡಿಕೊಂಡ ನಂತರ ಒಂದೆರಡು ಕ್ಷಣ ಆಯವನ್ನು ಪಡೆಯಲು ಕಾದರು. ಆಯ ಸಿಕ್ಕ ನಂತರ ನಿಧಾನವಾಗಿ ತಮ್ಮ ಎರಡು ಪಾದಗಳನ್ನು ಒಂದಾದ ಮೇಲೆ ಇನ್ನೊಂದು ತರಹ ರಬ್ಬರ್ ಚಪ್ಪಲಿಗೆ ತೂರಿಸಿದರು. ಆನಂತರ ಚುರುಕಾಗಿಯೇ ಓಡಾಡಿದ ಅವರು ತಮ್ಮ ಕೊಠಡಿಗೆ ಹೋಗಿ ಆ್ಯಪಲ್ ಕಂಪನಿ ತಯಾರಿಸಿರುವ ಐ ಪ್ಯಾಡ್ ಹಿಡಿದುಕೊಂಡು ಹೊರಬಂದರು.

"ಇದು ನನ್ನ ಅಳಿಯ ಕೊಟ್ಟಿದ್ದು. 'ಇದೆಲ್ಲ ನನಗ್ಯಾಕೆ' ಎಂದಿದ್ದಕ್ಕೆ ನನ್ನ ಮಗಳು 'ಇದರ ಮೂಲಕ ಇಡೀ ಜಗತ್ತು ನಿನ್ನ ಕೈಬೆರಳಿನ ಅಂಚಿನಲ್ಲಿರುತ್ತೆ' ಎಂದು ನನ್ನನ್ನು ಒಪ್ಪಿಸಿದಳು" ಎನ್ನುತ್ತಾ "ಮೊದಲು ನಿನ್ನ ಫೋಟೊ ತೆಗೆದುಕೊಳ್ಳುತ್ತೇನೆ ಇರು" ಎಂದು ನನ್ನ ಎರಡು ಫೋಟೋಗಳನ್ನು ಕ್ಲಿಕ್ ಮಾಡಿದರು. ಆಮೇಲೆ ನನ್ನ ಪಕ್ಕ ಕೂತು ತಮ್ಮ ಮಗಳ ಮನೆಯಲ್ಲಿ ತೆಗೆದಿದ್ದ ಫೋಟೋಗಳನ್ನು ತೋರಿಸಿದರು. ಅದರಲ್ಲಿ ಹೆಚ್ಚಿನವು ಅವರ ಮಗಳು ತನ್ನ ಮನೆ ಸುತ್ತ ಬೆಳೆದಿರುವ ಬಣ್ಣಬಣ್ಣದ ಹೂವಿನಗಿಡಗಳ ಚಿತ್ರಗಳಾಗಿದ್ದವು. ಜೊತೆಗೆ ಅವರ ಅಳಿಯ ತಮ್ಮ ಮನೆಯ ವಿಸ್ತಾರವಾದ ಹಿತ್ತಲಿನಲ್ಲಿ ಬೆಳೆದಿರುವ ವಿವಿಧ ಬಗೆಯ ತರಕಾರಿ ಗಿಡಗಳ ಫೋಟೋಗಳಿದ್ದವು. ಬೆರಳನ್ನು ಐಪ್ಯಾಡ್ ಮೇಲೆ ಹೊರಳಿಸುತ್ತಾ ಹೋದ ರಾಜಲಕ್ಷ್ಮಿ ಅವರಿಗೆ ಅದಿನ್ನೂ ರೂಢಿ ಆಗಿಲ್ಲ. "ನನಗೆ ಟ್ರೈನಿಂಗ್ ನೀಡಿದ ಮೊಮ್ಮಗಳು 'ಅಮ್ಮಮ್ಮಾ, ನೀನು ತುಂಬಾ ನಿಧಾನವಾಗಿ ಬೆರಳನ್ನು ಸರಿಸುತ್ತೀಯ. ಸ್ವಲ್ಪ ಫಾಸ್ಟ್ ಆಗಿ ಸರಿಸು' ಎಂದು ಹೇಳುತ್ತಿದ್ದಳು. ನೋಡು ಗೌರಿ, ಬೇರೆ ಫೋಟೊ ಇರೋ ಕಡೆ ಹೋಗುವುದು ಹೇಗೆ" ಎಂದು ಐಪ್ಯಾಡ್ ಅನ್ನು ನನ್ನ ಕೈಗಿಟ್ಟರು. ನಾನು ಅದನ್ನು ತೆರೆಯುವುದು ಹೇಗೆ ಎಂದು ತೋರಿಸಿ "ಮ್ಯಾಮ್, ಡೌಟ್ ಇದ್ದರೆ ಮೇಲಿರುವ ಈ ಚಿಹ್ನೆಯನ್ನು ಒತ್ತಿ" ಎಂದು ಸೂಚಿಸಿದೆ.

"ಹಾ, ಸಿಕ್ಕಿತು ನೋಡು. ಮೊನ್ನೆ ವೈಕುಂಠ ಏಕಾದಶಿ ಇತ್ತಲ್ಲಾ ಆಗ ಇಲ್ಲಿನ ದೇವಸ್ಥಾನಕ್ಕೆ ಹೋಗಿದ್ದೆ. ಅಲ್ಲಿ ತೆಗೆದ ಚಿತ್ರಗಳಿವು. ಇಲ್ಲಿ ನೋಡು, ನಾನು ಫೋಟೊ ತೆಗೆಯುತ್ತಿದ್ದಾಗ ಈ ಯುವ ಅರ್ಚಕ ನನ್ನನ್ನೇ ನೋಡುತ್ತಿದ್ದ. ಯಾರಾದರೂ ತನ್ನ ಫೋಟೋ ಕ್ಲಿಕ್ ಮಾಡಲಿ ಅಂತ ಅವನ ಆಸೆ. ನಾನು ಇದರಲ್ಲಿ ಅವನ ಫೋಟೋ ತೆಗೆದಾಗ ಅವನಿಗೆ ತುಂಬಾ ಸಂತೋಷವಾಯಿತು" ಎಂದು ಅರ್ಚಕನ ಫೋಟೋ ತೋರಿಸಿ ಜೋರಾಗಿ ನಕ್ಕರು. "ಆದರೆ ಏನಾಯಿತು ಗೊತ್ತಾ? ಬೆಳಗ್ಗಿನ ಜಾವ ದೇವಸ್ಥಾನಕ್ಕೆ ಹೋಗಿದ್ದರಿಂದ ನನ್ನ ಶ್ವಾಸಕೋಶದಲ್ಲಿ ಕಫ ಹೆಚ್ಚಾಗಿ ಈಗ ಕೆಮ್ಮು ಶುರುವಾಗಿದೆ" ಎನ್ನುತ್ತಾ ಮರುಕ್ಷಣವೇ ಬೇಸರಗೊಂಡರು.

ರಾಜಲಕ್ಷ್ಮಿ ಏಕಾಂಗಿಯಾಗಿರುವುದರಿಂದ ಮೈಸೂರಿನಲ್ಲಿರುವ ಸಾಕೇತನ ಹಲವಾರು ಹಳೇ ಸ್ನೇಹಿತರಲ್ಲಿ ಕೆಲವರಾದರೂ ಆಗೀಗ ಭೇಟಿ ನೀಡಿ ಅವರ ಸ್ಥಿತಿಗತಿ ಬಗ್ಗೆ ವಿಚಾರಿಸಿಕೊಳ್ಳುತ್ತಿದ್ದಾರೆಯೋ ಎಂದು ತಿಳಿದುಕೊಳ್ಳಲು "ಸಾಕೇತನ ಫ್ರೆಂಡ್ಸ್ ಯಾರಾದರೂ ನಿಮ್ಮ ಮನೆಗೆ ಭೇಟಿ ನೀಡುತ್ತಾರಾ?" ಎಂದು ಕೇಳಿದೆ.

"ಇಲ್ಲ, ಅವರ್‍ಯಾರೂ ಬರುವುದಿಲ್ಲ. ಅವರು ಬರುವುದೂ ನನಗೆ ಇಷ್ಟವಿಲ್ಲ. ಅವರನ್ನು ನೋಡಿದರೆ ನನಗೆ ಸಾಕೇತ್ ನೆನಪಾಗುತ್ತಾನೆ" ಎಂದು ಗದ್ಗದಿತರಾದರು. ತಮ್ಮ ಪ್ರೀತಿಯ ಮಗ ಸಾಕೇತ್ ಈಗಿಲ್ಲದಿರುವುದನ್ನು ನೆನಪಿಸಿಕೊಳ್ಳುತ್ತಿದ್ದಂತೆ ಅವರು ಭಾವುಕರಾದರು. ಆದರೆ ಅದನ್ನು ನನ್ನ ಮುಂದೆ ತೋರಿಸಿಕೊಳ್ಳಲು ಇಷ್ಟವಿಲ್ಲದೆ ತಮ್ಮ ಮುಷ್ಟಿಯನ್ನು ಬಿಗಿಯಾಗಿ ಹಿಡಿದು, ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡು ಕೆಲಕ್ಷಣ ಮೌನವಾದರು.


ಅವರ ದುಃಖವನ್ನು ಕಂಡು ನನಗೂ ಕಣ್ಣೀರು ಬಂತು. ಅವರು ಕಣ್ಣು ತೆರೆದು ನನ್ನತ್ತ ನೋಡಿದಾಗ "ನಾನು ನಿಮ್ಮನ್ನು ಭೇಟಿಯಾದರೆ ನಿಮಗೆ ಬೇಜಾರು ಆಗುತ್ತಾ?" ಎಂದು ಕೇಳಿದೆ. "ಇಲ್ಲ ಗೌರಿ. ನೀನು ನನ್ನ ಮನೆಗೆ ಬಂದರೆ ನನ್ನ ಮಗಳು ಬಂದಷ್ಟೇ ಖುಷಿ ಆಗುತ್ತೆ" ಎಂದು ನನ್ನನ್ನು ಅಪ್ಪಿಕೊಂಡರು.

ಅವರ ಗಮನವನ್ನು ಬೇರೆ ಕಡೆ ಸೆಳೆಯಲು ಅದೇ ಹಾಲ್‌ನಲ್ಲಿರುವ ಕೌಚ್ (ಚಿಕ್ಕ ಮಂಚ)ದ ಕಾಲು ಭಾಗದ ಹತ್ತಿರ ಇರುವ ಯಂತ್ರದತ್ತ ಕೈಬೆರಳು ತೋರುತ್ತಾ "ನಿಮ್ಮ ಚಿಕಿತ್ಸೆ ಹೇಗೆ ನಡೆಯುತ್ತಿದೆ?" ಎಂದೆ. ಯಾಕೆಂದರೆ ಹತ್ತು ಕೇಜಿಯಷ್ಟು ತೂಕವನ್ನು ಹೊಂದಿರುವ ಟ್ರ್ಯಾಕ್ಷನ್ ಯಂತ್ರ ಅದು ಎಂದು ನನಗೆ ಗೊತ್ತಿತ್ತು. "ಅದಾ, ಅದೇ ನನ್ನ ಬಂದಿಖಾನೆ. ದಿನಕ್ಕೆ ಹತ್ತು ಗಂಟೆಗಳ ಕಾಲ ನಾನು ಅದಕ್ಕೆ ಬಂಧಿ ಆಗಿರಬೇಕು. ಪಕ್ಕದ ಫ್ಲಾಟಿನಲ್ಲಿರುವವರು ಬಂದು ನನ್ನ ಕಾಲುಗಳನ್ನು ಅದಕ್ಕೆ ಕಟ್ಟಿ ಹೋಗುತ್ತಾರೆ. ಒಂದೆರಡು ಗಂಟೆಗಳ ನಂತರ ಬಂದು ನನ್ನನ್ನು ಬಿಡುಗಡೆ ಮಾಡುತ್ತಾರೆ. ಆಮೇಲೆ, ಒಂದು ಅರ್ಧ ಗಂಟೆಯ ನಂತರ ಮತ್ತೆ ಅದೇ ಕತೆ" ಎಂದರು.

"ಇತ್ತೀಚೆಗೆ ಏನಾಯಿತು ಗೊತ್ತಾ ಗೌರಿ. ನನ್ನ ಬೆನ್ನಿನಲ್ಲಿರುವ ಎರಡು ಮೂಳೆಗಳು ಪರಸ್ಪರ ಉಜ್ಜುತ್ತಿರುವುದರಿಂದ ಈ ಯಂತ್ರಕ್ಕೆ ಕಟ್ಟಿರುವ ಹತ್ತು ಕೇಜಿ ತೂಕವನ್ನು ಹನ್ನೆರಡು ಕೇಜಿಗಳಿಗೆ ಹೆಚ್ಚಿಸಿದರೆ ಹೇಗೆ ಎಂದು ಡಾಕ್ಟರ್ ಕೇಳಿದರು. ಆ ಡಾಕ್ಟರ್‌ಗೂ ನನ್ನಂತೆ ಹಾಸ್ಯಪ್ರಜ್ಞೆ ಇದೆ. ಅವರ ಪ್ರಶ್ನೆಗೆ ನಾನು ಹೇಳಿದೆ: 'ಡಾಕ್ಟರ್, ಜಿರಲೆಗೆ ಹೊಡೆದರೆ ಏನಾಗುತ್ತೆ ಗೊತ್ತಾ? ಅದರ ದೇಹ ಎರಡು ಭಾಗವಾದರೂ ಅದರ ಮೀಸೆ ಮಾತ್ರ ಇನ್ನೂ ಅಲ್ಲಾಡುತ್ತಿರುತ್ತದೆ. ನೀವು ನನ್ನ ಕಾಲುಗಳಿಗೆ ಹನ್ನೆರಡು ಕೇಜಿ ಹಾಕಿದರೆ ನನಗೂ ಜಿರಲೆಯ ಗತಿಯೇ ಆಗುತ್ತದೆ. ಆದರೆ ದುರದೃಷ್ಟವಶಾತ್ ನನಗೆ ಮೀಸೆ ಇಲ್ಲ ಆ ಸ್ಥಿತಿಯಲ್ಲೂ ಅವುಗಳನ್ನು ಅಲ್ಲಾಡಿಸುತ್ತಿರಲು" ಎಂದ ರಾಜಲಕ್ಷ್ಮಿ ಅವರು ಮತ್ತೆ ಜೋರಾಗಿ ನಕ್ಕರು.

ಅಷ್ಟು ಹೊತ್ತಿಗೆ ಅವರಲ್ಲಿರುವ ಅತಿಥಿ ಸತ್ಕಾರ ಭಾವ ಜಾಗರೂಕವಾಯಿತು. "ನಿನಗೆ ಏನು ಬೇಕು. ಕಾಫಿ, ಜ್ಯೂಸ್?" ಎಂದು ಕೇಳಿದರು.

ಅವರು ಕಾಫಿ ಮಾಡುವಷ್ಟು ತಾಪತ್ರಯ ತೆಗೆದುಕೊಳ್ಳಬಾರದೆಂದು ನಾನು "ಒಂದು ಕಪ್ ನೀರು ಕೊಡಿ, ಸಾಕು" ಎಂದೆ.



ಮಗ ಸಾಕೇತ್ ರಾಜನ್ ಜೊತೆಗೆ ರಾಜಲಕ್ಷ್ಮಿ

"ಸುಮ್ಮನಿರು. ಜ್ಯೂಸ್ ಕೊಡುತ್ತೇನೆ" ಎಂದ ಅವರು ಮತ್ತೆ ಎದ್ದು ನಿಂತರು. ಆದರೆ ಆಯತಪ್ಪಿ ಮುಂದಕ್ಕೆ ಬಾಗಿ ಎದುರಿನಲ್ಲೇ ಇದ್ದ ಟೀಪಾಯ್ ಅನ್ನು ಹಿಡಿದುಕೊಂಡರು. ಅಷ್ಟು ಹೊತ್ತಿಗೆ ನಾನೂ ಎದ್ದು ಅವರನ್ನು ಹಿಡಿದುಕೊಂಡಿದ್ದೆ. "ಪರವಾಗಿಲ್ಲ ಗೌರಿ. ಇದು ಕಾಮನ್. ಹೀಗೆ ಆಗುತ್ತಿರುತ್ತದೆ" ಎಂದರು. ಮತ್ತೆ ನೆಟ್ಟಗೆ ನಿಲ್ಲಲು ಒಂದಿಷ್ಟು ಸಮಯ ತೆಗೆದುಕೊಂಡರು. ಆಗಲೂ ಅವರ ಹಾಸ್ಯಪ್ರಜ್ಞೆ ಅವರಲ್ಲಿ ಮೂಡಿತು. ನೆಟ್ಟಗೆ ನಿಂತ ನಂತರ "ಇತ್ತೀಚೆಗೆ ಯಾವುದೋ ಕಾರಣಕ್ಕೆ ಆಸ್ಪತ್ರೆಗೆ ಹೋಗಬೇಕಾಯಿತು. ಡಾಕ್ಟರ್ ಮುಂದೆ ನಾನು ನಿಂತು ಮಾತನಾಡುತ್ತಿದ್ದಾಗ ನಾನು ಹಿಂದಕ್ಕೆ ವಾಲಿದೆ. ಅದನ್ನು ನೋಡಿ ಡಾಕ್ಟರ್ ಗಾಬರಿ ಗೊಂಡರು. ಆದರೆ ಅವರಿಗಿಂತ ಹೆಚ್ಚು ಗಾಬರಿ ಮತ್ತು ನಾಚಿಕೆ ಆದದ್ದು ನನಗೆ. ಅಷ್ಟೊಂದು ಜನರ, ಅದರಲ್ಲೂ ಪುರುಷರ, ಮುಂದೆ ನಾನು ಆಯ ತಪ್ಪಿದ್ದೆ ಎಂಬ ಕಾರಣಕ್ಕೆ" ಎಂದು ಮತ್ತೊಮ್ಮೆ ನಕ್ಕರು.



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಅವರು ಡೈನಿಂಗ್‌ರೂಮಿಗೆ ಹೋದಾಗ ಅವರನ್ನು ಹಿಂಬಾಲಿಸಿದ ನನ್ನ ಗಮನವನ್ನು ಡೈನಿಂಗ್ ಟೇಬಲ್ ಮೇಲಿದ್ದ ಒಂದು ವಸ್ತು ಸೆಳೆಯಿತು. ಅದನ್ನು ಕೈಗೆತ್ತಿಕೊಂಡ ನಾನು "ಇದೇನಿದು?" ಎಂದೆ.

"ನೋಡು. ನೀನು ಕಾಲಿಂಗ್‌ಬೆಲ್ ಒತ್ತುವ ಒಂದು ಕ್ಷಣದ ಮುಂಚೆ ಇದನ್ನು ಮಾಡಿ ಮುಗಿಸಿದೆ. ಇದನ್ನು ರಫ್ಲ್ ಸ್ಕಾರ್ಫ್ ಎಂದು ಕರೆಯುತ್ತಾರೆ. ಅಮೆರಿಕದಲ್ಲಿರುವಾಗ ಇದನ್ನು ಮಾಡಲು ಕಲಿತೆ. ಇದು ಅಮೆರಿಕದ ಯುವತಿಯರಲ್ಲಿ ಈಗ ದೊಡ್ಡ ಫ್ಯಾಷನ್. ಇದನ್ನು ಮಾಡುವ ನೂಲು ಸಿಗುವುದು ಅಲ್ಲಿಯೇ. ಪಕ್ಕದ ಫ್ಲಾಟಿನವರು ಬೇಕು ಎಂದಿದ್ದರಿಂದ ನಾನು ಇದನ್ನು ಅವರಿಗೆ ತಯಾರಿಸಿದ್ದೇನೆ" ಎನ್ನುತ್ತಾ ನನ್ನ ಕೈಗೆ ಒಂದು ಜ್ಯೂಸ್ ಪ್ಯಾಕನ್ನು ಇತ್ತರು.

ವಿವಿಧ ನೀಲಿ ಬಣ್ಣಗಳಿದ್ದ ನೂಲನ್ನು ಬಹಳ ಸೂಕ್ಷ್ಮವಾಗಿ ಸುರಳಿಯ ಆಕಾರದಲ್ಲಿ ಹೆಣೆದಿದ್ದ ಆ ಸ್ಕಾರ್ಫ್ ಮುಟ್ಟಲು ನೊರೆಯಷ್ಟು ಸೂಕ್ಷ್ಮವಾಗಿತ್ತಲ್ಲದೆ ನೋಡಲು ಅದ್ಭುತವಾಗಿತ್ತು. ಇದಕ್ಕಾಗಿ ಅವರು ಹಲವಾರು ದಿನಗಳನ್ನು ಕಳೆದಿರಬಹುದು ಎಂದು ಅಂದಾಜಿಸಿದ ನಾನು "ಇದನ್ನು ತಯಾರಿಸಲು ನಿಮಗೆ ಎಷ್ಟು ದಿನ ಹಿಡಿಯಿತು?" ಎಂದೆ.

"ನೀನೇ ಗೆಸ್ ಮಾಡು" ಎಂದರು.

"ಒಂದೆರಡು ತಿಂಗಳು?" ಎಂದೆ.

"ಇಲ್ಲ, ಆರು ಗಂಟೆ ಅಷ್ಟೇ" ಎಂದು ಹೆಮ್ಮೆಯಿಂದ ಹೇಳಿದರು. ಅವರ ಈ ದೈಹಿಕ ಸ್ಥಿತಿಯಲ್ಲೂ ಇಷ್ಟು ಅದ್ಭುತವಾದದ್ದನ್ನು ಅವರು ಕೇವಲ ಆರು ಗಂಟೆಯಲ್ಲಿ ತಯಾರಿಸಿದ್ದನ್ನು ಕೇಳಿ ನಿಜಕ್ಕೂ ಬೆರಗಾಯಿತು. ಆ ಸ್ಕಾರ್ಫ್ ಎಷ್ಟು ಚೆಂದ ಇತ್ತೆಂದರೆ ನಾನು ಮರುಕ್ಷಣವೂ ಯೋಚಿಸದೆ "ಇಂತಹ ಸ್ಕಾರ್ಫ್ ಒಂದನ್ನು ನನ್ನ ಮಗಳಿಗೆ ಹೆಣೆದು ಕೊಡುತ್ತೀರಾ?" ಎಂದು ಕೇಳಿದೆ.

"ಆದರೆ ಗೌರಿ, ಈ ನೂಲು ಇಲ್ಲಿ ಸಿಗೋದಿಲ್ಲವಲ್ಲಾ" ಎಂದರು.

"ಹೌದಲ್ಲವೇ? ಬಿಡಿ, ಪರವಾಗಿಲ್ಲ" ಎಂದೆ.

ನನ್ನ ಮುಖದಲ್ಲಿನ ಬೇಸರವನ್ನು ಗಮನಿಸಿದ ರಾಜಲಕ್ಷ್ಮಿ ಅವರು "ನಿನ್ನ ಮಗಳ ವಯಸ್ಸೆಷ್ಟು?" ಎಂದರು.

"ಒಂಭತ್ತು" ಎಂದೆ.

"ಒಂದು ನಿಮಿಷ ಇರು" ಎಂದ ಅವರು ತಮ್ಮ ಕೊಠಡಿಯನ್ನು ಪ್ರವೇಶಿಸಿದರು. ನಾನು ಡೈನಿಂಗ್ ಹಾಲಿನಲ್ಲೇ ಜ್ಯೂಸ್ ಹೀರುತ್ತಾ ನಿಂತಿದ್ದೆ. ಹೊರಗೆ

(ಮುಂದಿನ ಪುಟಕ್ಕೆ)

(ಹಿಂದಿನ ಪುಟದಿಂದ)

ಬಂದ ರಾಜಲಕ್ಷ್ಮಿ ಅವರು ಪಿಂಕ್ ಬಣ್ಣದ ರಫಲ್ ಸ್ಕಾರ್ಫ್ ಒಂದನ್ನು ನನ್ನ ಕೈಗಿಟ್ಟು "ನಾನು ಯಾತಕ್ಕಾದರೂ ಇರಲಿ ಎಂದು ಎರಡು ಸ್ಕಾರ್ಫ್‌ಗಳನ್ನು ಮಾಡಿ ಇಟ್ಟುಕೊಂಡಿದ್ದೆ. ಒಂದನ್ನು ನಿನಗೆ ಕೊಡುತ್ತಿದ್ದೇನೆ. ಇದನ್ನು ನಿನ್ನ ಮಗಳಿಗೆ ನನ್ನ ಪ್ರೀತಿಯೊಂದಿಗೆ ಕೊಡು" ಎಂದರು. ಅವರ ಮಮತೆಯ ಮುಂದೆ ನಾನು ನಿರುತ್ತರಳಾದೆ.


ರಾಜಲಕ್ಷ್ಮಿ ಅವರು ಕೊಟ್ಟ ಸ್ಕಾರ್ಫ್ ತೊಟ್ಟಿರುವ ಇಶಾ


ರಾಜಲಕ್ಷ್ಮಿ ಅವರ ಇನ್ನೊಂದು ಹವ್ಯಾಸ ಕವುದಿಗಳನ್ನು ತಯಾರಿಸುವುದು. ಕಳೆದ ಬಾರಿ ಅವರ ಮನೆಗೆ ಭೇಟಿ ಕೊಟ್ಟಾಗ ಅವರು ತಮ್ಮ ಕೈಯಿಂದ ತಯಾರಿಸಿದ್ದ ಚಿಕ್ಕ ಕವುದಿಯನ್ನು ನೋಡಿದ್ದೆ. ಆ ಕವುದಿ ನಮ್ಮ ಗ್ರಾಮೀಣ ಮಹಿಳೆಯರು ಹಳೆಬಟ್ಟೆಗಳಿಂದ ತಯಾರಿಸುವ ಕವುದಿಗಳಿಗಿಂತ ಭಿನ್ನ. ಅವರು ಈ ಕಲೆಯನ್ನು ಕಲಿತದ್ದು ಒಮ್ಮೆ ಅಮೆರಿಕದಲ್ಲಿರುವ ತಮ್ಮ ಮಗಳ ಮನೆಗೆ ಭೇಟಿ ಕೊಟ್ಟಾಗ. ಅಮೆರಿಕದಲ್ಲಿ ಹಲವಾರು ಶತಮಾನಗಳಿಂದ ಕವುದಿ ತಯಾರಿಸುವುದು ಕಲಾವಂತಿಕೆಯ ಅಭಿವ್ಯಕ್ತಿಯಾಗಿ ರೂಪಗೊಂಡಿದೆ. ಈಗ ಅಮೆರಿಕದ ವಿಶೇಷ ಅಂಗಡಿಗಳಲ್ಲಿ ಕವುದಿಯನ್ನು ತಯಾರಿಸುವ ವಸ್ತುಗಳು ಸಿಗುತ್ತವೆ. ಅವುಗಳನ್ನು ಅಂದವಾಗಿ ಸಿದ್ಧಮಾಡಿದಷ್ಟು ಅದಕ್ಕೆ ಬೆಲೆ ಹೆಚ್ಚು. ರಾಜಲಕ್ಷ್ಮಿ ಅವರ ಮಗಳು ಕವುದಿ ತಯಾರಿಸುವ ಕಲೆಯಲ್ಲಿ ಪರಿಣತಿ ಸಾಧಿಸಿದ್ದಾರೆ. ಮಗಳ ಮಾರ್ಗದರ್ಶನದಲ್ಲಿ ರಾಜಲಕ್ಷ್ಮಿ ಅವರೂ ಒಂದಿಷ್ಟು ಕವುದಿ ಕಲೆಯನ್ನು ಕಲಿತಿದ್ದಾರೆ.

"ಇತ್ತೀಚೆಗೆ ಹೊಸ ಕವುದಿಯನ್ನು ತಯಾರಿಸಿದ್ದೀರಾ?" ಎಂದೆ. "ಇಲ್ಲ, ಆದರೆ ನಾನು ಈ ಹಿಂದೆ ತಯಾರಿಸಿದ್ದ ಕವುದಿಯನ್ನು ತೋರಿಸುತ್ತೇನೆ, ಬಾ" ಎಂದು ಇನ್ನೊಂದು ಕೊಠಡಿಗೆ ಕರೆದುಕೊಂಡು ಹೋದರು. ಆ ಕೊಠಡಿಯಲ್ಲಿ ಡಬಲ್ ಮಂಚದ ಮೇಲೆ ಒಂದು ಕವುದಿಯನ್ನು ಹರಡಲಾಗಿತ್ತು. ಅದು ರಾಜಲಕ್ಷ್ಮಿ ಅವರು ತಮ್ಮ ಮಗಳೊಂದಿಗೆ ಸಿದ್ಧ ಮಾಡಿದ್ದ ಕವುದಿ. ಅದೂ ಕೂಡ ತುಂಬಾ ಚೆನ್ನಾಗಿತ್ತು. ಮಂಚದ ಮೇಲೆ ರಾಜಲಕ್ಷ್ಮಿ ಅವರನ್ನು ಕೂಡಿಸಿ ಒಂದೆರಡು ಫೋಟೋಗಳನ್ನು ತೆಗೆದುಕೊಂಡೆ.

ಮತ್ತೆ ನಾವಿಬ್ಬರೂ ಹಾಲ್‌ಗೆ ಹಿಂದಿರುಗಿದೆವು.

ರಾಜಲಕ್ಷ್ಮಿ ಅವರಿಗೆ ಜನಿಸಿದ್ದು ಮೂವರು ಮಕ್ಕಳು. ಮೊದಲು ಜನಿಸಿದ ಮಗಳು ಶೋಭಾ ಈಗ ಅಮೆರಿಕದಲ್ಲಿ ತನ್ನ ಗಂಡ ಮತ್ತು ಮಕ್ಕಳೊಂದಿಗೆ ಜೀವನ ನಡೆಸುತ್ತಿದ್ದಾರೆ. ಆಕೆಯ ನಂತರ ಜನಿಸಿದ ಅವರ ಮೊದಲ ಮಗ ಹದಿವರ್ಷದವನಾಗುವ ಮುನ್ನವೇ ಅಪಘಾತದಲ್ಲಿ ತೀರಿಕೊಂಡ. ಅವರ ಕೊನೆಯ ಮಗನೇ ಸಾಕೇತ್.

ಮಗಳು ಮದುವೆಯಾದಳು, ಮೊದಲ ಮಗ ಸಾವನ್ನಪ್ಪಿದ, ಮೂರನೆ ಮಗ ಮಾವೋವಾದಿಗಳೊಂದಿಗೆ ಜೊತೆಗೂಡಿ ಮನೆಯನ್ನೇ ತೊರೆದ. ಇದೆಲ್ಲವಾದ ನಂತರ ಮಾಜಿ ಸೈನ್ಯಾಧಿಕಾರಿ ಆಗಿದ್ದ ಅವರ ಪತಿಯೂ ತೀರಿಕೊಂಡರು. ರಾಜಲಕ್ಷ್ಮಿ ನಿಜಕ್ಕೂ ಏಕಾಂಗಿ ಆದರು. ತಮ್ಮ ಪ್ರೀತಿಯ ಮಗ ಸಾಕೇತ್ ಇವತ್ತಲ್ಲ ನಾಳೆ ಮನೆಗೆ ವಾಪಸ್ ಬರುತ್ತಾನೆಂದು ತಮ್ಮ ಹಳೆಯ ಮನೆಯಲ್ಲಿ ಹತ್ತಾರು ವರ್ಷಗಳನ್ನು ಏಕಾಂತದಲ್ಲಿ ದೂಡಿದರು. ಕೊನೆಗೂ ಆ ದೊಡ್ಡ ಮನೆಯನ್ನು ನಿಭಾಯಿಸುವುದು ಅವರಿಂದ ಮುಂದುವರಿಸಲಾಗಲಿಲ್ಲ. 2005ರ ಜನವರಿ 31ರಂದು ಅವರು ಈಗ ವಾಸಿಸುವ ಫ್ಲಾಟ್‌ಗೆ ತಮ್ಮ ವಾಸ್ತವ್ಯವನ್ನು ವರ್ಗಾಯಿಸಿದರು. ಆದಾದ ಆರು ದಿನಗಳ ನಂತರ ಮೆಣಸಿನಹಾಡ್ಯದಲ್ಲಿ ಸಾಕೇತ್ ಎನ್‌ಕೌಂಟರ್‌ನಲ್ಲಿ ಹತರಾದರು.



ಸೋಫಾ ಮೇಲೆ ಕೂತು ಮಾತು ಮುಂದುವರೆಸಿದ ರಾಜಲಕ್ಷ್ಮಿ ಅವರು "ಒಮ್ಮೆ ಜೋಲಿ ತಪ್ಪಿ ನೆಲಕ್ಕೆ ಬಿದ್ದಿದ್ದರಿಂದ ಈಗ ನನ್ನ ಬಲಗೈ ಅರ್ಧದಷ್ಟು ನಿಷ್ಕ್ರಿಯವಾಗಿದೆ" ಎಂದರು. ಅವರ ಅಸಹಾಯಕ ಸ್ಥಿತಿಯನ್ನು ನೋಡಿ ನನಗೆ ಒಂದು ಕ್ಷಣ ಮಿತ್ರ ಸಾಕೇತ್ ಬಗ್ಗೆ ಕೋಪ ಉಕ್ಕಿತು. ಹೆತ್ತ ತಾಯಿಯನ್ನು ಇಂತಹ ಸ್ಥಿತಿಯಲ್ಲಿ ಸಾಕೇತ್ ಬಿಟ್ಟು ಹೋಗಿದ್ದರ ಬಗ್ಗೆ ಜಿಗುಪ್ಸೆ ಆಯಿತು. ಆಗ ನಾನು "ಸಾಕೇತ್ ಅಂತಹ ಜೀನಿಯಸ್ ಆಗಿರದೆ ಸಾಮಾನ್ಯ ವ್ಯಕ್ತಿ ಆಗಿದ್ದರೆ ಇವತ್ತು ನಿಮ್ಮೊಂದಿಗೆ ಇರುತ್ತಿದ್ದರು" ಎಂದೆ.

ಆಗ ಆ ಮಹಾ ತಾಯಿ ಏನಂದರು ಗೊತ್ತಾ?

"ಸಾಕೇತ್ ಜೀನಿಯಸ್ ಮಾತ್ರವಲ್ಲ, ಸೂಕ್ಷ್ಮ ಸಂವೇದನೆಯ ವ್ಯಕ್ತಿಯೂ ಆಗಿದ್ದ. ಎಷ್ಟರಮಟ್ಟಿಗೆಂದರೆ ಒಂದು ದಿನ ಮನೆ ಕೆಲಸದವಳು ಬಾರದಿದ್ದರೆ ಆತನೇ ಮನೆಯ ಕಸ ಗುಡಿಸಿ, ಸಾರಿಸುತ್ತಿದ್ದ. ನನಗೆ ಚಪಾತಿ ಮಾಡಲು ಅಷ್ಟು ಚೆನ್ನಾಗಿ ಬರುತ್ತಿರಲಿಲ್ಲ, ಅವನೇ ನನಗೆ ಸಹಾಯ ಮಾಡುತ್ತಿದ್ದ. ಹಿ ವಾಸ್ ಅ ವೆರಿ ಗುಡ್ ಬಾಯ್. ನಮ್ಮ ಸಮಾಜದ ಶೋಷಿತರನ್ನು ಮೇಲಕ್ಕೇರಿಸುವ ಇಚ್ಛೆ ಅವನದ್ದಾಗಿತ್ತು. ಸಮಾಜೋದ್ಧಾರ ಅವನ ಗುರಿಯಾಗಿತ್ತು. ತನ್ನ ನಂಬಿಕೆಗೆ ಆತ ಬದುಕಿದನಲ್ಲದೆ ಅದಕ್ಕಾಗಿ ತನ್ನ ಪ್ರಾಣವನ್ನೇ ತೆತ್ತ. ಅದರ ಬಗ್ಗೆ ನನಗೆ ಯಾವ ಪಶ್ಚಾತ್ತಾಪವೂ ಇಲ್ಲ."

ಹೆತ್ತ ಮಕ್ಕಳನ್ನು ಕಳೆದುಕೊಳ್ಳುವುದಕ್ಕಿಂತ ದೊಡ್ಡ ನೋವು ಇನ್ನೊಂದಿಲ್ಲ ಎಂಬುದು ನಮ್ಮೆಲ್ಲರಿಗೂ ಗೊತ್ತು. ಆದರೂ ತಾನು ಹೆತ್ತ ಮಗನ ಸಾವಿನ ಬಗ್ಗೆ ಈ ತಾಯಿ ಅದೆಷ್ಟು ದಿಟ್ಟತನ ಹೊಂದಿದ್ದಾರೆ!

ಸಾಕೇತ್ ನೆನಪು ಅವರನ್ನು ಮತ್ತೆ ಭಾವುಕರನ್ನಾಗಿಸಿತು. ಮತ್ತೆ ಮುಷ್ಟಿಯನ್ನು ಬಿಗಿಯಾಗಿ ಹಿಡಿದು ತಮ್ಮ ಕಣ್ಣೀರನ್ನು ತಡೆದುಕೊಂಡರು.


ನಾನು ಪ್ರಸ್ತುತ ವಿದ್ಯಮಾನಗಳ ಬಗ್ಗೆ ಅವರಿಗೆ ಒಂದಿಷ್ಟು ಹೇಳಿದೆ. "ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದನಂತರ ನಾವು ಒಂದಿಷ್ಟು ಜನ ಸೇರಿ ಸರ್ಕಾರಕ್ಕೂ ಮತ್ತು ಮಾವೋವಾದಿಗಳಿಗೂ ಶಾಂತಿ ಕಾಪಾಡಬೇಕೆಂದು ಮನವಿ ಮಾಡಿದ್ದೆವು. ಅದಕ್ಕೆ ಸ್ಪಂದಿಸಿರುವ ಹಲವು ನಕ್ಸಲ್ ನಾಯಕರು ಪ್ರಜಾಸತ್ತಾತ್ಮಕ ಹೋರಾಟಕ್ಕೆ ತಾವು ಸಜ್ಜು ಎಂದಿದ್ದಾರೆ" ಎಂದೆ.

"ಅದು ತುಂಬಾ ಒಳ್ಳೆಯ ಬೆಳವಣಿಗೆ. ಹಿಂಸೆ ಮತ್ತು ಪ್ರತಿಹಿಂಸೆಯನ್ನು ತಡೆಯಬೇಕು" ಎಂದು ರಾಜಲಕ್ಷ್ಮಿ ಅವರು ಪ್ರತಿಕ್ರಿಯಿಸಿದರು.

"ಮ್ಯಾಮ್, ನಿಮಗೆ ಈಗ ವಯಸ್ಸೆಷ್ಟು?" ಎಂದು ಕೇಳಿದೆ. ಅವರು ಉತ್ತರಿಸದೇ ನನ್ನ ಮುಖವನ್ನು ದಿಟ್ಟಿಸಿದರು.


"ನನಗೆ ಗೊತ್ತು ಮಹಿಳೆಯರ ವಯಸ್ಸು ಕೇಳುವುದು ಗುಡ್ ಮ್ಯಾನರ್ಸ್ ಅಲ್ಲ ಅಂತ. ಆದರೆ ನಿಮ್ಮ ಆರೋಗ್ಯದ ದೃಷ್ಟಿಯಿಂದ ಕೇಳುತ್ತಿದ್ದೇನೆ ಅಷ್ಟೇ" ಎಂದೆ.

"ನನಗೀಗ 82. ನಾನು ಈ ಹಿಂದೆ ಯಾರಿಗಾದರೂ ನನ್ನ ವಯಸ್ಸನ್ನು ಹೇಳಿದ ನಂತರದ ಎರಡು ದಿನ ನನ್ನ ಆರೋಗ್ಯ ಕೆಡುತ್ತಿತ್ತು. ಆಗ ಕೆಲವರು ಬೇರೆಯವರ ಕೆಟ್ಟ ದೃಷ್ಟಿ ಬೀಳುತ್ತದೆ ಎಂದಿದ್ದಕ್ಕೆ, ನನ್ನ ವಯಸ್ಸನ್ನು ಹೇಳುವುದನ್ನು ನಿಲ್ಲಿಸಿದೆ. ಆದರೀಗ ಹೇಳುತ್ತೇನೆ. ಯಾಕೆ ಗೊತ್ತಾ? ನಾನು ನಿತ್ಯ ಹೋಗುತ್ತಿದ್ದ ದೇವಸ್ಥಾನಕ್ಕೆ ಸುನಂದ ಎಂಬುವವರು ಬರುತ್ತಿದ್ದರು. ಅವರು ಹಲವಾರು ದಿನ ಪದೇಪದೇ ನನ್ನ ವಯಸ್ಸನ್ನು ಕೇಳಿದರು. ನಾನು ಅವರಿಗೆ ಹೇಳಲಿಲ್ಲ. ಒಂದು ದಿನ ದೇವಸ್ಥಾನಕ್ಕೆ ಹೋದಾಗ ಸುನಂದ ಅವರ ಮನೆಗೆ ದೇವಸ್ಥಾನದಿಂದ ಊಟವನ್ನು ತೆಗೆದುಕೊಂಡು ಹೋಗಲಾಗುತ್ತಿತ್ತು. 'ಯಾಕೆ, ಏನಾಗಿದೆ?' ಎಂದು ಕೇಳಿದಾಗ ಯಾರೋ ಒಬ್ಬರು 'ನಿಮಗೆ ಗೊತ್ತಾಗಲಿಲ್ಲವಾ? ಸುನಂದ ನಿನ್ನೆ ತೀರಿಕೊಂಡರು' ಎಂದರು. ಅದನ್ನು ಕೇಳಿ ನನಗೆ ಶಾಕ್ ಆಯಿತು.



ಅವರ ಪ್ರಶ್ನೆಗೆ ಉತ್ತರಿಸಿದ್ದರೆ ನನಗೇನೂ ನಷ್ಟವಾಗುತ್ತಿರಲಿಲ್ಲ ಅನ್ನಿಸಿತು. ಇನ್ನೊಮ್ಮೆ, ಮತ್ತೊಬ್ಬರೂ ಒಂದೆರಡು ಬಾರಿ ನನ್ನ ವಯಸ್ಸನ್ನು ಕೇಳಿದರು. ಅವರಿಗೂ ನಾನು ಉತ್ತರಿಸಿರಲಿಲ್ಲ. ಮನೆಗೆ ಹಿಂದಿರುಗಿದ ನಂತರ ಸುನಂದ ಅವರ ನೆನಪಾಯಿತು. ಅಯ್ಯೋ, ಇವರಿಗೂ ನಾನು ಉತ್ತರಿಸಲಿಲ್ಲವಾದ್ದರಿಂದ ಇವರಿಗೂ ಸುನಂದಾಗೆ ಆದದ್ದು ಆಗುವುದು ಬೇಡ ಎಂದು ಇಡೀ ರಾತ್ರಿ ದೇವರಲ್ಲಿ ಪ್ರಾರ್ಥಿಸಿದೆ. ಮಾರನೆ ಬೆಳಗ್ಗೆ ದೇವಸ್ಥಾನಕ್ಕೆ ಹೋದಾಗ ಅವರೂ ಕಾಣಿಸಲಿಲ್ಲ. ನನಗೆ ಗಾಬರಿ ಆಯಿತು. ಯಾರನ್ನೋ ಕೇಳಿದಾಗ 'ಅವರು ಚೆನ್ನೈಗೆ ಹೋದರು' ಎಂದು ಉತ್ತರಿಸಿದಾಗ ನನಗೆ ನಿರಾಳವಾಯಿತು" ಎಂದರು ರಾಜಲಕ್ಷ್ಮಿ.

ರಾಜಲಕ್ಷ್ಮಿ ಅವರು ಅದೆಷ್ಟು ಅಮಾಯಕ ಮತ್ತು ಅಸಹಾಯಕರೆಂಬುದನ್ನು ಅವರು ನನ್ನ ಮುಂದಿಟ್ಟ ಕೋರಿಕೆ ತೋರುತ್ತದೆ. "ಗೌರಿ ನನಗೊಂದು ಸಹಾಯ ಮಾಡುತ್ತೀಯ. ನನ್ನ ಮನೆಯಲ್ಲಿರುವ ಲ್ಯಾಂಡ್ ಫೋನ್‌ಗೆ ಒಂದು ಕಾಲರ್ ಐಡೆಂಟಿಟಿ ಬೇಕು. ಯಾಕೆಂದರೆ ಹಲವು ಬಾರಿ ಯಾರಾದರು ಫೋನ್ ಮಾಡಿದರೆ ನನಗೆ ಕೇಳಿಸುವುದಿಲ್ಲ. ಆದ್ದರಿಂದ ಯಾರು ಫೋನ್ ಮಾಡಿದ್ದರು ಅಂತಲೂ ನನಗೆ ಗೊತ್ತಾಗುವುದಿಲ್ಲ. ಜೊತೆಗೆ ನನ್ನ ಮನೆಯಲ್ಲಿರುವ ಫೋನ್ ಹಳೆಯದಾದ್ದರಿಂದ ಅದರಲ್ಲಿ ಲೌಡ್‌ಸ್ಪೀಕರ್ ಇಲ್ಲ. ನನ್ನ ಕಿವಿ ಮಂದ ಆಗಿರೋದ್ರಿಂದ ಅದರಲ್ಲಿ ನನಗೆ ಸರಿಯಾಗಿ ಮಾತನಾಡಲೂ ಆಗುವುದಿಲ್ಲ. ಒಮ್ಮೆ ಕಾಲರ್



ಐಡೆಂಟಿಟಿ ಇರುವ ಫೋನ್ ಬೇಕೆಂದು ಟೆಲಿಕಾಮ್ ಇಲಾಖೆಗೆ ಹೋಗಿ ಪತ್ರ ಕೊಟ್ಟಿದ್ದೆ. ಆದರೆ ಆ ಇಲಾಖೆಯಲ್ಲಿದ್ದ ಮಹಿಳೆಗೆ ನನ್ನ ಮುಖ ಇಷ್ಟವಾಗಲಿಲ್ಲವೋ ಏನೋ 'ಅಂತಹ ಇನ್‌ಸ್ಟ್ರುಮೆಂಟ್ ಬಂದಾಗ ನಿಮಗೆ ತಿಳಿಸುತ್ತೇವೆ' ಎಂದು ಹೇಳಿ ನನ್ನನ್ನು ಸಾಗಹಾಕಿದಳು. ಅದಕ್ಕೆ ಕಾಲರ್ ಐಡೆಂಟಿಟಿ ಮತ್ತು ಲೌಡ್ ಸ್ಪೀಕರ್ ಇರುವಂತಹ ಫೋನ್ ಸಿಗುವಂತೆ ನನಗೆ ಸಹಾಯ ಮಾಡುತ್ತೀಯ?" ಎಂದು ಕೇಳಿದರು.

ಆಗ ನಾನು "ಮೈಸೂರಿನಲ್ಲಿರುವ ನಮ್ಮ ಮಿತ್ರರೊಬ್ಬರಿಗೆ ಹೇಳುತ್ತೇನೆ. ಅವರು ನಿಮಗೆ ಸಹಾಯ ಮಾಡುತ್ತಾರೆ" ಎಂದು ಹೇಳಿ ಒಂದು ಚೀಟಿಯಲ್ಲಿ ನಮ್ಮ ಪ್ರೊ. ರಾಮದಾಸ್ ಅವರ ಅಳಿಯ ಓಂಕಾರನ ಹೆಸರು ಮತ್ತು ಮೊಬೈಲ್ ಫೋನ್ ನಂಬರ್ ಅನ್ನು ಬರೆದು ಕೊಟ್ಟೆ. ರಾಜಲಕ್ಷ್ಮಿ ಅವರು ಆ ಚೀಟಿಯನ್ನು ತಮ್ಮ ಕಣ್ಣುಗಳಿಗೆ ಒತ್ತಿಕೊಂಡು ಎತ್ತಿಟ್ಟರು. (ಅನಂತರ ಇದರ ಬಗ್ಗೆ ರಾಮದಾಸ್ ಮಗಳು ಸ್ನೇಹ ಮತ್ತು ಆಕೆಯ ಪತಿ ಓಂಕಾರ್‌ಗೆ ತಿಳಿಸಿದೆ. ಅವರಿಬ್ಬರೂ ರಾಜಲಕ್ಷ್ಮಿ ಅವರಿಗೆ ನೆರವಾಗಲು ಸಂತೋಷದಿಂದಲೇ ಒಪ್ಪಿಕೊಂಡರು).

ರಾಜಲಕ್ಷ್ಮಿ ಅವರು ಈ ವಯಸ್ಸಿನಲ್ಲೂ ತಮ್ಮ ಅಡುಗೆಯನ್ನು ತಾವೇ ಮಾಡಿಕೊಳ್ಳುತ್ತಾರೆ. ಮನೆ ಕೆಲಸದವಳು ಇದ್ದರೂ ರಾಜಲಕ್ಷ್ಮಿ ಅವರೇ ತಮ್ಮ ಮನೆಯ ಧೂಳನ್ನು ಕೊಡವಿ ಸ್ವಚ್ಛವಾಗಿ ಇಟ್ಟುಕೊಂಡಿದ್ದಾರೆ. ತಮ್ಮ ಸಮಯವನ್ನು ಪೂಜೆಯಲ್ಲಿ, ಹೆಣಿಗೆಯಲ್ಲಿ ಕಳೆಯುತ್ತಾರೆ. ಏಕಾಂತ ಅವರನ್ನು ಕಿತ್ತುತಿನ್ನುತ್ತಿದೆ ಆದರೆ ಅವರೇ ಹೇಳುವಂತೆ "ದೇವರು ನನಗೆ ಕೊಟ್ಟಿದ್ದು ಇದು. ಅವನಿಗೆ ಬೇಕೆಂದಾಗ ನನ್ನನ್ನೂ ತನ್ನಲ್ಲಿಗೆ ಕರೆಸಿಕೊಳ್ಳುತ್ತಾನೆ. ಅಲ್ಲಿಯವರೆಗೂ ನಾನು ಕಾಯಬೇಕಷ್ಟೇ."

ಅವರೊಂದಿಗೆ ಒಂದಿಷ್ಟು ಸಮಯ ಕಳೆದು ಅಲ್ಲಿಂದ ಹೊರಟೆ. ನನ್ನನ್ನು ಬೀಳ್ಕೊಡುವಾಗ ರಾಜಲಕ್ಷ್ಮಿ ಅವರು ಮತ್ತೊಮ್ಮೆ ನನ್ನನ್ನು ಅಪ್ಪಿಕೊಂಡು "ಸಾರಿ ಗೌರಿ, ನೀನು ಬಂದಕೂಡಲೇ ನಾನು ನಿನ್ನ ಗುರುತು ಹಿಡಿಯಲಿಲ್ಲ" ಎಂದರು. "ಪರವಾಗಿಲ್ಲ ಬಿಡಿ, ಮ್ಯಾಮ್. ನಿಮಗೆ ಏನಾದರು ಬೇಕಿದ್ದರೆ ದಯವಿಟ್ಟು ನನಗೆ ಫೋನ್ ಮಾಡಿ. ನಿಮ್ಮ ಆರೋಗ್ಯ ನೋಡಿಕೊಳ್ಳಿ. ಮುಂದಿನ ಬಾರಿ ಮೈಸೂರಿಗೆ ಬಂದಾಗ ನಿಮ್ಮನ್ನು ಭೇಟಿ ಆಗುತ್ತೇನೆ" ಎಂದು ಹೇಳಿ ಹೊರಟೆ...


●

ಬಿಲ್ಡರ್ ಪೂರ್ವಂಕರರ ಅಟ್ಟಹಾಸ
ಕಾಂಗ್ರೆಸ್ ನಾಯಕಿಯ ಆತ್ಮಹತ್ಯಾ ಯತ್ನ?

ಮುಖ್ಯಮಂತ್ರಿ ಗೃಹಕಚೇರಿಯಲ್ಲಾದ ...ತ್ಯಾ ಯತ್ನದ ನಿಗೂಢ ಪ್ರಕರಣವೊಂದು ...ಗಳ ಪರದೆಯ ಮೇಲೆ ಮೂಡುತ್ತಿದ್ದಂತೆಯೇ ...ಮುವಾಗಿದ್ದೇಕೆ?


...ಪ್ರಶ್ನೆ ಮತ್ತು ಹಕೀಕತ್ತು ಅಗೆದಷ್ಟೂ ...ಢವಾಗುತ್ತಿರುವುದೇ ಈ ಪ್ರಕರಣದ ವೈಶಿಷ್ಟ್ಯ. ...ವ ಕಾಂಗ್ರೆಸ್ ಪಕ್ಷದ ರಾಜ್ಯಮಟ್ಟದ ಪದಾಧಿ...ರಿಯೊಬ್ಬಳು ಮುಖ್ಯಮಂತ್ರಿಗಳ ಎದುರೇ ...ಹತ್ಯೆಗೆ ಯತ್ನಿಸಿದರೆಂದು ಸುದ್ದಿ ಭಿತ್ತರಿಸಿದ ...ಸ್ ಚಾನಲ್ಲುಗಳು ಇದ್ದಕ್ಕಿದ್ದಂತೆ ಅದನ್ನು ...ಚ್ಚಿಟ್ಟಿದ್ದಾದರೂ ಏಕೆ? ಬಲಿಷ್ಠ ಬಿಲ್ಡರ್‌ಗಳಾದ ...ಪೂರ್ವಂಕರ ಮತ್ತು ಆಶಿಷ್ ಪೂರ್ವಂಕರರೆಂಬ ...ಲ್ ಎಸ್ಟೇಟ್ ದೊರೆಗಳ ದೌರ್ಜನ್ಯಕ್ಕೀಡಾದ ಕಾಂಗ್ರೆಸ್ ...ಯಕಿಯೊಬ್ಬಳಿಗೆ ಆಕೆಯದ್ದೇ ಸರ್ಕಾರದಿಂದ ರಕ್ಷಣೆ ...ರದಷ್ಟು ಅಸಹಾಯಕತೆಯೇ?

...ಸದ್ಯ ಶಿವಾನಂದ ಸರ್ಕಲ್ ಪಕ್ಕದ ಮಲ್ಲಿಗೆ ಆಸ್ಪತ್ರೆಯ ... ನಿಗಾ ವಾರ್ಡಿನಲ್ಲಿ ಪ್ರಜ್ಞೆಯಿಲ್ಲದೆ ಮಲಗಿದ್ದು ಇಲ್ಲಿಗೆ ...ನದಿಂದ ನಿಗೂಢವಾಗಿ ನಾಪತ್ತೆಯಾಗಿರುವ ಆಕೆಯ ...ಸು ವಿಜಯಲಕ್ಷ್ಮಿ ಕಂಚುಗಾರ. ರಾಜ್ಯ ಕೆಪಿಸಿಸಿಯ ...ಕಾರಿ ಸಮಿತಿಯ ಸದಸ್ಯೆ ಮತ್ತು ಅಹಿಂದದ ರಾಜ್ಯ


ಮಲ್ಲಿಗೆ ಆಸ್ಪತ್ರೆಯಲ್ಲಿ ವಿಜಯಲಕ್ಷ್ಮಿ

ಆಶಿಷ್ ಪೂರ್ವಂಕರ ಹೆಸರು ಕೇಳಿಬಂದಿದ್ದೇ ಈ ಹಂತದಲ್ಲಿ. ಮಲ್ಲಿಗೆ ಆಸ್ಪತ್ರೆಯಲ್ಲಿ ಶವಸದೃಶವಾಗಿ ಬಿದ್ದುಕೊಂಡಿದ್ದ ವಿಜಯಲಕ್ಷ್ಮಿಯ ದುರ್ಗತಿಯ ಮೂಲ ಕೆದಕುತ್ತಾ ಹೋದಂತೆಲ್ಲ ಹಳೇ ಮದ್ರಾಸ್ ರಸ್ತೆಯ ಬೈಯಪ್ಪನಹಳ್ಳಿಯ ಭರ್ಜರಿ ನಿವೇಶನವೊಂದರ ಸುತ್ತಣದ ಕರಾಳಕತೆಯೊಂದು ಅನಾವರಣಗೊಳ್ಳುತ್ತದೆ. ಅದು ಬೈಯಪ್ಪನಹಳ್ಳಿ ಸರ್ವೇ ನಂಬರ್ 4/1ರ ಏಳಕರೆಯ ಸೊತ್ತಿಗಾಗಿ ಪೂರ್ವಂಕರ ಖದೀಮರು ನಡೆಸುತ್ತಿರುವ ಗೂಂಡಾಗಿರಿ. ಕಳೆದೊಂದು ತಿಂಗಳಿನಿಂದ ಕಾಂಗ್ರೆಸ್ ನಾಯಕಿ ವಿಜಯಲಕ್ಷ್ಮಿ

ಐನೂರು ಕೋಟಿಯ ಸೊತ್ತು ಇಂಥಾದ್ದೊಂದು ನಿವೇಶನದ ಸುತ್ತ ಪ್ರತಿನಿತ್ಯ ನಡೆಯುತ್ತಿರುವ ವಿದ್ಯಮಾನಗಳೇನೂ ಕಮ್ಮಿಯಲ್ಲ. ಈ ನಿವೇಶನದ ಆಸುಪಾಸು ಯಾರೇ ಅಪರಿಚಿತ ವ್ಯಕ್ತಿ ಸುಳಿದಾಡಿದರೂ ಅಲ್ಲಿರುವ ಸೆಕ್ಯೂರಿಟಿ ಗಾರ್ಡ್‌ಗಳು ಮತ್ತು ರೌಡಿಗಳು ಅಂಥವರ ವೀಡಿಯೋ ಹಿಡಿಯುತ್ತಾರೆ. ಇನ್ನೂ ವಿಚಿತ್ರವೆಂದರೆ ಸದರಿ ನಿವೇಶನ ಒಳಭಾಗದಲ್ಲಿ ಮೂರು ಕುಟುಂಬಗಳು ವಾಸಿಸುತ್ತವೆ. ಅವರ ದನಕರುಗಳನ್ನೂ ಸೇರಿದಂತೆ ನೂರಕ್ಕೂ ಅಧಿಕ ಸೆಕ್ಯೂರಿಟಿ ಗಾರ್ಡುಗಳು ಅಲ್ಲಿರುವ ಎಲ್ಲರ ಮೇಲೆ ಅಹೋರಾತ್ರಿ ಸರ್ಪಗಾವಲು ಹಾಕಿದ್ದಾರೆ.



ಸಿಎಂ ಸಿದ್ದು

ಇದಿಷ್ಟೇ ಅಲ್ಲದೆ ಸೆಕ್ಯೂರಿಟಿ ಗಾರ್ಡುಗಳ ಮಧ್ಯೆ ಬಂದೂಕುಧಾರಿಗಳೂ ಇದ್ದಾರೆ. ಒಂದಷ್ಟು ಮಂದಿ ರೌಡಿಗಳೂ ಇದೇ ಸೈಟಿನ ಒಳಗೆ ಅಡ್ಡೆ ಹಾಕಿದ್ದಾರೆ. ಇದರರ್ಥ ಈಗಾಗಲೇ ಸೈಟಿನಲ್ಲಿ ವಾಸಿಸುತ್ತಿದ್ದವರನ್ನು ಪೂರ್ವಂಕರರ ಪಡೆ ಸುತ್ತುವರಿದಿದೆ. ಬಹುಶಃ ಕಾಂಗ್ರೆಸ್ ನಾಯಕಿ ವಿಜಯಲಕ್ಷ್ಮಿ ಹೋರಾಡುತ್ತಿದ್ದದ್ದು

ಹರ್ಪರನ್ನೂ ಕಂಡು ಪೂರ್ವಂಕರರ ದಬ್ಬಾಳಿಕೆಯನ್ನು ವಿವರಿಸಿದ್ದರು. ಆದರೆ ಎಸಿಪಿ ವಿಜಯ್ ಕುಮಾರ್ ಮತ್ತು ಬೈಯಪ್ಪನಹಳ್ಳಿ ಇನ್ಸ್‌ಪೆಕ್ಟರ್ ಮಾತ್ರ ಪೂರ್ವಂಕರರ ಪ್ರಭಾವ ಮತ್ತು ತಾಕತ್ತಿನ ವಿರುದ್ಧ ನೇರವಾಗೇ ತಮ್ಮ ಅಸಹಾಯಕತೆ ವ್ಯಕ್ತಪಡಿಸಿದ್ದರಂತೆ.

ಇದೆಲ್ಲದರಿಂದ ಮನನೊಂದ ವಿಜಯಲಕ್ಷ್ಮಿ ಸಿದ್ದು ಸರ್ಕಾರದ ಅನೇಕ ಪ್ರಮುಖರನ್ನು ಕಂಡು ತಮ್ಮ ನೆರವಿಗೆ ಬರುವಂತೆ ಕಣ್ಣೀರಿಟ್ಟಿದ್ದರಂತೆ. ಅಂತಿಮವಾಗಿ ಜನವರಿ 12ರ ರಾತ್ರಿ ವಿಜಯಲಕ್ಷ್ಮಿ ನೇರವಾಗೇ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗೃಹ ಕಚೇರಿಗೆ ಬಂದಿದ್ದಾರೆ. ಅಲ್ಲಿ ಏನಾಯಿತೆಂಬುದು ಮಾತ್ರ ಇವತ್ತಿಗೂ ನಿಗೂಢ. ಬಹುಶಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಪೂರ್ವಂಕರರ ವಿರುದ್ಧದ ತಮ್ಮ ಅಸಹಾಯಕತೆಯನ್ನು ಹೇಳಿಕೊಂಡರಾ? ಅಥವಾ ನಿರೀಕ್ಷಿಸಿದ ನೆರವು ಸಿಗದ ಕಾರಣ ವಿಜಯಲಕ್ಷ್ಮಿಯೇ ಹತಾಶರಾದರಾ, ಗೊತ್ತಿಲ್ಲ.

ಹಾಗೆ ಮುಖ್ಯಮಂತ್ರಿ ಮನೆಯಿಂದ ಶಿವಾನಂದ ಸರ್ಕಲ್ಲಿನ ತಮ್ಮ ಹೋಟೆಲ್ ಪ್ರಣಾಮ್‌ನ ರೂಮಿಗೆ ಬಂದು ವಿಜಯ



ವಿಜಯಲಕ್ಷ್ಮಿ ಕಂಚುಗಾರ


ಆಶಿಷ್ ಪೂರ್ವಂಕರ

...ಹಿಳಾ ಘಟಕದ ಅಧ್ಯಕ್ಷೆ. ನಿನ್ನೆಮೊನ್ನೆಯ ತನಕ ರಾಜ್ಯ ...ಬರ ಸಂಘದ ಉಪಾಧ್ಯಕ್ಷೆಯಾಗಿದ್ದ ವಿಜಯಲಕ್ಷ್ಮಿ ...ಗ್ರೆಸ್ಸಿಗಾಗಲಿ, ಮೀಡಿಯಾಗಳಿಗಾಗಲಿ ಅಪರಿಚಿತರೇನಲ್ಲ. ...ಲತಃ ಶಿಕಾರಿಪುರದವರಾದ ವಿಜಯಲಕ್ಷ್ಮಿ ...ರಿಪುರದಲ್ಲಿ ಕಾಮಗಾರಿಗಳ ಹೆಸರಲ್ಲಿ ಯಡ್ಡಿ ಗ್ಯಾಂಗ್ ...ಸಿದ ಭ್ರಷ್ಟಾಚಾರದ ವಿರುದ್ಧ ...ಗಳೂರಿನತನಕ ಪಾದಯಾತ್ರೆ ...ಮು ನಡೆಸಿದ ಹೋರಾಟವನ್ನು ...ಕರಿನ್ನೂ ಮರೆತಿಲ್ಲ.

...ಮುಖ್ಯಮಂತ್ರಿ ಸಿದ್ದರಾಮಯ್ಯನವರ ...ಮುಷ್ಠೆ ರಾಜ್ಯ ಅಹಿಂದದ ಮಹಿಳಾ ...ಟಕದ ಅಧ್ಯಕ್ಷೆ ವಿಜಯಲಕ್ಷ್ಮಿ ಆತ್ಮ...ಹತ್ಯೆಗೆ ಯತ್ನಿಸಿದರೆಂದೂ, ಶಿಕಾರಿಪುರ ... ಮೊನ್ನೆ ಜನವರಿ 12ರಂದು ರಾತ್ರಿ ...ಏಕಿ ಮುಖ್ಯಮಂತ್ರಿಗಳೆದುರೇ ವಿಷ ...ಡದರೆಂದು ಸುದ್ದಿ ಹಬ್ಬಿದ್ದು ...ಸೋಮವಾರ ಬೆಳಗ್ಗೆ. ಹಾಗೇ ಪ್ರಜ್ಞೆ ...ಇಲ್ಲದೆ ಮಲ್ಲಿಗೆ ಆಸ್ಪತ್ರೆಗೆ ಹೊತ್ತು ...ದ ವಿಜಯಲಕ್ಷ್ಮಿಗೆ ಬುಧವಾರವಾದರೂ ಸುಧಾರಿಸಲಿಲ್ಲ. ...ಮಲ್ಲಿಗೆ ಆಸ್ಪತ್ರೆಯ ಸಿಬ್ಬಂದಿಯಾಗಲಿ, ಪೊಲೀಸರಾಗಲಿ, ...ಯ ಸಂಬಂಧಿಕರಾಗಲಿ ಏನನ್ನೂ ಬಾಯಿ ಬಿಡುತ್ತಿರಲಿಲ್ಲ. ...ರೆ ಕೆಲ ನ್ಯೂಸ್ ಚಾನಲ್ಲುಗಳು ಮಾತ್ರ ವಿಜಯಲಕ್ಷ್ಮಿ ...ಮಹತ್ಯೆಗೆ ಯತ್ನಿಸಿದರೆಂದು ಸುದ್ದಿ ಬಿತ್ತರಿಸಿ ಮರು...ಗೆಯಲ್ಲೇ ಅದನ್ನು ಮುಚ್ಚಿಟ್ಟಿದ್ದಾದರೂ ಏಕೆ?

...ಕುಖ್ಯಾತ ಬಿಲ್ಡರ್‌ಗಳಾದ ರವಿ ಪೂರ್ವಂಕರ ಮತ್ತು


ರವಿ ಪೂರ್ವಂಕರ

ಹೋರಾಡುತ್ತಿದ್ದದ್ದು ಈ ಸೊತ್ತಿಗಾಗಿಯೆ?

ಬೈಯಪ್ಪನಹಳ್ಳಿ ಪೊಲೀಸ್ ಠಾಣೆಯ ಮೂಲಗಳೇ ಹೇಳುವಂತೆ ವಿಜಯಲಕ್ಷ್ಮಿ ಹಾಗೂ ಆಕೆಯ ಬೆಂಬಲಿಗರು ಪೂರ್ವಂಕರ ಬಿಲ್ಡರ್ ದೊರೆಗಳ ವಿರುದ್ಧ ಈಗಾಗಲೇ ಏಳು ದೂರುಗಳನ್ನು ಕೊಟ್ಟಿದ್ದಾರಾದರೂ ಅಂತಹ ಯಾವೊಂದು ದೂರನ್ನೂ ಅಧಿಕೃತವಾಗಿ ದಾಖಲಿಸಿಲ್ಲ. ಸದ್ಯ ಬೈಯಪ್ಪನಹಳ್ಳಿಯ ಏಳೆಕರೆ ನಿವೇಶನದ ಕಾಂಪೌಂಡ್ ಗೋಡೆಗಳು ಮತ್ತು ಗೇಟಿನ ಮುಂದೆ **This property belongs to PPL. Trespassers will be prosecuted** ಎಂಬ ಬೋರ್ಡೊಂದು ಎದ್ದು ಕಾಣುತ್ತದೆ. ಹಾಗೆ ಬರೆಸಿದ ಬೋರ್ಡಿನಲ್ಲಿದ್ದ ಇನ್ನಾವುದೋ ಹೆಸರಿಗೆ ಬಣ್ಣ ಬಳಿದು ಅದರ ಮೇಲೆ PPL ಎಂದು ಬರೆದದ್ದು ಕೊಂಚ ಪ್ರಶ್ನಾರ್ಥಕವಾಗೇ ಕಣ್ಣು ಕುಕ್ಕುತ್ತದೆ.

ಇದರರ್ಥ ಬೇರೆ ಯಾರದೋ ನಿವೇಶನವನ್ನು ಆಕ್ರಮಿಸಿಕೊಂಡ PPL ಅರ್ಥಾತ್ ಪೂರ್ವಂಕರ ಪ್ರಾಜೆಕ್ಟ್ ಲಿಮಿಟೆಡ್ ಕಂಪೆನಿ ಮೊದಲೇ ಬರೆಸಿದ್ದ ಬೋರ್ಡಿಗೆ ಬಣ್ಣ ಬಳಿದು ಅದರ ಮೇಲೆ ತನ್ನ ಹೆಸರು ಬರೆಸಿದೆ!

ಬೈಯಪ್ಪನಹಳ್ಳಿ ಏರಿಯಾ ಅಂದರೆ ಇಂದಿರಾನಗರ ದಿಂದಾಚೆಯ ಏಳೆಕರೆಯೆಂದರೆ ಅದು ಕಮ್ಮಿಯೆಂದರೂ

ಸದರಿ ನಿವೇಶನದೊಳಗಿದ್ದ ಬಡವರ ಪರವಾಗಿ ಅಥವಾ ಇದೇ ನಿವೇಶನದ ಅಸಲೀ ಮಾಲಿಕರನ್ನು ಬೆಂಬಲಿಸಿ. ಶಿವಮೊಗ್ಗ ಮೂಲದ ಗುತ್ತಿಗೆದಾರನೊಬ್ಬ ಯಾವುದೋ ಕಾಲಕ್ಕೆ ಖರೀದಿಸಿಟ್ಟುಕೊಂಡಿದ್ದ ಬೈಯಪ್ಪನಹಳ್ಳಿಯ ಏಳೆಕರೆ ನಿವೇಶನವನ್ನು ನಕಲಿ ದಾಖಲೆಗಳ ಮೂಲಕ ಆಕ್ರಮಿಸಿಕೊಂಡ ಪೂರ್ವಂಕರ ಧಣಿಗಳಾದ ರವಿ ಪೂರ್ವಂಕರ ಮತ್ತು ಆಶಿಷ್ ಪೂರ್ವಂಕರರ ಗೂಂಡಾಗಿರಿ ವಿರುದ್ಧದ ಯಾವೊಂದು ದೂರೂ ಬೈಯಪ್ಪನಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿಲ್ಲ ಏಕೆ?

ಹಾಗೊಮ್ಮೆ ಸೊತ್ತು ಪೂರ್ವಂಕರರದ್ದೇ ಆಗಿದ್ದರೆ ಒಳಗಿದ್ದವರನ್ನು ಕಾನೂನುಬದ್ಧವಾಗೇ ಹೊರಸಾಗಿಸಬಹುದಿತ್ತು. ಹಾಗಿಲ್ಲದೆ ನೂರಕ್ಕೂ ಅಧಿಕ ಸೆಕ್ಯೂರಿಟಿ ಗಾರ್ಡ್‌ಗಳ ಸರ್ಪಗಾವಲಿಟ್ಟು ದಿಗ್ಬಂಧನ ವಿಧಿಸುವ ಪ್ರಶ್ನೆಯೇ ಇರಲಿಲ್ಲ.

ವಿಜಯಲಕ್ಷ್ಮಿ ಆಪ್ತವಲಯದ ಪ್ರಕಾರ ಕಳೆದೊಂದು ತಿಂಗಳಿನಿಂದ ಪೂರ್ವಂಕರ ಛೂಬಿಟ್ಟ ರೌಡಿ ಪಡೆಯೊಂದು ಎಲ್ಲೆಂದರಲ್ಲಿ ವಿಜಯಲಕ್ಷ್ಮಿಯನ್ನು ಹಿಂಬಾಲಿಸುತ್ತಿತ್ತು. ಒಂದೆರಡು ಸಾರಿ ವಿಜಯಲಕ್ಷ್ಮಿಯ ಮೇಲೆ ದಾಳಿಗೂ ಯತ್ನಿಸಲಾಗಿತ್ತು. ತನಗೆ ಪೂರ್ವಂಕರರಿಂದ ಪ್ರಾಣ ಬೆದರಿಕೆ ಇದೆ ರಕ್ಷಣೆ ಕೊಡಿ ಎಂದು ವಿಜಯಲಕ್ಷ್ಮಿ ಪದೇಪದೇ ಪೊಲೀಸ್ ಕಮೀಷನರ್ ಔರಾದ್‌ಕರ್‌ರನ್ನು ಕಂಡು ಮನವಿ ಸಲ್ಲಿಸಿದ್ದರು. ಬೆಂಗಳೂರು ಪೂರ್ವ ಡಿಸಿಪಿ


ನಿವೇಶನಕ್ಕೆ ನುಗ್ಗಿದ ಪೂರ್ವಂಕರರ ರೌಡಿ ಪಡೆ

ಲಕ್ಷ್ಮಿ ನಿದ್ದೆ ಬರಲೆಂದು ನಿದ್ದೆ ಮಾತ್ರೆ ಸೇವಿಸಿದರಾ? ಪ್ರತಿನಿತ್ಯ ಸೇವಿಸುತ್ತಿದ್ದ ನಿದ್ದೆ ಮಾತ್ರೆ ಅವತ್ತು ಕೊಂಚ ಅಧಿಕ ಪ್ರಮಾಣದಲ್ಲಿತ್ತಾ? ಅದು ಆತ್ಮಹತ್ಯೆ ಯತ್ನವಾ ಅಥವಾ ಅಚಾತುರ್ಯದ ಪರಿಣಾಮವಾ ಬಲ್ಲವರಿಲ್ಲ. ವಿಜಯಲಕ್ಷ್ಮಿ ಮಲ್ಲಿಗೆ ಆಸ್ಪತ್ರೆಯ ತೀವ್ರ ನಿಗಾ ಘಟಕದ ಬಂಧಿಯಾಗಿದ್ದು ಈಗ ನಾಪತ್ತೆಯಾಗಿದ್ದಾರೆ. ತಾನೇ ಖುದ್ದಾಗಿ ಬಾಯಿಬಿಡದೆ ವಿಜಯಲಕ್ಷ್ಮಿಯ ಹಕೀಕತ್ತು ಯಾರಿಗಾದರೂ ಹೇಗೆ ಗೊತ್ತಾಗಲು ಕಾರಣ?

ಒಂದಂತೂ ಸತ್ಯ. ಬಿಲ್ಡರ್ ಪೂರ್ವಂಕರರ ದೌರ್ಜನ್ಯ ತಾಳಲಾರದೆ ವಿಜಯಲಕ್ಷ್ಮಿ ಆತ್ಮಹತ್ಯೆಗೆ ಯತ್ನಿಸಿದ್ದರ ಹಿಂದೆ ಇನ್ನೆಂಥದ್ದೋ ಕಾರಣ ಅಡಗಿದೆ. ಏನದು? ಆಳುವ ಕಾಂಗ್ರೆಸ್ ಪಕ್ಷದ ನಾಯಕಿಯೊಬ್ಬಳಿಗೆ ಬಾಯಿಬಿಟ್ಟು ಹೇಳಲಾರದ ಯಾವ ಸಂದಿಗ್ಧ ಎದುರಾಗಿರಬಹುದು? ತನ್ನ ಬೆಂಬಲಿಗಳೊಬ್ಬಳ ರಕ್ಷಣೆಗೂ ಬರಲಾರದಷ್ಟು ಅಸಹಾಯಕತೆಯನ್ನು ಮುಖ್ಯಮಂತ್ರಿಗೆ ತಂದಿಟ್ಟ ಪೂರ್ವಂಕರರ ಅಟ್ಟಹಾಸದ ಅಸಲಿ ಕತೆಯೇನು?

● ರಾ. ಸೋಮನಾಥ್

ಪೂರ್ವಂಕರನ ರಕ್ಷಣೆಗಿರುವ ಕೇಂದ್ರ ಮಂತ್ರಿ ಯಾರು?

ಪೂರ್ವಂಕರರ ದೌರ್ಜನ್ಯದ ವಿರುದ್ಧ ಕ್ರಮ ...ಗೊಳ್ಳುವಲ್ಲಿ ರಾಜ್ಯ ಸರ್ಕಾರವೇ ಅಸಹಾಯಕತೆ ...ವ್ಯಕ್ತಪಡಿಸಿದ್ದು ವಿಜಯಲಕ್ಷ್ಮಿಯ ಹತಾಶೆಗೆ ...ಕಾರಣವಾಯಿತೆ?



ಬೈಯಪ್ಪನಹಳ್ಳಿಯ ಏಳೆಕರೆ ಸೊತ್ತು


ಸದ್ಯ ಕಾಂಗ್ರೆಸ್ ವಲಯದಲ್ಲಿ ಕೇಳಿಬರುತ್ತಿರುವುದು ಕೂಡ ಪೊಲೀಸ್ ವ್ಯವಸ್ಥೆಯ ವೈಫಲ್ಯದ ವಿರುದ್ಧವೇ. ಕಳೆದೊಂದು ತಿಂಗಳಿಂದ ವಿಜಯಲಕ್ಷ್ಮಿ ಮೂರು ಬಾರಿ ಹಲವಾರು ಸಚಿವರನ್ನು ಭೇಟಿಯಾಗಿದ್ದಾರೆ. ಸದ್ಯ ಮಾರುಕಟ್ಟೆ ರೇಟಿನ ಪ್ರಕಾರವೇ ಐನೂರು ಕೋಟಿ ರೂಪಾಯಿಯ ಸೊತ್ತಾದ ಬೈಯಪ್ಪನಹಳ್ಳಿಯ ಸೊತ್ತಿನಲ್ಲಿ ಭರ್ಜರಿ ಕಾಂಪ್ಲೆಕ್ಸು ಮತ್ತೊಂದು ಅಪಾರ್ಟ್‌ಮೆಂಟ್ ನಿರ್ಮಿಸಿದರೆ ಅದೇ ಸಾವಿರ ಕೋಟಿಯ ಉತ್ಪತ್ತಿಯಾಗುತ್ತದೆ. ಅಂಥಾ ರಾಹುಲ್ ಗಾಂಧಿಗೇ ಓಡಾಡಲು ಖಾಸಗಿ ವಿಮಾನ ಕಲ್ಪಿಸಿದ ಪೂರ್ವಂಕರರಿಗೆ ಮುಖ್ಯಮಂತ್ರಿ, ಗೃಹಮಂತ್ರಿ ಯಾವ ಲೆಕ್ಕ?

ಕೇಂದ್ರದ ಕಾಂಗ್ರೆಸ್ ನಾಯಕರೊಬ್ಬರನ್ನು ಬೆನ್ನಿಗಿಟ್ಟುಕೊಂಡೇ ಕಂಡೋರ ಸೊತ್ತಿಗೆ ಕೈಹಾಕಿರುವ ಪೂರ್ವಂಕರರ ಬೆನ್ನಿಗಿರುವ ಆ ಪ್ರಭಾವಿ ರಾಜಕಾರಣಿ ಯಾರು? ದುರಂತವೆಂದರೆ ಪೂರ್ವಂಕರರ ಜಾಹೀರಾತಿನ ಮುಲಾಜಿಗೆ ಬಿದ್ದ ಟೀವಿ ಮತ್ತು ಪತ್ರಿಕೆಗಳ್ಯಾವೂ ಈ ಬಗ್ಗೆ ಚಕಾರವೆತ್ತುತ್ತಿಲ್ಲ. ●









ಅಕ್ಕಿನೇನಿ ನಾಗೇಶ್ವರರಾವ್ ಕಾಲದ ಕೈವಶ

ಈಗ ಸಿನಿಮಾ ನೋಡುವ ಯಾರಿಗೂ ಕೂಡ ಒಂದು ಪಿತಾಮಹ ತಲೆಮಾರಿನ ಸಿನಿಮಾ ಹೀರೋಗಳ ಬಗ್ಗೆ ಗೊತ್ತೇ ಇರುತ್ತದೆ. ಕನ್ನಡದ ರಾಜಕುಮಾರ್, ತಮಿಳಿನ ಎಂ.ಜಿ.ರಾಮಚಂದ್ರನ್, ಶಿವಾಜಿ ಗಣೇಶನ್, ಹಿಂದಿಯ ರಾಜಕಪೂರ್, ದೇವಾನಂದ್, ತೆಲುಗಿನ ಎನ್.ಟಿ.ರಾಮರಾವ್ ಹಾಗೂ ಅಕ್ಕಿನೇನಿ ನಾಗೇಶ್ವರ ರಾವ್. ಅಲ್ಲದೇ ಈ ನಟರ ಪೈಕಿ ದಕ್ಷಿಣದ ನಟರಂತೂ ಮೊದಮೊದಲಿಗೆ ಒಂದೇ ಬಗೆಯ ಪೌರಾಣಿಕ, ಐತಿಹಾಸಿಕ ಪಾತ್ರಗಳಲ್ಲಿ ಕಾಣಿಸಿಕೊಂಡಂಥವರು. ಅವರು ಧರಿಸುತ್ತಿದ್ದ ಉಡುಗೆ-ತೊಡುಗೆಗಳಿಂದ ಹಿಡಿದು, ಹೇರ್ ಸ್ಟೈಲ್, ನಡಿಗೆಯಿಂದ ಹಿಡಿದು ಹೆಚ್ಚುಕಡಿಮೆ ಒಂದೇ ಥರ ಕಾಣಿಸಿಕೊಳ್ಳುತ್ತಿದ್ದಂಥವರು. ಅವರು ಮಾಡುತ್ತಿದ್ದ ಪಾತ್ರಗಳು, ಆಗಿನ ಕಾಲದ ನಿರ್ದೇಶಕರ ಏಕತರಹದ ಅಭಿರುಚಿ, ರಂಗಭೂಮಿಯ ನಾಟಕೀಯತೆಯ ಹಿನ್ನೆಲೆಯೂ ಕೂಡ ಮೇಲ್ನೋಟಕ್ಕೆ ಹೀಗನ್ನಿಸಲು ಕಾರಣವಿರಬಹುದು. ಈ ಜಮಾನದ ಒಬ್ಬೊಬ್ಬನೇ ನಟ ತನ್ನ ಸರದಿ ಬಂದಾಗ ತೀರಿಕೊಳ್ಳುತ್ತಾ ಹೋದಾಗ ಒಂದು ಸರಪಳಿಯ ಒಂದೊಂದೇ ಕೊಂಡಿ ಕಳಚಿಕೊಳ್ಳುತ್ತಾ ಹೋದಂತಾಯಿತು. ಆ ಮೂಲಕ ಆಯಾಯ ಪ್ರಾದೇಶಿಕ ಸಿನಿರಸಿಕರ ಪಾಲಿಗೆ ಒಂದೊಂದು ಶಕೆ ಮುಗಿದಂತೆ ಭಾಸವಾಗಿದ್ದರೂ ಅಚ್ಚರಿ ಪಡುವಂತಿಲ್ಲ.

ಹೀಗೆ ಹೆಚ್ಚೂಕಮ್ಮಿ ಈ ಸರಪಳಿಯ ಕೊನೆಯ ಕೊಂಡಿಯಂತಿದ್ದ ಅಕ್ಕಿನೇನಿ ನಾಗೇಶ್ವರರಾವ್ ತಮ್ಮ 90ನೇ ವಯಸ್ಸಿನಲ್ಲಿ ಹೈದರಾಬಾದಿನಲ್ಲಿ ತೀರಿಕೊಂಡಿದ್ದಾರೆ. ಆಂಧ್ರ ಪ್ರದೇಶದ ರಾಮಾಪುರಂ ಎಂಬಲ್ಲಿ ಬಡ ರೈತ ಕುಟುಂಬವೊಂದರಲ್ಲಿ ಜನಿಸಿದ ನಾಗೇಶ್ವರ ರಾವ್ ತಮ್ಮ ಕುಟುಂಬದ ಬಡತನದ ದೆಸೆಯಿಂದಾಗಿ ಪ್ರೈಮರಿ ಶಾಲೆಯ ನಂತರದಲ್ಲಿ ಓದು ಮುಂದುವರೆಸಲಾಗಲಿಲ್ಲ. ಶಾಲೆಯ ನಂಟು ಕಡಿದುಕೊಂಡ ನಂತರ ತನ್ನ ಹೆತ್ತವರೊಡನೆ ಹೊಲಗದ್ದೆಯ ಕೆಲಸಗಳಲ್ಲಿ ಭಾಗಿಯಾಗ ಬಯಸದ ನಾಗೇಶ್ವರ ರಾವ್ ಆಯ್ಕೆ ಮಾಡಿಕೊಂಡಿದ್ದು ರಂಗಭೂಮಿ.

ಆಗಿನ ಕಾಲದ ಹೆಣ್ಣುಮಕ್ಕಳು ನಾಟಕಗಳಲ್ಲಿ ನಟಿಸಲು ಮುಂದೆ ಬರುತ್ತಿರಲಿಲ್ಲವಾದ್ದರಿಂದ ಹುಡುಗರೇ ಹೆಣ್ಣುಮಕ್ಕಳ ಪಾತ್ರಗಳನ್ನೂ ಮಾಡಬೇಕಾಗಿತ್ತು. ನಾಗೇಶ್ವರರಾವ್ ಕೂಡ ನಾಟಕಗಳಲ್ಲಿ ಮೊದಲಿಗೆ ಹೆಣ್ಣುಮಕ್ಕಳ ಪಾತ್ರಗಳನ್ನೇ ಮಾಡಿದ್ದು. ಸ್ತ್ರೀ ಸೂಕ್ಷ್ಮಗಳನ್ನು ಕರಗತ ಮಾಡಿಕೊಂಡು ಥೇಟ್ ಹೆಣ್ಣುಮಗಳೇ ಎಂದು ನಂಬುವಷ್ಟರಮಟ್ಟಿಗೆ ನಟಿಸಿಬಿಡುತ್ತಿದ್ದ ನಾಗೇಶ್ವರರಾವ್ ಜನಪ್ರಿಯರಾಗಲು ಹೆಚ್ಚು ಕಾಲ ಬೇಕಿರಲಿಲ್ಲ.

ಈ ಜನಪ್ರಿಯತೆ ಅವರ 17ನೇ ವಯಸ್ಸಿನಲ್ಲಿ 'ಧರ್ಮಪತ್ನಿ' ಎನ್ನುವ ಸಿನಿಮಾ ಮೂಲಕ ಸಿನಿಮಾ ನಟನನ್ನಾಗಿಸಿತು. ಪಿ.ಪುಲ್ಲಯ್ಯ ಎಂಬುವವರು ನಿರ್ದೇಶಿಸಿದ ಈ ಚಿತ್ರದಲ್ಲಿ ಪ್ರಸಿದ್ಧ ನಟಿಯರಾದ ಪಿ.ಭಾನುಮತಿ ಹಾಗೂ ಪಿ. ಶಾಂತಕುಮಾರಿ ಕೂಡ ಪಾತ್ರ ಮಾಡಿದ್ದರು. ತಮ್ಮ ಸಿನಿಮಾ ಬದುಕನ್ನು ಹೀಗೇ ಆರಂಭಿಸಿದ ನಾಗೇಶ್ವರರಾವ್ ನಂತರದ ದಿನಗಳಲ್ಲಿ ವೈವಿಧ್ಯಮಯ ಪಾತ್ರಗಳಲ್ಲಿ ನಟಿಸುತ್ತಾ ಹೋದರು. ಕುಡಿತವನ್ನೇ ಬದುಕಾಗಿಸಿಕೊಂಡ ಭಗ್ನ ಪ್ರೇಮಿಯ ಪಾತ್ರವಿರಲಿ, ಉನ್ನತಾದರ್ಶಗಳನ್ನು ನಂಬಿಕೊಂಡ ಸಂತನ ಪಾತ್ರವಿರಲಿ, ಕಾಲೇಜು ತರುಣನಿಂದ ಹಿಡಿದು ಶಿಸ್ತಿನ ಸರ್ಕಾರಿ ಅಧಿಕಾರಿವರೆಗಿನ ಯಾವುದೇ ತರಹದ ಪಾತ್ರವಿರಲಿ, ಇವರಿಗೆ ಒಗ್ಗಿಬಿಡುತ್ತಿದ್ದವು ಅಥವಾ ಇವರೇ ತಮ್ಮನ್ನು ತಾವು ಒಗ್ಗಿಸಿಕೊಳ್ಳುತ್ತಿದ್ದರು ಎಂದೇ ಹೇಳಬಹುದು.

ಇನ್ನು ಇವರು ಮಾಡಿದ ಪೌರಾಣಿಕ ಪಾತ್ರಗಳ ಬಗ್ಗೆ ವಿಶ್ಲೇಷಿಸುವುದೇ ಒಂದು ಮಜಾ. 'ಮಾಯಾ ಬಜಾರ್' ಚಿತ್ರದಲ್ಲಿ ಇವರು ನಿರ್ವಹಿಸಿದ ಅಭಿಮನ್ಯುವಿನ ಪಾತ್ರದಾಳಕ್ಕೆ ಇಳಿಯುತ್ತಿದ್ದಂತೆಯೇ ಕಲಿಯುವ ದ್ವಾಪರವಾಗದಿರದು ಅಲ್ಲವೇ? ಹಾಗೇನೆ, 'ಚೆಂಚು ಲಕ್ಷ್ಮಿ'ಯ ಮಹಾವಿಷ್ಣು, 'ಭೂಕೈಲಾಸದ' ನಾರದ, 'ಶ್ರೀ ಕೃಷ್ಣಾರ್ಜುನ ಯುದ್ಧಂ'ನ ಅರ್ಜುನನ ಪಾತ್ರಗಳು ಜನಮಾನಸದಲ್ಲಿ ಯಾವತ್ತಿಗೂ ಚಿರಸ್ಥಾಯಿ.

ತೆಲುಗು ಚಿತ್ರರಂಗದ 'ಟ್ರ್ಯಾಜಿಡಿ ಕಿಂಗ್' ಎಂದೇ ಹೆಸರಾಗಿದ್ದ ಅಕ್ಕಿನೇನಿ ನಾಗೇಶ್ವರರಾವ್ ರೊಮ್ಯಾಂಟಿಕ್ ಪಾತ್ರಗಳಿಗೆ ಜೀವ ತುಂಬುವುದರಲ್ಲಿ ನಿಷ್ಣಾತರಾಗಿದ್ದಂಥವರು. 'ಲೈಲಾ ಮಜ್ನು', 'ಅನಾರ್ಕಲಿ', 'ಪ್ರೇಂ ನಗರ್', 'ಪ್ರೇಮಾಭಿಷೇಕಂ' ಹಾಗೂ 'ಮೇಘ ಸಂದೇಶಂ' ಚಿತ್ರಗಳಲ್ಲಿನ ಇವರ ತಲ್ಲೀನತೆ ಹಾಗೂ ಆ ತಲ್ಲೀನತೆಯ ಪರಿಣಾಮದಿಂದಾಗಿ ಪ್ರೇಕ್ಷಕರ ಮನಸಿನಲ್ಲಿ ಉಂಟಾದ ರಸಾನುಭವ ನಿಜಕ್ಕೂ ರೋಮಾಂಚಕ. ದಾಸರಿ ನಾರಾಯಣರಾವ್ ನಿರ್ದೇಶಿಸಿದ 'ಪ್ರೇಮಾಭಿಷೇಕಂ' ತೆಲುಗು ಸಿನಿಮಾ ಇತಿಹಾಸದಲ್ಲೇ ಮೈಲಿಗಲ್ಲು ನಿರ್ಮಿಸಿದ ಸಿನಿಮಾ ಎಂದೇ ಹೇಳಬಹುದು. ಈ ಚಿತ್ರ ಬಿಡುಗಡೆಯಾದ ಕಡೆಯೆಲ್ಲಾ ಭರ್ಜರಿ ಪ್ರದರ್ಶನ ಕಂಡು ಹೊಸ ದಾಖಲೆ ಬರೆದು, ಎಷ್ಟರಮಟ್ಟಿಗೆ ಜನಪ್ರಿಯತೆ ಗಳಿಸಿತ್ತೆಂದರೆ ಹೈದರಾಬಾದ್ ನಗರದಲ್ಲಿ ಸತತವಾಗಿ ಬರೋಬ್ಬರಿ 533 ದಿನ ಪ್ರದರ್ಶನ ಕಂಡು ಎಡೆಬಿಡದೆ ಒಂದು ವರ್ಷ ಓಡಿದ ಪ್ರಪ್ರಥಮ ತೆಲುಗು ಚಿತ್ರ ಎಂಬ ಖ್ಯಾತಿಗೊಳಗಾಗಿತ್ತು.

ಸಿನಿಮಾ ಎಂಬುದು ಮಾಯದ ಲೋಕ ಎಂಬುದು ಕೆಲವರ ಅಭಿಪ್ರಾಯವಾದರೆ, ಬದುಕನ್ನು ಯಥಾವತ್ತು ತೆರೆದಿಡುವ ಅಪರೂಪದ ಮಾಧ್ಯಮವೇ ಸಿನಿಮಾ ಎಂಬುದು ಮತ್ತೂ ಕೆಲವರ ವಾದ. ಪರದೆ ಮೇಲೆ ಸಹಜಾತಿ ಸಹಜವಾಗಿ ಬಿತ್ತರಗೊಳ್ಳುವ ದೃಶ್ಯಗಳ ಹಿಂದೆ ಕ್ಯಾಮೆರಾ, ಲೆನ್ಸ್, ರಿಫ್ಲೆಕ್ಟರ್, ಟ್ರಾಲಿ, ಕ್ರೇನ್, ಜಿಮ್ಮಿಗಳಿರುತ್ತವೆ ಎಂಬುದನ್ನು ಮರೆಯಬಾರದು. ಈ ಸಿನಿಮಾ ಎನ್ನುವ ವಿಚಿತ್ರ, ತಾಂತ್ರಿಕವಾಗಿ ಏನನ್ನೋ ದಾಖಲಿಸುತ್ತಾ ಹೋಗುವುದರ ಜೊತೆಗೆ ಮಾಂತ್ರಿಕವಾಗಿ ಮತ್ತೇನನ್ನೋ ಹೇಳಬೇಕಾದುದು ಅನಿವಾರ್ಯ ಹಾಗೂ ಅದೇ ಅದರ ಪರಿಭಾಷೆಗಿರುವ ವೈಶಿಷ್ಟ್ಯ. ಈ ಸಂಕೀರ್ಣತೆಗಳ ನಡುವೆ ಒಡಮೂಡುವ ಸಿನಿಮಾ ಪರದೆಯ ಮೇಲೆ ಸರಳಾತಿ ಸರಳವಾಗಿ ಕಂಡರೆ ಮಾತ್ರ ಗೆದ್ದಂತೇ. ಅದರಲ್ಲೂ ನಾಗೇಶ್ವರರಾವ್ ಅವರ ಕಾಲದಲ್ಲಿನ ತಾಂತ್ರಿಕತೆಯ ದೃಷ್ಟಿಕೋನದಿಂದ ನೋಡಿದಾಗ ಸ್ವಲ್ಪ ಯಾಮಾರಿದರೂ ಸಿನಿಮಾ ಎನ್ನುವುದು ನಾಟಕವಾಗಿಬಿಡುವ ಅಪಾಯಗಳೇ ಹೆಚ್ಚು.

ಹಾಗೆ ನೋಡಿದರೆ ಆ ಜಮಾನದ ಎಷ್ಟೋ ಸಿನಿಮಾಗಳು ಈಗಲೂ ಟಿವಿಯಲ್ಲಿ ಕಾಣಸಿಕ್ಕಾಗ ತೀರಾ ನಾಟಕೀಯವೆನಿಸದಿರದು. ಹಾಡುಗಳಲ್ಲಿನ ಸಹಜವೆನಿಸದ ನೃತ್ಯವಿರಬಹುದು, ಚಿಕ್ಕ ವಿಷಯಕ್ಕೂ ಅತಿಯೆನಿಸುವ ರಿಯಾಕ್ಷನ್‌ಗಳಿರಬಹುದು ಅಥವಾ ಹಾವ-ಭಾವ-ಭಂಗಿಯಿಂದ ಹಿಡಿದು ಡೈಲಾಗ್ ಹೇಳುವಲ್ಲಿನ ಕೃತಕತೆ ಇರಬಹುದು. ಇದಕ್ಕೆ ಕಾರಣ ರಂಗಭೂಮಿಯ ಹಿನ್ನೆಲೆಯಲ್ಲದೆ ಬೇರೇನೂ ಅಲ್ಲ ಎನ್ನಬಹುದು. ನಾಟಕದಲ್ಲಿ ಪಾತ್ರ ನಿಭಾಯಿಸುವವನು ತನ್ನಿಡೀ ಶರೀರದ ಮೂವ್‌ಮೆಂಟ್ ಕಡೆ ಗಮನಕೊಡಬೇಕಾಗುತ್ತದೆ. ಏಕೆಂದರೆ, ರಂಗದ ಮೇಲೆ ನಿಂತು ಯಾವ ಪಾತ್ರ ಡೈಲಾಗ್ ಹೇಳುತ್ತಿರುತ್ತದೋ ಆ ಪಾತ್ರದ ಕಡೆ ಮಾತ್ರ ಪ್ರೇಕ್ಷಕರ ಕಣ್ಣು ಹಾಗೂ ಕಿವಿಗಳು ಕೇಂದ್ರಿತವಾಗಿರುತ್ತವೆ. ಉಳಿದ ಪಾತ್ರಗಳು ಗಮನಕ್ಕೆ ಬರುವುದಿಲ್ಲ, ಅಂತಹ ಸಂದರ್ಭಗಳಲ್ಲಿ ತಮ್ಮ ಇರುವಿಕೆ




ಪ್ರಶಸ್ತಿಗಳ ಸುರಿಮಳೆ

ಪದ್ಮವಿಭೂಷಣ, ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ನಂದಿ ಅವಾರ್ಡ್, ರಘುಪತಿ ವೆಂಕಯ್ಯ ಅವಾರ್ಡ್, ಎನ್.ಟಿ.ಆರ್ ನ್ಯಾಷನಲ್ ಅವಾರ್ಡ್, ತಮಿಳುನಾಡಿನ ಕಲೈಮಾಮಣಿ ಅವಾರ್ಡ್, ಮಧ್ಯಪ್ರದೇಶದ ಕಾಳಿದಾಸ ಅವಾರ್ಡ್, ತೆಲುಗು ಅಸೋಸಿಯೇಷನ್ ಆಫ್ ನಾರ್ತ್ ಅಮೆರಿಕಾ ನೀಡುವ ಲೈಫ್ ಟೈಮ್ ಅಚೀವ್‌ಮೆಂಟ್ ಅವಾರ್ಡ್ ಸೇರಿದಂತೆ ಒಟ್ಟು ನಾಲ್ಕು ಬಾರಿ ಫಿಲಂಫೇರ್ ಅವಾರ್ಡ್‌ಗಳು ಅಕ್ಕಿನೇನಿ ನಾಗೇಶ್ವರರಾವ್ ಅವರಿಗೆ ಸಂದಿರುವುದರ ಜೊತೆಗೆ ಅನೇಕ ವಿಶ್ವವಿದ್ಯಾನಿಲಯಗಳು ಡಾಕ್ಟರೇಟ್ ನೀಡಿ ಗೌರವಿಸಿವೆ. ಹಾಗೇನೆ ಅಮೆರಿಕಾ, ಕೆನಡ, ಫ್ರಾನ್ಸ್, ಜರ್ಮನಿ, ರಷ್ಯಾ ಮಾರಿಷಸ್ ಸೇರಿದಂತೆ ಅನೇಕ ದೇಶಗಳಿಗೆ ಭಾರತೀಯ ಕಲಾ ಲೋಕದ ಸಾಂಸ್ಕೃತಿಕ ರಾಯಭಾರಿಯಾಗಿ ಹೋಗಿ ಗೌರವ ಸ್ವೀಕರಿಸುವ ಮೂಲಕ ದೇಶದ ಕೀರ್ತಿ ಹೆಚ್ಚಿಸಿರುವ ಇವರ 'ಅಂತಸ್ತುಲು' ಚಿತ್ರ ಸಿದ್ನಿ ಫಿಲಂ ಫೆಸ್ಟಿವಲ್‌ನಲ್ಲಿ ಪ್ರದರ್ಶನ ಕಂಡಿತ್ತು. ●

ಟಾಲಿವುಡ್‌ಗೆ ಬುನಾದಿ ಹಾಕಿದ 'ಅನ್ನಪೂರ್ಣ'

ಅಕ್ಕಿನೇನಿ ನಾಗೇಶ್ವರರಾವ್ ಅವರ ಸಾಧನೆಗಳ ಪಟ್ಟಿಯಲ್ಲಿ ಹೈದರಾಬಾದಿನಲ್ಲಿ ತಾವು 'ಅನ್ನಪೂರ್ಣ ಸ್ಟುಡಿಯೋಸ್' ಆರಂಭಿಸಿದ್ದೂ ಪ್ರಮುಖವಾದುದು. ಮೊದಲಿಗೆ ತಮಿಳು ಮಾತ್ರವಲ್ಲದೆ ತೆಲುಗು, ಕನ್ನಡ, ಮಲಯಾಳಂ ಭಾಷೆಗಳ ಸಿನಿಮಾ ಚಟುವಟಿಕೆಗಳ ಕೇಂದ್ರ ಸ್ಥಾನ ಮದ್ರಾಸು (ಚೆನ್ನೈ) ಆಗಿತ್ತು. ಯಾವಾಗ



1956ರ ನವೆಂಬರ್ 1ರಂದು ಮದ್ರಾಸ್ ಪ್ರೆಸಿಡೆನ್ಸಿಯಿಂದ ಆಂಧ್ರ ಪ್ರದೇಶ ಪ್ರತ್ಯೇಕಗೊಂಡಿತೋ, ಹೈದರಾಬಾದಿನಲ್ಲೊಂದು ಸ್ಟುಡಿಯೋ ನಿರ್ಮಿಸುವ ಮಹತ್ವಾಕಾಂಕ್ಷೆಯ ಆಲೋಚನೆ ಅಕ್ಕಿನೇನಿ ನಾಗೇಶ್ವರರಾವ್ ಅವರಿಗೆ ಹೊಳೆದು ಆ ನಿಟ್ಟಿನಲ್ಲಿ ಕಾರ್ಯಮಗ್ನರಾಗಿ ತಮ್ಮದೇ 22 ಎಕರೆ ಜಮೀನಿನಲ್ಲಿ ಬೃಹತ್ತಾದ ಸ್ಟುಡಿಯೋವೊಂದನ್ನು ನಿರ್ಮಿಸಿ ಅದಕ್ಕೆ 'ಅನ್ನಪೂರ್ಣ ಸ್ಟುಡಿಯೋ' ಎಂದು ನಾಮಕರಣ ಮಾಡಿದರು. ಆ ಸ್ಟುಡಿಯೋ ದೆಸೆಯಿಂದ ತೆಲುಗು ಚಿತ್ರಗಳ ನಿರ್ಮಾಣ ಕಾರ್ಯಗಳಿಗೆ ಮದ್ರಾಸಿಗೆ ಹೋಗುವುದು ತಪ್ಪಿ ಬಹುತೇಕ ಎಲ್ಲ ಸಿನಿಮಾ ಚಟುವಟಿಕೆಗಳಿಗೂ ಹೈದರಾಬಾದಿನಲ್ಲೇ ವ್ಯವಸ್ಥೆಯಾದುದರ ಕ್ರೆಡಿಟ್ಟು ನಾಗೇಶ್ವರರಾವ್ ಅವರಿಗೆ ಸಲ್ಲಬೇಕು. ●

ಪುಸ್ತಕಗಳನ್ನೂ ಬರೆದಿದ್ದರು

ರೀ ನಟನೆಗಷ್ಟೇ ಸೀಮಿತವಾಗದ ನಾಗೇಶ್ವರರಾವ್ ಕೆಲವು ಪುಸ್ತಕಗಳನ್ನೂ ದ್ದಾರೆ. ಅವರ ಬದುಕನ್ನು ಆಧರಿಸಿದ 'ನೇನು ನಾ ಜೀವಿತಂ' (ನಾನು ಬದುಕು)', ಅಮೆರಿಕಾಗೆ ಭೇಟಿ ನೀಡಿದ ದಿನಗಳಲ್ಲಿನ ಅನುಭವಗಳ 'ನೇನು ಚೂಸಿನ ಅಮೆರಿಕಾ' (ನಾ ಕಂಡ ಅಮೆರಿಕಾ) ಹಾಗೂ ತಮ್ಮ ಿನ ಕೊನೆಕೊನೆಯ ದಿನಗಳಲ್ಲಿ ಬರೆದ 'ಮನಸುಲೋನಿ ಮಾಟ' ಸಿನ ಮಾತು) ಕೃತಿಗಳು ಪ್ರಮುಖವಾದಂಥವು. ●

ಇಡೀ ದೃಶ್ಯದಲ್ಲಿನ ತಮ್ಮ ಭಾಗೀದಾರಿಯನ್ನು ವ್ಯಕ್ತಪಡಿಸುವ ಸಲುವಾಗಿ ಮೇಲಿರುವ ಪ್ರತಿಯೊಂದು ಪಾತ್ರವೂ ದೃಶ್ಯಕ್ಕೆ ಪೂರಕವಾಗಿ ಒಂದಲ್ಲ ಬಗೆಯಲ್ಲಿ ಆಂಗಿಕ ಚಲನವಲನ ನೋಡಿಕೊಳ್ಳಬೇಕಾಗುತ್ತದೆ. ಆದರೆ, ವಿಷಯಕ್ಕೆ ಬಂದರೆ, ಕ್ಲೋಸ್ ಅಪ್ ಶಾಟ್, ಮಿಡ್ ಶಾಟ್, ವೈಡ್ ಗಳೆಂಬ ತಂತ್ರವಿದ್ದು, ಆಯಾ ಶಾಟ್‌ಗೆ ತಕ್ಕಂತೆ ಲೆನ್ಸ್‌ಗಳಿದ್ದು ಕಥೆಗೆ ವಾಗಿ ದೇಹದ ಯಾವ ಭಾಗದ ಚಲನೆ, ಅಭಿವ್ಯಕ್ತಿ ಎಷ್ಟು ಬೇಕೋ ಮಾತ್ರ ಸೇರಿ ಹಿಡಿದು ಎಡಿಟಿಂಗ್ ಸಂದರ್ಭದಲ್ಲಿ ವ್ಯವಸ್ಥಿತವಾಗಿ ನಿಗೆ ವಿಷಯ ತಲುಪಿಸುವಲ್ಲಿ ಸಹಕರಿಸುತ್ತವೆ.

ಾಗಾಗಿ ಸಿನಿಮಾಗಳಲ್ಲಿ ನಟಿಸಬೇಕಾಗಿ ಬಂದಾಗ ನಟ ಈ ಎಲ್ಲ ಗಳನ್ನರಿತು ನಟಿಸಬೇಕಾಗುತ್ತದೆ. ಅನಗತ್ಯ ಆಂಗಿಕ ಅಭಿನಯ, ಓವರ್



ಗ್ ಬೇಡವೆನಿಸುತ್ತದೆ- ಹೀಗೆ ಇಂತಹ ಸವಾಲುಗಳ ನಡುವೆ ಸಹಜವಾಗಿ ಸ್ಥಿರವಾಗಿ ನಿಲ್ಲುವುದು ಕೆಲವರಿಂದ ಮಾತ್ರ ಸಾಧ್ಯವಾಗಿದ್ದು, ಇಂತಹ ್ಸಿನ ಹಿಂದೆ ಆಯಾಯ ನಟ ಆಯಾಯಾ ಪಾತ್ರಕ್ಕನುಗುಣವಾಗಿ ಸಿಕೊಂಡ ಬಾಡಿ ಲಾಂಗ್ವೇಜ್, ಮ್ಯಾನರಿಸಂ, ಡೈಲಾಗ್ ಡೆಲಿವರಿಯಂಥ ಅಂಶಗಳೂ ಅಡಗಿರುತ್ತವೆ. ಒಬ್ಬನೇ ನಟ ಒಂದೇ ಚಿತ್ರದಲ್ಲಿ ದ್ವಿಪಾತ್ರ ಿಸಬೇಕಾಗಿ ಬಂದಾಗ ಈ ಸೂಕ್ಷ್ಮಗಳ ವಿಷಯದಲ್ಲಿ ಭಾರೀ ಹೋಂವರ್ಕ್ ಬೇಕಾಗುತ್ತದೆ. ಒಂದೇ ಪರದೆಯ ಮೇಲೆ ಎರಡೆರಡು ಪಾತ್ರಗಳಾಗಿ ಿಕೊಂಡಾಗಲೂ ಬೇರೆ ಬೇರೆ ತೆರನಾದ ಬಾಡಿ ಲಾಂಗ್ವೇಜ್, ಮ್ಯಾನರಿಸಂ, ಗ್ ಹೇಳುವ ಬಗೆ ಭಿನ್ನವಾಗಿರಬೇಕಾಗುತ್ತದೆ.

ಈ ನಿಟ್ಟಿನಲ್ಲಿ ಅಕ್ಕಿನೇನಿ ನಾಗೇಶ್ವರರಾವ್ ವಿಶೇಷವಾಗಿ ನಿಲ್ಲುವುದೇ ಷ ಸಂಗತಿ. ತೆಲುಗು ಚಿತ್ರರಂಗದ ಇತಿಹಾಸದಲ್ಲೇ ಮೊದಲಬಾರಿಗೆ ತ್ರ ಮಾಡಿ ಸೈ ಎನಿಸಿಕೊಂಡ ಕೀರ್ತಿ ನಾಗೇಶ್ವರರಾವ್ ಅವರಿಗೆ ಸಲ್ಲುತ್ತದೆ. ನವರಾತ್ರಿ' ಎನ್ನುವ ಚಿತ್ರದಲ್ಲಿ ಒಟ್ಟು ಒಂಭತ್ತು ಪಾತ್ರಗಳನ್ನು ನಿರ್ವಹಿಸಿದ ು ಇವರದು.

ಇನ್ನು ನಾಗೇಶ್ವರರಾವ್ ನಟಿಸಿದ ಸಾಮಾಜಿಕ ಚಿತ್ರಗಳ ವಿಷಯಕ್ಕೆ ಬಂದರೆ ರಂ', 'ಆರಾಧನಾ', 'ದೊಂಗ ರಾಮುಡು', 'ಡಾ.ಚಕ್ರವರ್ತಿ', 'ಅರ್ಧಾಂಗಿ', ಗಲ್ಲ ಬಲಂ', 'ಶಾಂತಿನಿವಾಸಂ', 'ವೆಲುಗು ನೀಡಲು', 'ಭಾರ್ಯ ಭರ್ತಾವು', ದಾತ', 'ಕಾಲೇಜ್ ಬುಲ್ಲೋಡು' ಸೇರಿದಂತೆ ಅನೇಕ ಕಮರ್ಷಿಯಲ್ ಚಿತ್ರಗಳು ನೆನಪಿಗೆ ಬರುತ್ತವೆ.

ಇತ್ತೀಚಿಗೆ 1991ರಲ್ಲಿ ಐವತ್ತು ವರ್ಷಗಳ ನಂತರ ಮತ್ತೆ ಬಿಡುಗಡೆಯಾದ 'ಸೀತಾರಾಮಯ್ಯಂಗಾರಿ ಮನವರಾಲು' ಚಿತ್ರ ಬಾಕ್ಸ್ ಆಫೀಸಿನಲ್ಲಿ ರಿ ಯಶಸ್ಸು ಗಳಿಸಿ ಇತ್ತೀಚಿನ ಯುವನಟರ ಚಿತ್ರಗಳನ್ನೆಲ್ಲ ಧೂಳೀಪಟ ತೆಂದರೆ ಅಕ್ಕಿನೇನಿ ನಾಗೇಶ್ವರರಾವ್ ಅವರ ಖದರು ಎಂಥಾದ್ದು ಅಂತ ವರೂ ನಿಮಿಷಕಾಲ ಯೋಚಿಸಲೇಬೇಕಾಗುತ್ತದೆ.

ಹಾಗೆಯೇ, ನಾಗೇಶ್ವರರಾವ್ ಅವರ ಚಿತ್ರರತ್ನಗಳ ಪೈಕಿ 'ದೇವದಾಸು' ಪ್ರಮುಖವಾದ ಚಿತ್ರ. ಸದಾ ಮದಿರೆ ಹೀರುತ್ತಾ ಮುಳುಗಿಹೋದ ಪಸನಿಮಿಷಗಳನ್ನು ನೆನೆಯುವ ಪಾತ್ರ ನಿಜಕ್ಕೂ ಆ ಕಾಲಘಟ್ಟಕ್ಕೆ ಯುವ ಬಗಳ ಎದೆಯಲ್ಲಿ ಕಿಚ್ಚು ಹಚ್ಚಿತ್ತು.


ಹೀಗೆ ಒಂದೇ ಬಗೆಯ ಪಾತ್ರಗಳಿಗೆ ಸೀಮಿತವಾಗದ ಅಕ್ಕಿನೇನಿ ಶ್ವರರಾವ್ ಸಂತ, ದಾರ್ಶನಿಕ, ಕಲಾವಿದರ ಜೀವನವನ್ನಾಧರಿಸಿದ ಪಾತ್ರಗಳಿಗೂ ತುಂಬಿದಂಥವರೇ ಆಗಿದ್ದರು. ಮಹಾಕವಿ ಕಾಳಿದಾಸನ ಪಾತ್ರವಿರಬಹುದು, ಜಯದೇವನ ಪಾತ್ರವಿರಬಹುದು, ಅಮರಶಿಲ್ಪಿ ಜಕಣಾಚಾರಿಯ ವಿರಬಹುದು, ವಿಪ್ರನಾರಾಯಣನ ಪಾತ್ರವಿರಬಹುದು ಹಾಗೇ ಭಕ್ತ ರಾಮನ ಪಾತ್ರವಿರಬಹುದು- ಹೀಗೆ ದೇಶದ ವಿವಿಧ ಪ್ರದೇಶದ ದಾರ್ಶನಿಕ, ರ ಪಾತ್ರಗಳನ್ನು ಮಾಡಿ ಕೆಲವರಿಂದ ಟೀಕೆಗೂ ಒಳಗಾಗಿದ್ದ ನಾಗೇಶ್ವರರಾವ್ ಗಿದ್ದ ಸಮೂಹ ಪ್ರಜ್ಞೆಗೆ ಹಿಡಿದ ಕನ್ನಡಿ ಎನ್ನಬಹುದು.

ಹೇಳಹೆಸರಿಲ್ಲದಂತೆ ಮಾಯವಾಗಿಬಿಡುವ ಈ ಬದುಕಿನಲ್ಲಿ ಶ್ರದ್ಧೆ, ವೃತ್ತಿ ಯಿದ್ದರೆ ಏನು ಬೇಕಾದರೂ ಸಾಧಿಸಬಹುದೆಂದು ತಮ್ಮ ಬದುಕನ್ನೇ ಗೆಲ್ಲ ಯೂನಿವರ್ಸಿಟಿಯಾಗಿಸಿ ಹೊರಟುಹೋದ ನಟ, ನಿರ್ಮಾಪಕ, ಿಯೋ (ಅನ್ನಪೂರ್ಣ) ಮಾಲೀಕರಾಗಿದ್ದ ಅಕ್ಕಿನೇನಿ ನಾಗೇಶ್ವರರಾವ್ ಎಂಬ ು ಸಿನಿಮಾ ಇರುವವರೆಗೂ ಮಾಸದ ರಂಗು.

● ಹೃದಯಶಿವ

ಶಾಸಕನಿಲ್ಲದ ಕಾರವಾರದಲ್ಲಿ ಮಾಜಿ ಶಾಸಕನೂ ನಾಪತ್ತೆ!!


ಕಾರವಾರ ವಿಧಾನಸಭಾ ಕ್ಷೇತ್ರಕ್ಕೆ ಅದೆಂಥ ಗ್ರಹಚಾರವೋ ಏನೋ?! ಇಲ್ಲಿಯ ಶಾಸಕರು ನೋಡು-ನೋಡುತ್ತಿದ್ದಂತೆಯೇ 'ಇಲ್ಲ'ವಾಗುತ್ತಿದ್ದಾರೆ; ಕ್ಷೇತ್ರ ಹಠಾತ್ ಅನಾಥವಾಗುತ್ತಿದೆ. ಕಷ್ಟ-ಸುಖ ಹೇಳಿಕೊಳ್ಳಲು, ಅಭಿವೃದ್ಧಿ ಕೆಲಸ-ಕಾಮಗಾರಿ ಮಾಡಿಸಿಕೊಳ್ಳಲು ಬೇಕಾದ ಎಮ್ಮೆಲ್ಲೆಯೇ ಕಣ್ಮರೆಯಾದರೆ ಕ್ಷೇತ್ರವಾಸಿಗಳ ಕತೆ ಏನಾಗಬೇಡ? ಸರಿಸುಮಾರು ಒಂದೂವರೆ ದಶಕದಿಂದ ಕಾರವಾರ ಕ್ಷೇತ್ರ ತಬ್ಬಲಿಯಾಗಿ ತಬ್ಬಿಬ್ಬಾಗುತ್ತಿದೆ. ಭೂಗತರ ಸುಪಾರಿಗೆ ಹತನಾದ ಶಾಸಕನ ಪ್ರಕರಣ ಒಂದಾದರೆ, ಇದ್ದೂ ಸತ್ತಂತಾದ ಶಾಸಕರ ಹಗರಣ ಎರಡ್ಮೂರು. ಕ್ಷೇತ್ರ 'ಖಾಲಿ' ಮಾಡಿದ ಎಮ್ಮೆಲ್ಲೆಯ ಎದುರುದಾರನಾದರೂ ಜನರಿಗೆ ಸ್ಪಂದಿಸಿ ನಾಯಕತ್ವ ನೀಡಿದನಾ ಎಂದರೆ ಅದೂ... ಊಹುಂ... ಇಲ್ಲ... ಇಲ್ಲ...



ವಸಂತ ಅಸ್ನೋಟಿಕರ್

ಕಡಲತಡಿಯ ಈ ಕ್ಷೇತ್ರದ ದೌರ್ಭಾಗ್ಯ ಅದೆಂಥದೆಂದರೆ, ಶಾಸಕರೇ ಶತ್ರುಗಳಾಗುತ್ತಿದ್ದಾರೆ. ಯಾವಾಗ ರಾಬಿನ್ ಹುಡ್ ಇಮೇಜಿನ ಕಾಡುಗಳ್ಳ, ಕಳ್ಳಭಟ್ಟಿ ಭೂಪ, ಬಂದರು ಬಕಾಸುರ, ಗೂಂಡಾಗುರು ವಸಂತ ಅಸ್ನೋಟಿಕರ್ ಸದ್ರಿ ಕ್ಷೇತ್ರದ ಎಮ್ಮೆಲ್ಲೆಯಾದನೋ ಆಗಿಂದಲೇ ಶುರುವಾಯ್ತು ದುರಂತ-ಅಪಖ್ಯಾತಿ-ಅಪಮಾನ-ಅಧಃಪತನ! ಅಸ್ನೋಟಿಕರ್ ನಂತರ ಗೆದ್ದವರೂ ಇದೇ ಪರಂಪರೆಯನ್ನು ಅನೂಚಾನವಾಗಿ ಅನುಸರಿಸಿಕೊಂಡು ಹೋದರು. ವಸಂತ್ ಅಸ್ನೋಟಿಕರ್‌ನನ್ನು ಆತನ ಎದುರಾಳಿ ಭೂಗತ ಪಾತಕಿ ದಿಲೀಪ್ ನಾಯ್ಕನ ಬಳಗದಲ್ಲಿ ಗುರುತಿಸಿಕೊಂಡು ಒಣ ರಾಜಕಾರಣದಲ್ಲಿ ಮೈಮುರಿಸಿದ್ದ. ಈತನ ಹುಚ್ಚಾಟದಿಂದ ಕಾರವಾರ ಅಂಕೋಲೆಯ ಪ್ರಗತಿಯೆಂಬುದು ಓಂದಿರಿ ಇದುಕ್ತ ಹೋಯ್ತು, ಆನಂದ ಭಂಡಾಟ ಮಿತಿಮೀರಿ ಹೋಯ್ತು, ನಂತರ ಜಾರಕಿಹೊಳಿಯ ರೆಬೆಲ್ ಗ್ಯಾಂಗ್ ಸೇರಿಕೊಂಡ ಆನಂದ್‌ನ ಶಾಸಕತ್ವಕ್ಕೆ ಯಡ್ಡಿ ಸಂಚಕಾರ ತಂದಿಟ್ಟಿದ್ದರು. ಆಗ ಬರೋಬ್ಬರಿ ಕಾರವಾರ ಕ್ಷೇತ್ರ ಅನಾಥವಾಗಿತ್ತು ಪಾಪಿ ಆನಂದನ ಅತಿರೇಕದಿಂದ ಕ್ಷೇತ್ರ 'ಖಾಲಿ'ಯಾಗಿತ್ತು!


ಈಗ ಸತೀಶ್ ಸೈಲ್ ಎಂಬ ಕಾಂಗ್ರೆಸ್ ಬಂದುಕೋರ ಶಾಸಕ ಗೆದ್ದ ನಾಲ್ಕೇ ತಿಂಗಳಿಗೆ ಪರಪ್ಪನ ಅಗ್ರಹಾರದ ಸೆಂಟ್ರಲ್ ಜೈಲು ಪಾಲಾಗಿದ್ದಾನೆ! ಆತನ ಅದಿರು ಅವ್ಯವಹಾರ-ಕಳ್ಳ ಸಾಗಾಣಿಕೆ ದಂಧೆ ಕಾರವಾರದ-ಅಂಕೋಲಾ ಕ್ಷೇತ್ರಕ್ಕೆ ಅನಾಹುತಕಾರಿಯಾಗಿದೆ. ಅದಿರುಗಳ್ಳ ಸೈಲ್‌ನ ಅಸಲಿಯತ್ತು ಅರಿಯದೇ ಮರುಳಾದ ಕ್ಷೇತ್ರದ ಜನರೀಗ ದೊಡ್ಡ ದಂಡ ತೆರಬೇಕಾಗಿದೆ. ಆಗಾಗ ಪೆರೋಲ್ ಮೇಲೆ ಮನೆಗೆ ಬರುತ್ತಿರುವ ಸೈಲ್‌ನಿಂದ ಆತನನ್ನು ಎಮ್ಮೆಲ್ಲೆ ಮಾಡಿದವರಿಗೆ ಪ್ರಯೋಜನವೇನೂ ಆಗುತ್ತಿಲ್ಲ. ಕ್ಷೇತ್ರ ಹೇಳೋರು ಕೇಳೋರು ಇಲ್ಲದೆ ಅಧಿಕಾರಶಾಹಿಯ ಕೈಗೆ ಸಿಕ್ಕಿ ಒದ್ದಾಡುತ್ತಿದೆ. ಮತ್ತೊಂದೆಡೆ ಶಾಸಕ ಸೈಲ್‌ನ ಶನಿಸಂತಾನ ವಸೂಲಿ ಮಾಡುತ್ತ ಕೊಬ್ಬುತ್ತಿದ್ದೆ. ಶಾಸಕ ಇದ್ದೂ ಸತ್ತಂತಾದ ಎರಡನೇ 'ಅಧಿಕೃತ' ಪ್ರಸಂಗವಿದು. ಸಿಬಿಐ ಶಾಸಕ ಸೈಲ್‌ನ ಹೆಡೆಮುರಿ ಕಟ್ಟಿ ಕಾರಾಗೃಹಕ್ಕೆ ಅಟ್ಟುತ್ತಿದ್ದಂತೆಯೇ ಕಾರವಾರ ಕೆಟ್ಟ ಕಾರಣಕ್ಕಾಗಿ ಇಡೀ ದೇಶದಲ್ಲಿ ಸುದ್ದಿಯಾಗುತ್ತಿದೆ. ಇಂಥ ಅವ್ಯವಹಾರಿ-ಅವಾಂತರಕಾರಿಯನ್ನು ಶಾಸಕನಾಗಿ ಆರಿಸಿದ ತಪ್ಪಿಗೆ ಕಾರವಾರ-ಅಂಕೋಲೆಯ ಮತದಾರರೀಗ ಪಶ್ಚಾತ್ತಾಪ ಪಡುತ್ತಿದ್ದಾರೆ.



ಆನಂದ್ ಅಸ್ನೋಟಿಕರ್

ಸುಪಾರಿ ಕಿಲ್ಲರ್‌ಗಳು 2000 ಫೆಬ್ರವರಿ 19ರಂದು ಕಾರವಾರದ ನಡುಬೀದಿಯಲ್ಲೇ ಕೊಂದೆಸೆದಿದ್ದರು. ಅಪಾರ ಅಕ್ರಮ ಆಮದನಿಯ ಆಗರವಾಗಿದ್ದ ಕಾರವಾರ ಬಂದರಿನ ಮಾಫಿಯಾ ಡಾನ್‌ಗಿರಿಗಾಗಿ ವಸಂತ್ ಮತ್ತು ದಿಲೀಪ್ ನಡುವಿನ ಸಂಘರ್ಷ ರಕ್ತದೋಕುಳಿಯಲ್ಲಿ ಅಂತ್ಯವಾಗಿತ್ತು. ಆನಂತರ ದಿಲೀಪನೂ ಹತನಾಗಿ ಹೋದ. ಆತನನ್ನು ವಸಂತನ ವಾರಸುದಾರರೇ ನಿಖಾಲಿ ಮಾಡಿಸಿದರೆಂಬ ಗುಲ್ಲೂ ಹಬ್ಬಿತ್ತು.


ಅದಿರಲಿ, ವಸಂತ್ ಅಸ್ನೋಟಿಕರ್ ಹತ್ಯೆಯನಂತರ ಕಾರವಾರ ಕ್ಷೇತ್ರಕ್ಕೆ ಮೂರುವರೆ ವರ್ಷ ಶಾಸಕನೇ ಇರಲಿಲ್ಲ. ಹೊಸ ಎಮ್ಮೆಲ್ಲೆ ಆರಿಸಲು ಅಸ್ನೋಟಿಕರ್ ವಿರುದ್ಧ ಪಲ್ಟಿ ಹೊಡೆದಿದ್ದ ಪ್ರಭಾಕರ ರಾಣೆಯನ್ನು ಕೋರ್ಟ್ ಕೇಸು ಬಿಡಲಿಲ್ಲ. ಹಾಗಂತ ಈ ಒಣ ರುಬಾಬಿನ ರಾಣೆಯಾದರೂ ಜನರ ಸಂಭಾಳಿಸಲಿಲ್ಲ. ಆತನ ಬಗ್ಗೆ ಜನರಿಗೂ ನಂಬಿಕೆ ಇರಲಿಲ್ಲ. 1990ರ ದಶಕದಲ್ಲಿ ಜನರಿಂದ ತಿರಸ್ಕೃತನಾದ ರಾಣೆ ಕಾಂಗ್ರೆಸ್-ಬಿಜೆಪಿ-ಜೆಡಿಎಸ್ ಕಾಂಗ್ರೆಸ್-ಜೆಡಿಎಸ್ ಎಂದು ತಿಪ್ಪರಲಾಗ ಹಾಕುತ್ತಿದ್ದರೂ ಇವತ್ತಿಗೂ ಭರ್ಕತ್ತಾಗಿಲ್ಲ; ಹಾಗಂತ ಚಟ ಮಾತ್ರ ಮುಗಿದಿಲ್ಲ.



ಸತೀಶ್ ಸೈಲ್

ವಸಂತ್ ಅಸ್ನೋಟಿಕರ್ ಶೂಟೌಟ್ ಬಳಿಕ ಕಾರವಾರವನ್ನು ಅಸೆಂಬ್ಲಿಯಲ್ಲಿ ಪ್ರತಿನಿಧಿಸಿದವನು ಗಂಗಾಧರ್ ಭಟ್ ಎಂಬ ಅಪ್ಪಟ ಚಿಡ್ಡಿ ಮೊದ್ಮಣಿ. ಈತ ದಿವಂಗತ ವಸಂತ್ ಅಸ್ನೋಟಿಕರ್‌ನ ಪುತ್ರ ಆನಂದ್ ಅಸ್ನೋಟಿಕರ್‌ನ ಮಾಫಿಯಾ ಗ್ಯಾಂಗ್‌ನ ಕೈಗೊಂಬೆಯಾಗಿದ್ದ. ಕಾಂಗ್ರೆಸ್‌ನ ಅಶೋಕ್ ನಾಯ್ಕ್ (ಮ್ಯಾಗಿ ಶಿಷ್ಯ) ಮತ್ತು ಜೆಡಿಎಸ್‌ನ ರಾಣೆ ಗೆದ್ದರೆ ತನ್ನ ಪುಂಡ ಪಡೆಯ ದೋ ನಂಬರ್ ದಂಧೆಗೆಲ್ಲ ಗಂಡಾಂತರವೆಂಬ ವ್ಯಾಪಾರಿ ಲೆಕ್ಕಾಚಾರದಲ್ಲಿ ಬಿಜೆಪಿ ಭಟ್ಟನನ್ನು ಬೆಂಬಲಿಸಿ ಗೆಲ್ಲಿಸಿದ್ದೇ ಆನಂದ ಅಸ್ನೋಟಿಕ್ ಆಗಿತ್ತು. ಕಾರವಾರದಲ್ಲಿ ನೆಲೆ-ಬೆಲೆಯೇ ಇಲ್ಲದ ಬಿಜೆಪಿ ಆಗ ಗೆದ್ದಿದ್ದೇ ಬೆರಗಿನ ಸಂಗತಿಯಾಗಿತ್ತು. ಈ ಬಂಗಾರದ ವ್ಯಾಪಾರಿ ಭಟ್ಟ ಇದ್ದೂಇಲ್ಲದಂಥ ಶಾಸಕನಾಗಿದ್ದ. ಪುಂಡ ಅಸ್ನೋಟಿಕರ್‌ನ ಭಯದಲ್ಲಿ ಶಾಸಕಗಿರಿ ಕಳೆದ ಭಟ್ಟ ಕ್ಷೇತ್ರದ ಬೇಕು-ಬೇಡದ ಬಗ್ಗೆ ಯೋಚಿಸಿದ್ದೇ ಇಲ್ಲ. ಹಾಗಾಗಿ ಭಟ್ಟ ಐದು ವರ್ಷದ ಅವಧಿ ಒಂಥರಾ ಶೂನ್ಯ ಸೃಷ್ಟಿಸಿತ್ತು.

ಫೆಕರ ಭಟ್ಟನ ಪರ್ವ ಮುಗಿದಾಗ ಕ್ಷೇತ್ರದ ಭೌಗೋಳಿಕ ಚಹರೆಯೂ ಬದಲಾಗಿತ್ತು. ಕಾರವಾರದೊಂದಿಗಿದ್ದ ಜೋಯಿಡಾ ಕಳಚಿಕೊಂಡು ಹಳಿಯಾಳಕ್ಕೆ ಸೇರಿಕೊಂಡಿತ್ತು. ಕಾರವಾರಕ್ಕೆ ಅಂಕೋಲಾ ಜತೆಯಾಗಿತ್ತು. ಆಗ ಧೂಮಕೇತುವಿನಂತೆ ಅಖಾಡಕ್ಕೆ ಬಂದವನೇ ಆನಂದ್ ಅಸ್ನೋಟಿಕ್!! ಈ ಆನಂದ್ ಕ್ಷೇತ್ರದ ಪಾಲಿಗೆ ಶಾಸಕನಾಗುತ್ತಲೇ ದೊಡ್ಡ ಆತಂಕವಾದಿ ಆಗಿಹೋದ. ಆತ ಶಾಸಕನಾದ ಆರೇ ತಿಂಗಳಿಗೆ ಕಾಂಗ್ರೆಸ್‌ಗೆ ಕೈಕೊಟ್ಟು ಆಪರೇಷನ್ ಕ-ಮಲ ಮಾಡಿಸಿಕೊಂಡು ಸಿಜರಿನ್ ಸಚಿವನೂ ಆಗಿದ್ದ. ನಾಲ್ಕೂವರೆ ವರ್ಷದ ಆನಂದನ ಅಂಧಾ ದರ್ಬಾರ್ ಕಾರವಾರ-ಅಂಕೋಲಿಗರ ಪಾಲಿಗೆ ಮರೆಯದ ದುಃಸ್ವಪ್ನ!



ಪ್ರಭಾಕರ ರಾಣೆ

ಅಪ್ಪನ ಬಳಿಕ ಕಾರವಾರಕ್ಕೆ ಕುಖ್ಯಾತಿ ತಂದವನೇ ಈ ಮಗ ಮಹಾರಾಯ. ಆನಂದ್ ಅಂದಿನ ಸಿಎಂ ಯಡ್ಡಿ ವಿರುದ್ಧ ಬಂಡೆದ್ದಿದ್ದ ಗಣಿ ಚೋರ ರೆಡ್ಡಿ

ಶಾಸಕ ಸೈಲ್ ಕ್ಷೇತ್ರ 'ಖಾಲಿ' ಮಾಡಿದರೂ ಆತನ ಶತ್ರು ಆನಂದ್ ಅಸ್ನೋಟಿಕರ್ ಮಾತ್ರ ಅದನ್ನು ತುಂಬುವ ಧೈರ್ಯ ಮಾಡುತ್ತಿಲ್ಲ. ಆ ನೈತಿಕತೆಯೂ ಆತನಲ್ಲಿಲ್ಲ. ಮಾಡಬಾರದ್ದೆಲ್ಲ ಮಾಡಿದ್ದ ಆನಂದ್‌ನನ್ನು ಮತದಾರರು ಮುಖ-ಮೂತಿ ಎಂದು ನೋಡದೆ ತದುಕಿ ಓಡಿಸಿದ್ದಾರೆ. ದೊಡ್ಡ ಅಂತರದಲ್ಲಿ ಸೋತ ಆನಂದ್ ಆತ್ಮಹತ್ಯಾ ಸ್ಥಿತಿ ತಲುಪಿದ್ದಾನೆ. ಆತನಿಗೆ ಅದ್ಯಾವ ಥರ ಮುಖಭಂಗ ಆಗಿದೆಯೆಂದರೆ ಎಲೆಕ್ಷನ್ ಮುಗಿದು ಮುಕ್ಕಾಲು ವರ್ಷವಾದರೂ ಈತ ಕ್ಷೇತ್ರದಲ್ಲಿ ಕಾಣಿಸಿಕೊಂಡಿಲ್ಲ! ತನ್ನ ಬೆಂಬಲಿಗರಿಗೂ ಮುಖ ತೋರಿಸಿಲ್ಲ. ಬಿಜೆಪಿಯವರಂತೂ ನಾವೇ ಆತನ ಸೋಲಿಸಿದ್ದು ಎಂದು ಬಹಿರಂಗವಾಗೇ ಬೊಬ್ಬಿರಿಯುತ್ತಿದ್ದಾರೆ. ಹೀಗಾಗಿ ಆನಂದ್ ಬಿಜೆಪಿಯಲ್ಲೂ ಇಲ್ಲದಂತಾಗಿದ್ದಾನೆ. ಕಾಂಗ್ರೆಸ್ ಸೇರಲು ದೇಶಪಾಂಡೆ ಬಿಡುತ್ತಿಲ್ಲ. ಕೆಪಿಸಿಸಿ ಕಚೇರಿ ಬಾಗಿಲು ಕಾದು-ಕಾದು ಆನಂದ್ ಸುಸ್ತಾಗಿದ್ದಾನೆ. ನಂಬಿದ ಮ್ಯಾಗಿ ಮೇಡಮ್‌ಗೂ ಆತನ ದಡ ಸೇರಿಸಲು ಸಾಧ್ಯವಾಗುತ್ತಿಲ್ಲ.

ಒಟ್ಟನಲ್ಲಿ ಚಿಡ್ಡಿಶಾಹಿಗಳ ಮೋಸದ ಬಲೆಗೆ ಬಿದ್ದು ಬಿಜೆಪಿ ಸೇರಿದ್ದ ಶೂದ್ರ ಅಸ್ನೋಟಿಕರ್ ಸ್ವಯಂನಾಶವಾಗಿದ್ದಾನೆ. ಎಲ್ಲೂ ಸಲ್ಲದೆ ಕಾರವಾರವೇ ಬಿಟ್ಟು ಓಡಿದ್ದಾನೆ. ಆತನ ಕಾರವಾರದ ಮನೆಯೂ ಖಾಲಿಯಾಗಿದೆ. ಗೋವಾದಲ್ಲಿನ ದಂಧೆ, ಬೆಂಗಳೂರು-ದಿಲ್ಲಿಯ ಕಾಂಗ್ರೆಸ್ ನಾಯಕರ ಪಾದಪೂಜೆ ಎಂದು ಅಂಡಲೆಯುತ್ತಿರುವ ಅಸ್ನೋಟಿಕರ್‌ನ ತೊಳಲಾಟ ಹೃದಯವಿದ್ರಾವಕವಾಗಿದೆ. ತಮಾಷೆಯೆಂದರೆ ಮಾಜಿ ಮಂತ್ರಿ ಮನೆಗೆ ಪೊಲೀಸರು 'ವೈ-ಶ್ರೇಣಿ'ಯ ಸೆಕ್ಯುರಿಟಿ ಈಗ ಕೊಟ್ಟಿದ್ದಾರೆ. ಧನನಾಯಕ್ (ಆರೆಸ್ಸೆಸ್) ಎಂಬ ಕಳ್ಳ ಅದಿರು ಉದ್ಯಮಿ ಸುಪಾರಿ ಹತ್ಯೆಗೀಡಾಗುತ್ತಿದ್ದಂತೆಯೇ ಉತ್ತರ ಕನ್ನಡ ಕೆಲವು ಅವ್ಯವಹಾರಿ ಅದಿರು ದಂಧೆದಾರರಿಗೆ, ಪಾಪದ ದುಡ್ಡಿನ ದೊರೆಗಳಾದ ರಾಜಕೀಯ ಪುಢಾರಿಗಳಿಗೆ ವೈ-ಶ್ರೇಣಿಯ ಭದ್ರತೆ ಒದಗಿಸಲಾಗಿದೆ.


ಆದರೆ ಅಸ್ನೋಟಿಕರ್ ಮನೆಯಲ್ಲೇ ಇರುವುದಿಲ್ಲ. ಆತನ ಖಾಲಿ ಮನೆಗೆ ಮಾತ್ರ ಸಶಸ್ತ್ರ ಪೊಲೀಸರು ಕಾವಲು ನಿಂತಿದ್ದಾರೆ. ಲೋಕಸಭೆ ಎಲೆಕ್ಷನ್ ಘೋಷಣೆ ಆಗುತ್ತಿರುವಂತೆಯೇ ಕಾಂಗ್ರೆಸ್ ಕಾಂಪೌಂಡ್‌ನ ಗೇಟು ತನಗಾಗಿ ತೆರೆಯಬಹುದೆಂದು ಆನಂದ್ ಕಾತರಿಸುತ್ತಿದ್ದಾನೆ. ಬಿಜೆಪಿ ಸಹವಾಸ ಆನಂದ್‌ಗೆ ಊರನ್ನೇ ಬಿಡುವಂತೆ ಮಾಡಿದೆ. ಹದಿನಾರಕ್ಕೇ ಯಜಮಾನಿಕೆ ಕಂಡ ಆನಂದ್‌ಗೆ ಅಧಿಕಾರ ವ್ಯಾಮೋಹ ಅಷ್ಟಷ್ಟ ಮಲಗಿಸಿದರೆ, ಹಂಚು ಕಾಣದ ಸೈಲ್ ಕಳ್ಳ ಕಂಬಿಗೆ ಕೈಹಾಕಿ ಜೈಲು ಸೇರಿದ್ದಾನೆ!

ಕಾರವಾರ-ಅಂಕೋಲಿಗರು ಯಾರನ್ನು ನಂಬುವುದೆಂದು ಅರ್ಥವಾಗದೇ ಕಂಗಾಲಾಗಿದ್ದಾರೆ. ಒಟ್ಟನಲ್ಲಿ ಈ ಕಡಲತಡಿಯಲ್ಲಿ ನಕಲಿ ನಾಯಕರದೇ ಹಾವಳಿ! ದಿನಕರ ದೇಸಾಯಿಯಂಥ ಜನಪರ ಹುಲಿಯ ಗುಹೆಯಲ್ಲೀಗ ನರಿಗಳೇ ಊಳಿಡುತ್ತಿವೆ!!

● ನುಹುಷ

ಶಿವಮೊಗ್ಗ: ನಡೆದೀತೆ ಯಡ್ಡಿಯ ಆಟ?

ಕಳೆದ ವರ್ಷವೇ ಯಡಿಯೂರಪ್ಪ ತಾನು ದಶಕಗಳ ಕಾಲ ತೊಟ್ಟಿದ್ದ ಆರೆಸ್ಸೆಸ್ ಚಡ್ಡಿಯನ್ನು ಕಳಚಲು ನಿರ್ಧರಿಸಿದ್ದರೂ ಅದು ಅವರ ಸೊಂಟದಿಂದಾಚೆಗೆ ಇಳಿದಿರಲಿಲ್ಲ. ತನ್ನನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿದ್ದ ಬಿಜೆಪಿಯ ಸಹವಾಸವೇ ಸಾಕೆಂದು ಯಡ್ಡಿ ಕೆಜೆಪಿ ಕಟ್ಟಿ ತೆಂಗಿನಕಾಯಿ ನಿವಾಳಿಸಿ ತೆಗೆದು ಹೊಡೆದದ್ದೇ ಬಂತು. 2013ರ ಅಸೆಂಬ್ಲಿ ಚುನಾವಣೆಯಲ್ಲಿ ಬಿಜೆಪಿಯನ್ನು ನೆಲ ಕಚ್ಚುವಂತೆ



ಮಾಡುವುದಲ್ಲದೆ, ಕಾಂಗ್ರೆಸ್ ಪಕ್ಷವನ್ನೇ ನಾಶಮಾಡುವ ಶಪಥ ಗೈದಿದ್ದ ಯಡ್ಡಿ ತಾವೇ ಮಕಾಡೆ ಮಲಗಿಬಿಟ್ಟರು. ಅವತ್ತೇ ಯಡ್ಡಿಗೆ ಅರ್ಥವಾಗಿ ಹೋಗಿತ್ತು: "ಬಿಜೆಪಿ ಬಿಟ್ಟರೆ ನನಗೆ ರಾಜ್ಯದಲ್ಲಿರಲಿ, ಶಿವಮೊಗ್ಗದಲ್ಲೂ ಅಸ್ತಿತ್ವ ಇಲ್ಲ" ಎಂದು.

ಆಗಲೇ ಯಡ್ಡಿ "ನಾವು ತಪ್ಪು ಮಾಡಿದೆವು. ಈಗ ನಮ್ಮ ತಪ್ಪಿನ ಅರಿವಾಗಿದೆ. ನಾವು ಮಾಡಿದ ತಪ್ಪಿನಿಂದಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬರುವಂತಾಯಿತು" ಎಂಬ ಹೊಸ ಜಪ ಶುರುಹಚ್ಚಿಕೊಂಡರು. ಆದರೆ ಮಕಾಡೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂದ ಭಂಡ ಜಟ್ಟಿಯಂತೆ ಈಶ್ವರಪ್ಪ ಮತ್ತು ಅನಂತಕುಮಾರ್ ತರಹದ ಬಿಜೆಪಿ ನಾಯಕರು "ನಮ್ಮ ಪಾರ್ಟಿ ಸೋತರೇನಾಯಿತು. ಯಡ್ಡಿ ಎಂಬ ಪೀಡೆ ತೊಲಗಿತು ಎನ್ನುವ ಸಮಾಧಾನವಾದರೂ ಇದೆ" ಎಂದು ರಾಗ ಎಳೆಯಲಾರಂಭಿಸಿದರು.

ಇಷ್ಟರ ಮಧ್ಯೆಯೂ ಯಡ್ಡಿ ಎಂಬ ಲಿಂಗಾಯತ ಲೀಡರ್ ಇಲ್ಲದಿದ್ದರೆ ತಾವು ರಾಜ್ಯದಲ್ಲಿ ಎಂದೂ ಮತ್ತೆ ಅಧಿಕಾರ ಪಡೆಯುವುದು ಕನಸಿನ ಮಾತು ಎಂದು ಹಲವು ಬಿಜೆಪಿ ನಾಯಕರು ಕಣ್ಣೀರಿಡಲಾರಂಭಿಸಿದರು. ಅದರಲ್ಲೂ ಲೋಕಸಭಾ ಚುನಾವಣೆಗೆ ಯಡ್ಡಿಯ ಇರುವಿಕೆ ಅತ್ಯಗತ್ಯ ಎಂದು ಕೆಲವರು ದೆಹಲಿಯ ಚೆಡ್ಡಿ ನಾಯಕರ ಮುಂದೆ ಅವಲತ್ತುಕೊಳ್ಳಲಾರಂಭಿಸಿದರು.


ಅದಕ್ಕೆಲ್ಲ ಸರಿಯಾಗಿ ಬಿಜೆಪಿ ಮತ್ತು ಕೆಜೆಪಿ ನಡುವೆ ದಾವಣಗೆರೆಯ ಚೆಡ್ಡಿ ಸಂಸದ ಸಿದ್ದೇಶ್ವರ ರಾಜಕೀಯ ಬ್ರೋಕರ್‌ನಂತೆ ಕಾರ್ಯಾಚರಣೆ ಪ್ರಾರಂಭಿಸಿದರು. ಮತ್ತೋರ್ವ ಸಮಯಸಾಧಕ ರಾಜಕಾರಣಿ ಡಿ.ಬಿ. ಚಂದ್ರೇಗೌಡ ಟಿವಿ ಚಾನೆಲ್‌ಗಳಲ್ಲಿ ಕೂತು "ಯಡಿಯೂರಪ್ಪ ಮತ್ತೆ ಬಿಜೆಪಿಗೆ ಮರಳಬೇಕು" ಎಂದು ಚರ್ಚಿಸಲಾರಂಭಿಸಿದರು. ಬಿಜೆಪಿಯ ಬ್ರಾಹ್ಮಣಶಾಹಿ ರಾಜಕಾರಣಿಗಳಿಗೆ ಯಡ್ಡಿಯ ಮರು ಆಗಮನ ಬೇಡವಾಗಿದ್ದರೂ ಅಧಿಕಾರದ ಕನಸು ಅವರನ್ನೆಲ್ಲ ಮೂಕರನ್ನಾಗಿಸಿತು.


2014ರ ಸಂಸತ್ ಚುನಾವಣೆಯಲ್ಲಿ ಸಾಧ್ಯವಾದಷ್ಟು ಸೀಟುಗಳನ್ನು ಗೆದ್ದು ನರಹಂತಕ ನರೇಂದ್ರ ಮೋದಿಯನ್ನು ಪ್ರಧಾನಿ ಹುದ್ದೆಯಲ್ಲಿ ಕೂರಿಸುವ ಕನಸು ಕಾಣುತ್ತಿರುವ ಚೆಡ್ಡಿ ನಾಯಕರು ಯಾವ ಯಡ್ಡಿಯನ್ನು ಭ್ರಷ್ಟ ಎಂದು ಅಧಿಕಾರದ ಸ್ಥಾನದಿಂದ ಒದ್ದೋಡಿಸಿದ್ದರೋ ಅದೇ ಯಡ್ಡಿಯನ್ನು ಮತ್ತೆ ಮನೆಗೆ ಸೇರಿಸಿಕೊಳ್ಳಲು ಹಸಿರುನಿಶಾನೆ ತೋರಿದರು. ಅನ್ನ ಹಳಸಿತ್ತು ನಾಯಿ ಹಸಿದಿತ್ತು ಎಂಬಂತೆ ಯಡ್ಡಿ ಕೂಡ ತಾನು ಮಾಡಿದ್ದ ಎಲ್ಲಾ ಶಪಥಗಳನ್ನು ಮರೆತು ತಾವೇ ಕಟ್ಟಿದ್ದ ಕೆಜೆಪಿಗೆ ತರ್ಪಣ ಬಿಟ್ಟು ಚೆಡ್ಡಿಗಳ ಮನೆಯನ್ನು ಸೇರಿದರು.

ಯಡ್ಡಿಯ ಪುನರ್ ಎಂಟ್ರಿಯಿಂದಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ರಾಜಕೀಯ ಬಿರುಗಾಳಿಯೇ ಬೀಸುತ್ತದೆ ಎಂದು ಆಶಿಸಿದ್ದವರಿಗೆಲ್ಲಾ ಈಗ ಭ್ರಮನಿರಸನವಾಗುವ ಸೂಚನೆಗಳು ಕಾಣಿಸುತ್ತಿವೆ. ಯಾಕೆಂದರೆ ಮೊದಲನೆಯದಾಗಿ, ಯಡ್ಡಿಯ ಪುನರಾಗಮನದಿಂದ ಚೆಡ್ಡಿ ಪಕ್ಷದ ಸಾಂಪ್ರದಾಯಿಕ ಬೆಂಬಲಿಗರು ಉತ್ಸುಕರಾಗಿಲ್ಲ. ಎರಡನೆಯದಾಗಿ, ಬಿಜೆಪಿಯ ಕಾರ್ಯಕರ್ತರು "ಶಿವಮೊಗ್ಗದಲ್ಲಿ ಬಿಜೆಪಿಗಿದ್ದ ಅಸ್ತಿತ್ವವನ್ನೇ ನೆಲಸಮ ಮಾಡಿದವನನ್ನು ನಾವು ಯಾವ ಮುಖ ಇಟ್ಟುಕೊಂಡು ಬೆಂಬಲಿಸಬೇಕು?" ಎಂಬ ಮನಸ್ಥಿತಿಯಲ್ಲಿದ್ದಾರೆ. ಮೂರನೆಯದಾಗಿ, ಆರೆಸ್ಸೆಸ್‌ನ ಚೆಡ್ಡಿಗಳು "ಇವನು ಮತ್ತೆ ವಕ್ಕರಿಸಿದನಲ್ಲ" ಎಂದು ಗೊಣಗಿಕೊಳ್ಳುತ್ತಿದ್ದಾರೆ. ಹಾಗೆಯೇ ಸ್ಥಳೀಯ ಬ್ರಾಹ್ಮಣ ಮತದಾರರು ಯಡ್ಡಿಯ ರಾಜಕೀಯ ಚೆಲ್ಲಾಟವನ್ನೇ ವಿಕೃತ ಎಂದು ಬಣ್ಣಿಸತೊಡಗಿದ್ದಾರೆ. ಹೀಗೆ ಚೆಡ್ಡಿ ವಲಯದಲ್ಲೇ ಯಡ್ಡಿ ಬಗ್ಗೆ ಅಸಮಾಧಾನ ಇದೆ.

ಬುಸುಗುಡುತ್ತಿರುವ ಆಯನೂರು


ಬಿಜೆಪಿಯಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ಮಾಜಿ ಲೋಕಸಭಾ ಸದಸ್ಯ ಆಯನೂರು ಮಂಜುನಾಥ ಯಡ್ಡಿಯ ಪುನರಾಗಮನದಿಂದ ಆಕ್ರೋಶಗೊಂಡಿದ್ದಾರೆ. 2009ರ ಪಾರ್ಲಿಮೆಂಟ್ ಚುನಾವಣೆಯಲ್ಲಿ ಟಿಕೆಟ್ ಪಡೆಯಲು ಆಯನೂರು ಪ್ರಯತ್ನಿಸಿದ್ದಾಗ ಇದೇ ಯಡ್ಡಿ ಅಡ್ಡಗಾಲು ಹಾಕಿ ಬಿಜೆಪಿ ಟಿಕೆಟ್‌ಅನ್ನು ತಮ್ಮ ಪುತ್ರರತ್ನ ರಾಘವೇಂದ್ರನಿಗೆ ಕೊಟ್ಟಿದ್ದರು.







ಆನಂತರ ಯಡ್ಡಿ ಬಿಜೆಪಿಯನ್ನೇ ತೊರೆದು ಕೆಜೆಪಿ ಕಟ್ಟಿದಾಗ ಮುಂದಿನ ಪಾರ್ಲಿಮೆಂಟ್ ಚುನಾವಣೆಯ ಸಂದರ್ಭದಲ್ಲಿ ತನಗೇ ಬಿಜೆಪಿ ಟಿಕೆಟ್ ಎಂಬ ನೆಮ್ಮದಿಯಲ್ಲಿ ಆಯನೂರು ಮಂಜುನಾಥ್ ಇದ್ದರು. ಆದರೀಗ ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷಲಿ ಎಂಬಂತೆ ಯಡ್ಡಿ ಮತ್ತೆ ಬಿಜೆಪಿಯಲ್ಲಿ ವಕ್ಕರಿಸಿದ್ದಾರೆ! ಅಷ್ಟೇ ಅಲ್ಲ, ಆಯನೂರರ ದುರಾದೃಷ್ಟಕ್ಕೆ ಈ ಬಾರಿ ಪುತ್ರ ರಾಘವೇಂದ್ರನ ಬದಲಿಗೆ ಯಡ್ಡಿಯೇ ಶಿವಮೊಗ್ಗೆಯಿಂದ ಸ್ಪರ್ಧಿಸಿ ಮೋದಿಯ 'ಸಂಭಾವನೀಯ' ಕೇಂದ್ರ ಸಂಪುಟದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳಲು ಸಜ್ಜಾಗುತ್ತಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿವೆ!!

(ಅಂದಹಾಗೆ, ಸದಾ ತಮ್ಮ ಆಪ್ತೆ ಶೋಭಾ ಕರಂದ್ಲಾಜೆಯ ಭವಿಷ್ಯದ ಬಗ್ಗೆ ಯೋಚಿಸುವ ಯಡ್ಡಿ ತಾವೊಬ್ಬರೇ ದೆಹಲಿಗೆ ಹೋಗುವುದು ಬೇಡ, ತಮ್ಮ ಜೊತೆಗೆ ಶೋಭಾ ಕೂಡ ಇದ್ದರೇ ಅದಕ್ಕೊಂದು ಶೋಭೆ ಇರುತ್ತದೆ ಎಂಬ ಕಾರಣಕ್ಕೋ ಏನೋ, ಶೋಭಾಗೆ ಬಿಜೆಪಿ ಮೈಸೂರ್ ಲೋಕಸಭಾ ಕ್ಷೇತ್ರದ ಟಿಕೆಟ್ ಕೊಡಬೇಕೆಂದು ತಾಕೀತು ಮಾಡುತ್ತಿದ್ದಾರಂತೆ.)







ಆದೇನೇ ಇರಲಿ, ಸಂಸದನಾಗುವ ತನ್ನ ಕನಸಿಗೆ ಕೊಳ್ಳಿ ಇಟ್ಟಿರುವ ಯಡ್ಡಿಯ ವಿರುದ್ಧ ಹಲ್ಲು ಕಡಿಯುತ್ತಿರುವ ಆಯನೂರು ಮಂಜುನಾಥ್ "ಆತ ಇಲ್ಲಿಂದ ಹೇಗೆ ಗೆಲ್ಲುತ್ತಾನೆ ನಾನು ನೋಡ್ತಿನಿ" ಎಂದು ಒಳಗೊಳಗೇ ಶಪಥ ಗೈದಿದ್ದರೆ ಅಚ್ಚರಿ ಇಲ್ಲ.

ಈಶ್ವರಿಯ ಸಂಚು

ಯಡ್ಡಿಯ ಬದ್ಧ ವೈರಿಯಂತಿರುವ ಬಿಜೆಪಿಯ ಮತ್ತೊಬ್ಬ ನಾಯಕ ಈಶ್ವರಪ್ಪನೂ ಯಡ್ಡಿ ಪಾರ್ಲಿಮೆಂಟಿಗೆ ನಿಲ್ಲುವುದನ್ನೇ ತವಕದಿಂದ ಕಾಯುತ್ತಿದ್ದಾರೆ. ತನ್ನನ್ನು ವಿಧಾನಸಭೆ ಚುನಾವಣೆಯಲ್ಲಿ ಯಡ್ಡಿ ಸೋಲಿಸಿದಂತೆ ತಾನು ಯಡ್ಡಿಯನ್ನು ಲೋಕಸಭೆ ಚುನಾವಣೆಯಲ್ಲಿ ಒಳಗೊಳಗಿಂದಲೇ ಸೋಲಿಸಲು ಈಶ್ವರಿ ಹೊಂಚುಹಾಕುತ್ತಿದ್ದಾರೆ.

ಸಾಗರದಲ್ಲಿ ಬಿಜೆಪಿಯ ಮಾಜಿ ಶಾಸಕ ಬೇಳೂರು ಗೋಪಾಲಕೃಷ್ಣ ಕೂಡ ಯಡ್ಡಿಯ ವಿರುದ್ಧ ಈಶ್ವರಪ್ಪನಷ್ಟೇ ಸಿಟ್ಟು ಇಟ್ಟುಕೊಂಡು ಯಡ್ಡಿ ಪಾರ್ಲಿಮೆಂಟಿಗೆ ನಿಲ್ಲುವುದನ್ನೇ ಎದುರು ನೋಡುತ್ತಿದ್ದಾನೆ.

ಇನ್ನು ಸೊರಬದಲ್ಲಿ ಹಾಲಪ್ಪ ಹೆಸರು ಕೆಡಿಸಿಕೊಂಡು ಕಂಗಾಲಾಗಿರುವುದರಿಂದ ಆತನಿಂದ ಯಡ್ಡಿಗೆ ನಯಾಪೈಸೆಯ ಲಾಭವಿಲ್ಲ. ತೀರ್ಥಹಳ್ಳಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಸಜ್ಜನ ಕಿಮ್ಮನೆ ರತ್ನಾಕರ ಅವರಿಂದಾಗಿ ಮೋದಿಯ ಹವಾ ಇರಲಿ ಯಡ್ಡಿಯ ಹವಾ ಕೂಡ ಇಲ್ಲದಂತಾಗಿದೆ. ಶಿವಮೊಗ್ಗದ ಶಾಸಕ ಪ್ರಸನ್ನಕುಮಾರ ಕೂಡ ಕಾಂಗ್ರೆ ಪರವಾದ ಅಲೆ ಉಳಿಸಿಕೊಂಡಿದ್ದಾರೆ.

ಯಡ್ಡಿಗೆ ಜಯ ಸುಲಭವಲ್ಲ

2013ರ ಅಸೆಂಬ್ಲಿ ಚುನಾವಣೆಯಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಬಿಜೆಪಿ ತಳಕಚ್ಚಿತ್ತು, ಅದಕ್ಕೆ ಕಾರಣ ಯಡಿಯೂರಪ್ಪ ಎಂಬುದರ ಬಗ್ಗೆ ಯಾವ ಅನುಮಾನವೂ ಇಲ್ಲ. ಆದರೆ ವಿಪರ್ಯಾಸ ಯಾವುದೆಂದರೆ ಈ ಜಿಲ್ಲೆಯಲ್ಲಿ ಯಡ್ಡಿಯೂ ಹೀನಾಯವಾಗಿ ಸೋತದ್ದು. "ನಾನಿದ್ದ ಪಕ್ಷಕ್ಕೆ ಶಿವಮೊಗ್ಗ" ಎಂಬ ಅಹಂಕಾರದಲ್ಲಿದ್ದ ಯಡ್ಡಿಯ ಕೈಯನ್ನು ಅವರ ಶಿಕಾರಿಪುರ ಅಸೆಂಬ್ಲಿ ಕ್ಷೇತ್ರವೊಂದು ಮಾತ್ರ ಹಿಡಿದಿದ್ದರೆ ಜಿಲ್ಲೆಯಲ್ಲಿರುವ ಇತರೆ ಆರು ಕ್ಷೇತ್ರಗಳು ಕೈಕೊಟ್ಟಿದ್ದವು.

ಶಿವಮೊಗ್ಗ ಗ್ರಾಮಾಂತರದಿಂದ ಜೆಡಿಎಸ್‌ನ ಶಾರದಾ ಪೂರ್ಯಾನಾಯ್ಕ, ಶಿವಮೊಗ್ಗ ನಗರ ಕ್ಷೇತ್ರದಿಂದ ಕಾಂಗ್ರೆಸ್ ಪಕ್ಷದ ಪ್ರಸನ್ನಕುಮಾರ್, ಭದ್ರಾವತಿಯಿಂದ ಜೆಡಿಎಸ್‌ನ ಅಪ್ಪಾಜಿಗೌಡ, ತೀರ್ಥಹಳ್ಳಿಯಿಂದ ಕಾಂಗ್ರೆಸ್‌ನ ಕಿಮ್ಮನೆ ರತ್ನಾಕರ, ಸಾಗರ ಕ್ಷೇತ್ರದಿಂದ ಕಾಂಗ್ರೆಸ್‌ನ ಕಾಗೋಡು ತಿಮ್ಮಪ್ಪ, ಸೊರಬ ಕ್ಷೇತ್ರದಿಂದ ಜೆಡಿಎಸ್‌ನ ಮಧು ಬಂಗಾರಪ್ಪ ಗೆದ್ದಿದ್ದರು. ಶಿಕಾರಿಪುರದಿಂದ ಸ್ವತಃ ಯಡ್ಡಿ ಕೆಜೆಪಿಯಿಂದ ಗೆದ್ದಿದ್ದರ ಫಲವಾಗಿ ಇಡೀ ಜಿಲ್ಲೆಯಲ್ಲಿ ಬಿಜೆಪಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿತ್ತು.


ಶಿವಮೊಗ್ಗ ಪಾರ್ಲಿಮೆಂಟ್ ಕ್ಷೇತ್ರದಲ್ಲಿ ಲಿಂಗಾಯತರ ಮತ್ತು ಕುರುಬರ ಮತಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಲಿಂಗಾಯತ ಮತಗಳಲ್ಲಿ ಬಹುಪಾಲು ಯಡ್ಡಿಗೆ ಬರಬಹುದಾದರೂ ಆತನ ಚಂಚಲ ರಾಜಕಾರಣ ಮತ್ತು ಸರ್ವಾಧಿಕಾರಿ ಧೋರಣೆ ಲಿಂಗಾಯತ ಸಮುದಾಯದಲ್ಲೇ ಬೇಸರ ಮೂಡಿಸಿದೆ. ಇನ್ನು ಕುರುಬರಲ್ಲಿ ಒಂದೆಡೆ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಬೆಂಬಲಿಸುವ ದೃಷ್ಟಿಯಿಂದ ಮತ್ತು ಇನ್ನೊಂದೆಡೆ ಈಶ್ವರಪ್ಪನ ಕುತಂತ್ರದಿಂದ ಯಡ್ಡಿಗೆ ಕೈಕೊಡುವ ಸಾಧ್ಯತೆಯೇ ಹೆಚ್ಚಾಗಿವೆ. ಉಳಿದ ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತರು ಮೋದಿಯ ಮುಖ ನೋಡಿಯೇ ಬೆಚ್ಚಿಬೀಳುತ್ತಿದ್ದಾರೆ.

ಈ ಎಲ್ಲಾ ಅಂಶಗಳು ಚುನಾವಣೆಯಲ್ಲಿ ಯಡ್ಡಿಯ ವಿರುದ್ಧ ಕೆಲಸ ಮಾಡುವುದು ಗ್ಯಾರಂಟಿ.

● ಟಿ.ಎನ್.ಷಣ್ಮುಖ

ಯಡ್ಡಿಯ ಚಂಚಲು ರಾಜಕಾರಣ

2009ರಲ್ಲಿ ಶಿವಮೊಗ್ಗ ಪಾರ್ಲಿಮೆಂಟ್ ಚುನಾವಣೆಯಲ್ಲಿ ಜಿದ್ದಿನ ರಾಜಕಾರಣವೇ ನಡೆದಿತ್ತು. ಕಾಂಗ್ರೆಸ್‌ನಿಂದ ಬಂಗಾರಪ್ಪ, ಬಿಜೆಪಿಯಿಂದ ಯಡ್ಡಿ ಪುತ್ರ ರಾಘವೇಂದ್ರ ಕಣದಲ್ಲಿದ್ದರು. ಒಂದೆಡೆ ಆ ಚುನಾವಣೆಯು ಬಂಗಾರಪ್ಪನವರ ಪಾಲಿಗೆ ತಮ್ಮ ರಾಜಕಾರಣದ ಸತ್ವಪರೀಕ್ಷೆಯಾಗಿದ್ದರೆ ಇನ್ನೊಂದು ಕಡೆ ಯಡ್ಡಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು.



ಬಂಗಾರಪ್ಪ ಸೊರಬದಿಂದ ಹಲವಾರು ಬಾರಿ ಶಾಸಕರಾಗಿದ್ದವರು. ರಾಜ್ಯದ ಅಸಂಖ್ಯಾತ ಹಿಂದುಳಿದ ವರ್ಗಗಳ ನಾಯಕರಾಗಿದ್ದವರು. ಆ ಶಕ್ತಿಯಿಂದಲೇ ಅವರು ರಾಜ್ಯದ ಮುಖ್ಯಮಂತ್ರಿಯೂ ಆಗಿ ಮೆರೆದವರು. ಹಾಗೆಯೇ ಶಿವಮೊಗ್ಗದಿಂದ ಸಂಸದರಾಗಿ ರಾಷ್ಟ್ರ ರಾಜಕಾರಣದಲ್ಲೂ ಕೈ ಆಡಿಸಿದವರು. ಜೊತೆಗೆ ಹಲವಾರು ಬಾರಿ ಪಕ್ಷ ಬದಲಾಯಿಸುವಲ್ಲಿ ಮತ್ತು ಪಕ್ಷ ಕಟ್ಟುವಲ್ಲಿಯೂ ಬಂಗಾರಪ್ಪ ಸಾಹಸ ಮಾಡಿದವರು. ಇಂಥಾ ಬಂಗಾರಪ್ಪನವರ ಎದುರು ಎಳಸು ರಾಘವೇಂದ್ರ ಯಾವ ಲೆಕ್ಕಕ್ಕೂ ಇಲ್ಲದ ಅಭ್ಯರ್ಥಿಯಾಗಿದ್ದ.

ಆದರೆ ಬಂಗಾರಪ್ಪನವರ ದುರದೃಷ್ಟಕ್ಕೆ ಅಷ್ಟು ಹೊತ್ತಿಗೆ ರಾಜ್ಯದ ರಾಜಕೀಯ ಚಿತ್ರಣವೇ ಬದಲಾಗಿತ್ತು.


ತಮ್ಮ ಕೈಗೆ ಜೆಡಿಎಸ್ ಅಧಿಕಾರ ಕೊಡಲಿಲ್ಲ ಎಂದು ಹೋದಲೆಲ್ಲ ಕಣ್ಣೀರಿಟ್ಟ ಯಡ್ಡಿ ಪರ ರಾಜಕೀಯ ಅಲೆ ಸೃಷ್ಟಿಯಾಗಿತ್ತು. ಬಂಗಾರಪ್ಪನವರೇ ರಾಜಕೀಯವಾಗಿ ಬೆಳೆಸಿದ್ದ ಬೇಳೂರು ಗೋಪಾಲಕೃಷ್ಣ ಸೊರಬದಲ್ಲಿ ಹಾಲಪ್ಪ ಬಂಗಾರಪ್ಪನವರನ್ನು ತೊರೆದು ಚೆಡ್ಡಿಗಳ ಪರ ನಿಂತಿದ್ದರು. ಮತದಾರರೂ ಬಂ ಅವರ ಪಕ್ಷಾಂತರ ಮತ್ತು ಅಸ್ಥಿರ ರಾಜಕಾರಣದ ಬಗ್ಗೆ ಜಿಗುಪ್ಸೆಗೊಂಡಿದ್ದರು.

ಇದೆಲ್ಲದರೊಂದಿಗೆ ಅಪ್ಪ ಯಡ್ಡಿ ಮತ್ತು ಮಗ ರಾಘವೇಂದ್ರ ಹಣ ಮತ್ತು ಹೆಂಡದ ಹೊಳೆಯನ್ನೇ ಹರಿಸಿದ್ದರ ಪರಿಣಾಮ ಬಂಗಾರಪ್ಪ 57,893 ಮತಗಳಿಂದ ಸೋಲುಂಡರು.

20009ರ ಚುನಾವಣೆಯ ಮುನ್ನ ಬಂಗಾರಪ್ಪ ಬಿಜೆಪಿ ಮತ್ತು ಸಮಾಜವಾದಿ ಪಕ್ಷಗಳಲ್ಲಿ ಅಲೆದಾಡಿ ಕಾಂಗ್ರೆಸ್ ಪಕ್ಷಕ್ಕೆ ಹಿಂದಿರುಗಿದ್ದರು. ಅದೂ ಅವರ ಸೋಲಿಗೆ ಕಾರಣವಾಗಿತ್ತು. ಈಗ ಅಂತಹದ್ದೇ ಪರಿಸ್ಥಿತಿಯನ್ನು ಯಡ್ಡಿ ಎದುರಿಸುತ್ತಿದ್ದಾರೆ.

ಬಿಜೆಪಿ ಬಿಟ್ಟು, ಕೆಜೆಪಿ ಕಟ್ಟಿ, ಈಗ ತಾನೇ ಕಟ್ಟಿದ ಕೆಜೆಪಿಯ ಬಾಗಿಲು ಮುಚ್ಚಿ ಮತ್ತೆ ಬಿಜೆಪಿಗೆ ಯಡ್ಡಿ ಹೋಗಿದ್ದಾರೆ. ಇದು ಚುನಾವಣೆಯಲ್ಲಿ ಸಮಸ್ಯೆಯಾಗಿ ಅವರನ್ನು ಅಟಕಾಯಿಸಿಕೊಂಡರೆ ಅಚ್ಚರಿ ಇಲ್ಲ. ●

ಹತಾಶೆ, ಖಿನ್ನತೆ, ಅವಮಾನ, ಅಪಹಾಸ್ಯಗಳೆಲ್ಲ ...ಟ್ಟಿಗೆ ದಾಳಿ ಮಾಡಿದರೆ ಏನಾಗಬಹುದು? ತೆಲುಗಿನ ...ದಯೋನ್ಮುಖ ನಟ ಉದಯ್ ಕಿರಣ್‌ನ ದುರಂತ ...ವು ಈ ಪ್ರಶ್ನೆಗೆ ಉತ್ತರವಾಗಬಲ್ಲದು. ಅವಕಾಶಗಳು ...ಲ್ಲ, ಸಿಕ್ಕ ಅವಕಾಶಗಳೂ 'ಪ್ರಭಾವಿ' ಕಾರಣಗಳಿಂದ ...ಹೋಗುತ್ತಿವೆ ಎಂಬ ಕ್ಷುಲ್ಲಕ ಕಾರಣಕ್ಕೆ ಬೇಸತ್ತ ...ನ್ನ ಜಿಮ್‌ಕೋಣೆಯಲ್ಲಿ ನೇಣು ಬಿಗಿದು ಜೀವಕ್ಕೆ ...ೀ ಹಾಡಿಕೊಂಡಿದ್ದಾನೆ. ಖಿನ್ನತೆಯ ಹೊರತಾಗಿ ...ಯ್ ಕಿರಣ್ ಸಾವಿಗೆ ಮತ್ತೊಂದು ಮಗ್ಗುಲೂ ... ಬಹುಕೋಟಿ ವಹಿವಾಟಿನ ತೆಲುಗು ಸಿನಿ ...ಯಾವೇ ತುಂಬಿರುವ ಆ ಮಗ್ಗುಲಿನಲ್ಲಿ ತೆರೆ ...ನ ಸೂಪರ್‌ಹಿಟ್ ಹೀರೋಗಳೆ ಖಳನಾಯಕರು! ... 'ಬಿಗ್' ಕುಟುಂಬಗಳ ಬಿಗಿಹಿಡಿತದಲ್ಲಿ ...ಯಾಗಿರುವ ಟಾಲಿವುಡ್‌ನ ಕರಾಳಮುಖವನ್ನೂ ...ಯ್ ಸಾವು ತೆರೆದಿಟ್ಟು ಹೋಗಿದೆ.



...ಉದಯ್ ಒಬ್ಬ ಸೀದಾಸಾದಾ ...ಗ. ಬಹುಪಾಲು ಯುವಕರಂತೆ ...ನ ಬದುಕಿನಲ್ಲಿ ತನ್ನ ಕೆರಿಯರ್ ...ಳ್ಳಬೇಕೆಂದು ಟಾಲಿವುಡ್‌ಗೆ ...ರ್ಪಣೆ ಮಾಡಿದವನು. ಅವನ ... ಗಾಡ್‌ಫಾದರ್ ಎನ್ನಬಹುದಾದ ...ನ ಶಕ್ತಿಯೂ ಇರಲಿಲ್ಲ, ಆದರೂ ...ೊಳಗಿದ್ದ ಪ್ರತಿಭೆ ತೆಲುಗು ...ಂಗದಲ್ಲಿ ಅವನಿಗೊಂದು ಗಟ್ಟಿ ... ಕಲ್ಪಿಸುವ ಸೂಚನೆ ನೀಡಿತ್ತು. ...0ರಲ್ಲಿ ಚಿತ್ರಬದುಕಿಗೆ ಮೇಕಪ್ ...ದ ಆ ಹುಡುಗನ ಮೊದಲ

ಈಗಿನ ನಾಯಕರುಗಳ ಪಟ್ಟಿ ಮಾಡಿದರೆ ಅದರಲ್ಲಿ ಮುಕ್ಕಾಲು ಪಾಲು ಈ ಬಿಗ್ ಫ್ಯಾಮಿಲಿಯ ನಂಟಸವರೇ ಆಗಿರುತ್ತಾರೆ. ಚಿರಂಜೀವಿ, ಪವನ್‌ಕಲ್ಯಾಣ್, ರಾಮ್‌ಚರಣ್ ತೇಜ, ಅಲ್ಲು ಅರ್ಜುನ್ ಇವರೆಲ್ಲ ಚಿರು ಕ್ಯಾಂಪಿನವರಾದರೆ ವೆಂಕಟೇಶ್, ನಾಗಾರ್ಜುನ, ನಾಗಚೈತನ್ಯ ಇವರೆಲ್ಲಾ ದಗ್ಗುಬಟಿ ಫ್ಯಾಮಿಲಿಯವರು. ಇನ್ನು ಎನ್‌ಟಿಆರ್ ಕುಟುಂಬದಲ್ಲಿ ಜೂನಿಯರ್ ಎನ್‌ಟಿಆರ್‌ವರೆಗೆ ಎಲ್ಲರೂ ನಾಯಕರೆ! ಹೀಗಿರುವಾಗ ಹೊಸಬರಿಗೆ ಅವಕಾಶ ಸಿಗುವುದಾದರೂ ಹೇಗೆ? ಹಾಗೊಮ್ಮೆ ಹೊಸಬರು ನೆಲೆನಿಲ್ಲುವ ಪ್ರಯತ್ನ ಮಾಡಿದರೆ ಇಷ್ಟೆಲ್ಲಾ ಪ್ರಭಾವ ಹೊಂದಿರುವ ಬಾಸ್‌ಗಳು 'ಸ್ಪರ್ಧೆ'(?)ಯಿಂದ ಹಿಂದುಳಿಯಲಾದೀತೆ? ತಮ್ಮ ಹಿಂದೆ ಸಣ್ಣದಾಗಿಯಾದರೂ ಗಾಡ್‌ಫಾದರ್ ಇಲ್ಲದ ಉದಯ್ ಕಿರಣ್‌ನಂತಹ ಪ್ರತಿಭೆಗಳು ಘಟಾನುಘಟಿಗಳ ಚಕ್ರವ್ಯೂಹದಲ್ಲಿ ಸಿಕ್ಕಿ ನಜ್ಜುಗುಜ್ಜಾಗದೆ ಬೇರೆ ವಿಧಿಯೇ ಇಲ್ಲ.

ಈ ಕುಟುಂಬಗಳಲ್ಲಿ ಹೆಸರಾಂತ ನಾಯಕ ನಟರುಗಳಿದ್ದಾರೆ ಎಂಬ ಒಂದೇ ಒಂದು ಕಾರಣಕ್ಕೆ ಈ ಅಪವಾದ ಹೊರಿಸಲಾಗುತ್ತಿಲ್ಲ. ಅದಕ್ಕೆ ಮತ್ತೂ ಒಂದು ಕಾರಣವಿದೆ. ಏನೆಂದರೆ ಆಂಧ್ರಪ್ರದೇಶದಲ್ಲಿ ಸಕ್ರಿಯವಾಗಿರುವ **1475** ಥಿಯೇಟರ್‌ಗಳಲ್ಲಿ ಸರಿಸುಮಾರು **1,000** ಥಿಯೇಟರ್‌ಗಳು ಎರಡು ಬಿಗ್ ಕುಟುಂಬಗಳ ನಿಯಂತ್ರಣದಲ್ಲಿವೆ. ಅಂದರೆ ಸಿನಿಮಾವೊಂದರ ಅಳಿವು ಉಳಿವು ಸಂಪೂರ್ಣವಾಗಿ ಈ ಕುಟುಂಬಗಳ ಮೇಲೆಯೇ ನಿಂತಿರುತ್ತದೆ. ಯಾವ ಸಿನಿಮಾವನ್ನು ಯಾವ ಡೇಟ್‌ಗೆ ರಿಲೀಸ್

ಬೆಳಕಿಗೆ ಬರುತ್ತಾರೆ; ಜನರೂ ಪ್ರೋತ್ಸಾಹಿಸುತ್ತಾರೆ. ಒಳಗೆ ಪ್ರತಿಭೆ ಇದ್ದ ಯಾರನ್ನೂ ಒಂದು ಕುಟುಂಬದಿಂದ ಹತ್ತಿಕ್ಕಲು ಸಾಧ್ಯವಿಲ್ಲ' ಎಂಬರ್ಥದ ಮಾತನ್ನಾಡಿದ್ದರು. ಅಂದರೆ ಉದಯ್‌ಗೆ ಅವಕಾಶಗಳು ಸಿಗದೇ ಇರುವುದಕ್ಕೆ ಆತನೊಳಗೆ ಪ್ರತಿಭೆ ಇಲ್ಲದ್ದೇ ಕಾರಣ ಎನ್ನುವುದು ಅವರ ಅಭಿಪ್ರಾಯ. ಆದರೆ ಆತನ ಮೊದಲ ಮೂರು ಚಿತ್ರಗಳ ಯಶಸ್ಸಿನ ಹಿಂದೆ ಅವನ ಪ್ರತಿಭೆ ಇರಲಿಲ್ಲವೆ. ಸತತ ಮೂರು ಗೆಲುವು ಕೊಟ್ಟ ನಟನಿಗೇ ಸಿನಿಮಾ ಸಿಗುವುದೇ ದುಸ್ತರವಾಗುವಂತದ್ದರ ಹಿಂದೆ ಪ್ರತಿಭೆಯನ್ನು ಹೊರತುಪಡಿಸಿ ಬೇರಾವ ಕಾರಣಗಳೂ ಇಲ್ಲವೆ?

ಚಿತ್ರರಂಗದ ಉದಯೋನ್ಮುಖ ನಟನೊಬ್ಬ ಆತ್ಮಹತ್ಯೆ ಮಾಡಿಕೊಂಡು ಸತ್ತಾಗ ಸೌಜನ್ಯಕ್ಕಾದರೂ ಈ ಕುಟುಂಬಗಳು ಭೇಟಿಯಾಗಿ (ವೆಂಕಟೇಶ್, ತಂದೆ ದಗ್ಗುಬಟಿ ರಾಮನಾಯ್ಡು ಹೊರತುಪಡಿಸಿ) ಸಾಂತ್ವನ ಹೇಳದಿದ್ದದ್ದು ಸಿನಿವ್ಯವಸ್ಥೆಯ ಹುಳುಕನ್ನು ಎತ್ತಿ ತೋರಿಸಿತ್ತು. ಅಲ್ಲದೆ ಆತನ ಅಂತ್ಯಸಂಸ್ಕಾರ ನಡೆಯುವಾಗ ನೆರೆದಿದ್ದ ಅಭಿಮಾನಿಗಳು ಚಿರಂಜೀವಿ ವಿರುದ್ಧ ಘೋಷಣೆ ಕೂಗಿ ಆತನ ವಿರುದ್ಧ ಬ್ಯಾನರ್ ಹಿಡಿದು ನಿಂತದ್ದು ಎಲ್ಲಾ ಆಪಾದನೆಗಳಿಗೆ ಪುಷ್ಟಿ ನೀಡುವಂತಿತ್ತು.

ಚಿರು ಪಾಲು ಹೆಚ್ಚು

ಟಾಲಿವುಡ್ ಸಿನಿ ಮಾಫಿಯಾದ ಬಿಗಿ ಹಿಡಿತ ಕೇವಲ ಉದಯ್ ಕಿರಣ್‌ಗೆ ಮಾತ್ರ ಸೀಮಿತವಾದದ್ದಲ್ಲ. ಪ್ರತಿಭೆ ಮೇಲೆ ಭರವಸೆ ಇರಿಸಿ ಬರುವ ಪ್ರತಿ ಹೊಸ ಮುಖವೂ ಆ ಸವಾಲುಗಳನ್ನು ಎದುರಿಸಲೇಬೇಕು. ಆದರೆ ಉದಯ್ ಕಿರಣ್ ಆತ್ಮಹತ್ಯೆಗೆ ಉದ್ದಿಮೆ ಮಾಫಿಯಾದ ಹೊರತಾಗಿಯೂ ಚಿರು ಕುಟುಂಬದ ಕಾಣಿಕೆ ದೊಡ್ಡದಿದೆ. ತನ್ನಂತೆ ಆಗಬೇಕೆಂದು ಹಂಬಲಿಸಿ ಬಂದ ಹುಡುಗನೊಬ್ಬನನ್ನು ಆತ್ಮಹತ್ಯೆಯಂತಹ ಅನಿವಾರ್ಯ

ಚಿರು ಫ್ಯಾಮಿಲಿಯ ಹೈಡ್ರಾಮ

ತೆರೆ ಮೇಲೆ ರೋಷಾವೇಶದ ಡೈಲಾಗ್ ಹೇಳಿ ಶಿಳ್ಳೆ ಗಿಟ್ಟಿಸುವ, ತನ್ನ ಕಟೌಟ್‌ಗೆ ಹಾಲಿನ ಅಭಿಷೇಕ ಮಾಡಿಸಿಕೊಳ್ಳುವ ಚಿರಂಜೀವಿಯ ವೈಯುಕ್ತಿಕ ಬದುಕು ವಿವಾದಗಳಿಂದಲೇ ಭರ್ತಿಯಾಗಿದೆ. ಆತನ ಮೊದಲ ಮಗಳು ಸುಶ್ಮಿತಾ ಮಾಡಿದ ರಾದ್ಧಾಂತಕ್ಕೆ, ನಿಷ್ಪಾಪಿ ನಟ ಉದಯ್ ಕಿರಣ್ ಆತ್ಮಹತ್ಯೆಗೆ ಶರಣಾಗಿದ್ದರೆ ಎರಡನೇ ಮಗಳು ಶ್ರೀಜಾ, ಸಿರೀಶ್ ಭಾರದ್ವಾಜ್ ಎಂಬ ಹುಡುಗನನ್ನು ಪ್ರೀತಿಸಿ ಮನೆಬಿಟ್ಟು ಹೋಗಿ ಮಾಧ್ಯಮಗಳ ಮುಂದೆ ಪೊಲೀಸ್ ಭದ್ರತೆಯಲ್ಲಿ ಮದುವೆಯಾಗಿದ್ದಲ್ಲದೆ ತನ್ನ ಮನೆಯವರಿಂದ ನಮ್ಮಿಬ್ಬರಿಗೂ ಜೀವ ಬೆದರಿಕೆ ಇದೆ ಎಂದು ದೂರು ಕೊಟ್ಟು ಸುದ್ದಿಯಾಗಿದ್ದಳು. ಕೊನೆಗೆ ಉಲ್ಟಾ ಹೊಡೆದ ಆಕೆ ತನ್ನ ಗಂಡ ಮತ್ತು ಅತ್ತೆಯ ಮೇಲೆಯೇ ವರದಕ್ಷಿಣೆ ಆರೋಪದ ಕಂಪ್ಲೇಂಟ್ ಕೊಟ್ಟು ವಾಪಾಸ್ ಅಪ್ಪನ ಮಡಿಲು ಸೇರಿದ್ದಾಳೆ. ಇನ್ನು ಚಿರು ತಮ್ಮ ಪವನ್ ಕಲ್ಯಾಣ್‌ನ ದಾಂಪತ್ಯ ಬದುಕೂ ಮೂರಾಬಟ್ಟೆಯಾಗಿದೆ. ಮೊದಲ ಹೆಂಡತಿಗೆ ಡೈವೋರ್ಸ್ ಕೂಡಾ ಕೊಡದೆ ರೇಣು ದೇಸಾಯ್ ಎಂಬ ನಟಿಯ ಜೊತೆ ಲಿವ್-ಇನ್ ದಾಂಪತ್ಯ ಆರಂಭಿಸಿದ್ದ. ಕೊನೆಗೆ ಮೊದಲ ಹೆಂಡತಿಗೆ ಐದು ಕೋಟಿ ಪರಿಹಾರ ನೀಡಿ ವಿಚ್ಛೇದನ ಪಡೆದು ರೇಣು ದೇಸಾಯ್‌ಳನ್ನು ಮದುವೆಯಾಗಿದ್ದ. ಆಕೆಗೆ ಒಂದು ಮಗು ಕೊಟ್ಟ ನಂತರ ಈಗ ಮತ್ತೊಬ್ಬಳತ್ತ ಅಲೆಯುತ್ತಿದ್ದಾನೆ ಎಂಬ ಸುದ್ದಿಗಳಿವೆ.

ತೆಲುಗು ನಟ ಉದಯ್ ಆತ್ಮಹತ್ಯೆಯ ಮತ್ತೊಂದು ಮಗ್ಗುಲು

ಟಾಲಿವುಡ್‌ಗೆ ಬೇಲಿ ಬಿಗಿದ 'ಬಿಗ್ ಬಾಸ್'ಗಳು!

...ರು ಸಿನಿಮಾಗಳು (ಚಿತ್ರಂ, ನುವ್ವುನೇನು, ಮನಸ್ಸಂತಾ ...) ಆಂಧ್ರದಲ್ಲಿ ಸೂಪರ್‌ಹಿಟ್ ಎನಿಸಿ 'ಹ್ಯಾಟ್ರಿಕ್ ...ರೊ' ಪಟ್ಟವನ್ನೂ ತಂದುಕೊಟ್ಟಿದ್ದವು. ತನ್ನದೇ ಅಭಿಮಾನಿ ... ಸೃಷ್ಟಿಸಿಕೊಂಡಿದ್ದ ಉದಯ್‌ಗೆ ತೆಲುಗು ಖ್ಯಾತ ...ಮೆಗಾಸ್ಟಾರ್ ಚಿರಂಜೀವಿಯೇ ಸಿನಿಸ್ಫೂರ್ತಿ. ತಾನು ...ಜೀವಿಯಂತೆ ಅದ್ಭುತ ನಟನಾಗಿ ಬೆಳೆಯಬೇಕೆಂದು ...ೀ ಹಲವಾರು ಬಾರಿ ಮನಬಿಚ್ಚಿ ಹೇಳಿಕೊಂಡದ್ದೂ ...ುಂಟು. ಹೊಸಪೀಳಿಗೆಯ ನಟನಾಗಿ ಅಭಿಮಾನಿಗಳಲ್ಲಿ ...ಹ ಭರವಸೆಯನ್ನೂ ಮೂಡಿಸಿದ್ದ. ವಿಪರ್ಯಾಸ ...ಂದರೆ ಅಂತಹ ಚಿರಂಜೀವಿ ಕುಟುಂಬದ ಪ್ರವೇಶವೇ ...ಯ್ ಕಿರಣ್ ಬದುಕಿನ ಗಾಳಿಪಟದ ಸೂತ್ರವನ್ನು ...ತ್ತು, ಯಾಕೆಂದರೆ ಟಾಲಿವುಡ್ ಸಮಸ್ತ ಸಾಮ್ರಾಜ್ಯವನ್ನು ...ಂತ್ರಿಸುವ (ಒಂದರ್ಥದಲ್ಲಿ ಬಿಗಿಮುಷ್ಠಿಯುಲ್ಲಿ ...ರುವ) ನಾಲ್ಕು ಕ್ಯಾಂಪ್‌ಗಳಲ್ಲಿ ಚಿರಂಜೀವಿಯದೂ ...ಾಗಿದೆ!

...'ಆ ನಲುಗುರು ಬಿಗ್‌ಬಾಸ್‌ಗಳು

...ಸಿನಿಮಾ ಈಗ ಕೇವಲ ಕಲೆಯಾಗಿ ಮಾತ್ರವೇ ...ದಿಲ್ಲ, ಅದೊಂದು ಲಾಭದಾಯಕ ಉದ್ಯಮ; ಅಷ್ಟೇ ...ುಸಿಯ ಪ್ರಪಂಚ. ಅಲ್ಲಿ ಹೆಜ್ಜೆ-ಹೆಜ್ಜೆಗೂ ಸ್ಪರ್ಧೆ. ಆ ... ಪಟ್ಟಭದ್ರ ಹಿತಾಸಕ್ತಿಯ ರೂಪ ಪಡೆದುಕೊಂಡುಬಿಟ್ಟರೆ ...ಜಮಾನಿಕೆಯ ಸಂಸ್ಕೃತಿ ತಾನೇತಾನಾಗಿ ಹುಟ್ಟಿಬಿಡುತ್ತದೆ. ...ವುಡ್‌ನಲ್ಲಿ ಅಂತಹ ಯಜಮಾನಿಕೆಯ ಸಾರಥ್ಯ ...ರೋದು ಚಿರಂಜೀವಿ, ಎನ್‌ಟಿಆರ್, ದಗ್ಗುಬಟಿ ...ಟೇಶ್ ಮತ್ತು ನಾಗಾರ್ಜುನ) ಹಾಗೂ ದಿಲ್ ರಾಜು ...ಟೇಶ್ವರ ಪ್ರೊಡಕ್ಷನ್) ಎಂಬ ನಾಲ್ಕು ಘಟಾನುಘಟಿ ...ುಂಬಗಳು. ದಗ್ಗುಬಟಿ ಕುಟುಂಬದ ಆಧಾರವಲ್ಲದೆ ...ಾರ್ಜುನನಿಗೆ ತನ್ನ ತಂದೆ ಅಕ್ಕಿನೇನಿ ನಾಗೇಶ್ವರ್‌ರಾವ್ ...ಾವವೂ ಇತ್ತು.

...ದರಲ್ಲಿ ಮೊದಲ ಮೂರು ಕುಟುಂಬಗಳ ಪ್ರಭಾವ ...ು ಹೆಚ್ಚು ಎನ್ನಬಹುದು. ಯಾಕೆಂದರೆ ಈ ...ಮಿಲಿಗಳಲ್ಲಿ ನಾಯಕನಟರ ಪರಂಪರೆಯೂ ...ವುದರಿಂದ ಕೇವಲ ಲಾಭದ ದೃಷ್ಟಿಯಿಂದಲ್ಲದೆ 'ಕ್ರೇಜ್' ...ಉಳಿಸಿಕೊಳ್ಳಲೂ ಇವರು ಹೊಸ ಪ್ರತಿಭೆಗಳಿಗೆ ಅವಕಾಶ ...ತಪ್ಪಿಸುತ್ತಾರೆನ್ನುವ ಆರೋಪವೂ ಇದೆ. ಸಿನಿಮಾ ಎಂದರೆ ... ಮುಖ್ಯವಾಗಿ ಫೈನಾನ್ಸ್, ನಟನೆ, ಪ್ರೊಡಕ್ಷನ್ ಮತ್ತು ...ಚಿಕೆ ಎಂಬ ನಾಲ್ಕು ಅಂಗಗಳಿರುತ್ತವೆ. ಈ ಬಿಗ್ ...ುಂಬಗಳು ನಾಲ್ಕೂ ವಿಭಾಗಗಳಲ್ಲಿ ತಮ್ಮ ಹಿಡಿತ ...ಂದಿವೆ. ನಾಯಕನಟರದ್ದಂತೂ ದಂಡೇ ಈ ...ುಂಬಗಳಲ್ಲಿದೆ. ಅದರ ಹೊರತಾಗಿ ಚಿತ್ರ ನಿರ್ಮಾಣ, ...ನ್ಸ್ ಮತ್ತು ಸಿನಿಮಾ ಹಂಚಿಕೆಯ ಮಾಫಿಯಾದಲ್ಲೂ ...ರ ಪಾಲು ಜೋರಾಗೇ ಇದೆ.

... ತೆಲುಗು ಸಿನಿಮಾರಂಗದಲ್ಲಿ ಹೆಸರು ಮಾಡಿರುವ


ಮಾಡಬೇಕು ಮತ್ತು ಎಷ್ಟೆಷ್ಟು ಚಿತ್ರಮಂದಿರಗಳನ್ನು ಕೊಡಬೇಕೆನ್ನುವುದು ಯಾರೋ ಒಂದಿಬ್ಬರ ಕೈಲಿದ್ದಾಗ ಅಂತವರು ತಮ್ಮ ಹಿತವನ್ನು ಬಲಿಕೊಟ್ಟು ಹೊಸಬರ ಸಿನಿಮಾಗಳಿಗೆ ಪ್ರಾಶಸ್ತ್ಯ ನೀಡುತ್ತಾರೆನ್ನುವುದು ಸ್ವಲ್ಪ ದುರಾಲೋಚನೆಯೇ ಆಗಬಹುದು.

ಚಿರಂಜೀವಿ, ನಾಗಾರ್ಜುನ, ವೆಂಕಟೇಶ್ ಮತ್ತು ಬಾಲಕೃಷ್ಣ (ಎನ್‌ಟಿಆರ್ ಕುಟುಂಬ) ಮೊದಲಾದವರ ನಡುವೆ ಸಿನಿಮಾ ಸ್ಪರ್ಧೆ ಇದ್ದರೂ ಉದ್ದಿಮೆಯ ವಿಚಾರಕ್ಕೆ ಬಂದಾಗ ಇವರೊಳಗೆ ಒಂದು ಹೊಂದಾಣಿಕೆ ಇದೆ. ತಮ್ಮದೇ ಇಬ್ಬರು ಸ್ಟಾರ್‌ಗಳ ಸಿನಿಮಾ ಒಮ್ಮೆಲೇ ರಿಲೀಸ್ ಆಗುವ ಸಂದರ್ಭ ಬಂದರೆ ಯಾರಿಗೂ ಲಾಸ್ ಆಗದಂತೆ ಡೇಟ್ ಮತ್ತು ಚಿತ್ರಮಂದಿರಗಳನ್ನು ತುಂಬಾ ನಾಜೂಕಾಗಿ ಹಂಚಿಕೊಳ್ಳಲಾಗುತ್ತದೆ. ತೀರಾ ಇತ್ತೀಚೆಗೆ ಸಂಕ್ರಾಂತಿಯ ಸಂದರ್ಭಕ್ಕೆ ಚಿರು ಮಗನ 'ಯೆವುಡು' ಸಿನಿಮಾ ಜನವರಿ 12ರಂದು ರಿಲೀಸ್ ಆಗುವುದೆಂದು ನಿರ್ಧಾರವಾಗಿತ್ತು, ಅದೇ ವೇಳೆಗೆ ತೆಲುಗಿನ ಮತ್ತೊಬ್ಬ ನಟ ಮಹೇಶ್ ಬಾಬುವಿನ (ಈತನಿಗೆ ಗಾಡ್‌ಫಾದರ್ ಆಗಿ ಅವನ ತಂದೆ ನಟ ಕೃಷ್ಣ ಇದ್ದಾರೆ) 'ನೇನೊಕ್ಕಡಿನೆ' ಸಿನಿಮಾ ಕೂಡ ತೆರೆಗೆ ಬರಲು ಸಿದ್ಧವಾಗಿತ್ತು, ಆಗ ಇಬ್ಬರೂ ಪ್ರಭಾವಿ ನಟರ ಸಿನಿ ವರ್ಚಸ್ಸಿಗೆ ಧಕ್ಕೆಯಾಗಬಾರದೆಂದು 'ಯೆವುಡು'ಗಿಂತ ಎರಡು ದಿನ ಮೊದಲು 'ನೇನೊಕ್ಕಡಿನೆ' ಸಿನಿಮಾ ರಿಲೀಸ್ ಮಾಡುವ ಒಡಂಬಡಿಕೆ ನಡೆದಿತ್ತು, ಅದೇ ಹೊಸಬರಿಗಾಗಿದ್ದರೆ ಇಂತಹ ಚೌಕಾಸಿ ಇರುತ್ತಿತ್ತೆ?

ಕುಟುಂಬ ಪ್ರಭಾವವನ್ನೇ ಬಳಸಿಕೊಂಡು ಚಿತ್ರೋದ್ಯಮ ನಡೆಸುತ್ತಾರೆನ್ನುವುದಾದರೆ ಆ ಬಿಗ್ ಕುಟುಂಬಗಳ ಕುಡಿಗಳಾದ ರಾಣಾ ದಗ್ಗುಬಟಿ (ನಟ ವೆಂಕಟೇಶ್ ಸಹೋದರನ ಮಗ), ತಾರಕ ರತ್ನ, ಕಲ್ಯಾಣರಾಮ್ (ಎನ್.ಟಿ.ಆರ್ ಮೊಮ್ಮಕ್ಕಳು) ಮೊದಲಾದವರೇಕೆ ಸೂಪರ್ ಸ್ಟಾರ್ ಹೀರೋಗಳಾಗಲಿಲ್ಲ? ಎನ್ನುವ ಪ್ರಶ್ನೆಯೂ ಇಲ್ಲಿ ಮೂಡಬಹುದು. ಅವರ ಸಿನಿಮಾಗಳು ಹಿಟ್ ಎನಿಸದಿದ್ದರೂ, ಅವರು ಸೂಪರ್‌ಸ್ಟಾರ್ ಆಗದಿದ್ದರೂ, ನಿರ್ಮಾಪಕರ ನೂರಾರು ಕೋಟಿ ಲುಕ್ಸಾನು ಮಾಡಿದರೂ ಅವರಿಗೆ ಮತ್ತೆ ಅವಕಾಶ ಒದಗಿಬರುತ್ತಲೇ ಇವೆ. ಅದೇ ಹೊಸಬರ ಒಂದೇ ಒಂದು ಚಿತ್ರ ತೋಪಾದರೂ ಅವರು ಮೂಲೆ ಸೇರಬೇಕಾಗುತ್ತದೆ. ಬೇರೆಯವರ ಸಂಗತಿ ಬೇಡ, ಉದಯ್ ಕಿರಣ್ ವಿಷಯಕ್ಕೇ ಬಂದರೆ ಆತ ಆತ್ಮಹತ್ಯೆ ಮಾಡಿಕೊಂಡ ನಂತರ ಪ್ರತಿಕ್ರಿಯಿಸಿದ ಪವನ್ ಕಲ್ಯಾಣ್ (ಚಿರು ತಮ್ಮ), ಸುರೇಶ್ ಬಾಬು (ವೆಂಕಟೇಶ್ ಸೋದರ) ಮೊದಲಾದವರು 'ಪ್ರತಿಭೆ ಇದ್ದರೆ ಎಂತವರೇ ಆದರು

ಆಯ್ಕೆಯ ಮುಂದೆ ತಂದು ನಿಲ್ಲಿಸಿದ್ದು ಸ್ವತಃ ಚಿರಂಜೀವಿಯೆ!

ನೋಡಲು ಚೆಂದವಾಗೂ ಇದ್ದ ಮೊದಲ ಮೂರು ಸಿನಿಮಾಗಳಲ್ಲಿ ಅದ್ಭುತ ಯಶಸ್ಸು ಗಳಿಸಿದ್ದ ಉದಯ್ ಕಿರಣ್‌ಗೆ ಸಹಸ್ರಾರು ಹುಡುಗಿಯರು ಫಿದಾ ಆಗಿದ್ದರು. ಹಾಗೆ ಆದವಳಲ್ಲಿ ಮೆಗಾಸ್ಟಾರ್ ಚಿರಂಜೀವಿಯ ಮಗಳು ಸುಶ್ಮಿತಾ ಕೂಡಾ ಒಬ್ಬಳು. ತನಗಿದ್ದ ಪ್ರಭಾವದಿಂದ ಉದಯ್‌ನನ್ನು ಪಳಗಿಸಿಕೊಳ್ಳಲು ಆಕೆಗೆ ಹೆಚ್ಚೇನು ತ್ರಾಸಾಗಲಿಲ್ಲ, ಚಿರಂಜೀವಿ ಮಗಳ ಪ್ರೇಮ ಪ್ರಸಂಗ ಬೆಳಕಿಗೆ ಬರಲು ಹೆಚ್ಚೇನು ಕಾಲ ಬೇಕಾಗಲಿಲ್ಲ. ಆ ಪ್ರೇಮಕ್ಕೆ ಅಡ್ಡ ಬಂದದ್ದು ಚಿರಂಜೀವಿಯ ಜಾತಿ ಪ್ರೇಮ. ಚಿರು ಕಾಪು ಜಾತಿಯವನಾದರೆ ಉದಯ್ ಬ್ರಾಹ್ಮಣ ಜಾತಿಯವ. ಇದೇ ಕಾರಣಕ್ಕೆ ಚಿರು ಮನೆಯಲ್ಲಿ ಕೊಸರಾಟ ಶುರುವಾಗಿತ್ತು, ಆದರೂ ಮಗಳ ಒತ್ತಾಯಕ್ಕೆ ಮಣಿದ ಚಿರು 2003ರಲ್ಲಿ



ಹಠಾತ್ತನೆ ಉದಯ್ ಮತ್ತು ಸುಶ್ಮಿತಾರ ಎಂಗೇಜ್‌ಮೆಂಟ್ ಮುಗಿಸಿದ್ದರು.

ಅಲ್ಲಿಂದಾಚೆಗೆ ಆ ಸಂಬಂಧ ಮುಂದುವರೆಯಲೇ ಇಲ್ಲ, ಮಗಳ ಮನಸ್ಸನ್ನು ಚಿರು ಬದಲಾಯಿಸಿದ್ದರಿಂದಲೋ ಏನೋ ಎಂಗೇಜ್‌ಮೆಂಟ್ ಕೂಡಾ ದಿಢೀರನೆ ಮುರಿದು ಬಿತ್ತು. ಆನಂತರ ಉದಯ್ ಕಿರಣ್‌ನ ನಸೀಬು ಸಂಪೂರ್ಣವಾಗಿ ಕೆಟ್ಟುಹೋಯಿತು. ಚಿರು ಪ್ರಭಾವದ ಮುಂದೆ ಅವನ ಪ್ರತಿಭೆಗೆ ಮಂಕು ಹಿಡಿಯಿತು. ಯಾವೊಬ್ಬ ನಿರ್ಮಾಪಕನೂ ಅವನ ಪ್ರತಿಭೆಗೆ ಛಾನ್ಸ್ ನೀಡಲು ಮುಂದಾಗಲಿಲ್ಲ, ಇವತ್ತು ಮಾತುಕತೆ ಮುಗಿಸಿಹೋಗುತ್ತಿದ್ದ ನಿರ್ದೇಶಕ, ನಿರ್ಮಾಪಕರು ನಾಳೆಗಾಗಲೇ ಸುಮ್ಮನಾಗಿಬಿಡುತ್ತಿದ್ದರು. ಅವಕಾಶಗಳೇ ಇಲ್ಲದೆ ಹತಾಶನಾದ ಉದಯ್ ಕೊನೆಗೆ ತಮಿಳಿಗೆ ವಲಸೆ ಹೋಗಿ ಕೆ.ಬಾಲಚಂದರ್‌ರ 'ಪೋಯ್' ಸಿನಿಮಾಗಳಲ್ಲದೆ ಮತ್ತೊಂದೆರಡು ಸಿನಿಮಾಗಳಲ್ಲಿ ನಟಿಸಿದರೂ ತೆಲುಗಿನಲ್ಲಿ ಸಿಕ್ಕಂತ ಓಪನಿಂಗ್ ಅಲ್ಲಿ ಆತನಿಗೆ ಸಿಗಲಿಲ್ಲ, ಅಷ್ಟರಲ್ಲಾಗಲೆ ಅಲ್ಲಿಯೂ ಉದಯ್‌ಗೆ ಇದೇ ಕಿರಿಕಿರಿಗಳು ರಿಪೀಟ್ ಆಗಿದ್ದವು.

ಸುಮಾರು ಹದಿಮೂರು ವರ್ಷಗಳ ಕಾಲ

ಸಿನಿಮಾರಂಗದಲ್ಲಿದ್ದರೂ ಮೊದಲ ಮೂರು ಚಿತ್ರಗಳು ಹಿಟ್ ಆಗಿದ್ದರೂ ಆತನಿಗೆ ನಂತರದಲ್ಲಿ ಸಿಕ್ಕಿದ್ದು ಹನ್ನೆರಡು ಚಿತ್ರಗಳು ಮಾತ್ರ. ಅದರಲ್ಲೂ ಕೆಲವೊಂದು ಚಿತ್ರೀಕರಣದ ಮಧ್ಯೆಯೇ ನಿಂತು ಹೋದರೆ ಮತ್ತೆ ಕೆಲವಕ್ಕೆ ರಿಲೀಸ್‌ಗೆ ಥಿಯೇಟರ್ ಸಿಗದೆ ಡಬ್ಬಾದಲ್ಲೇ ಕೊಳೆಯುತ್ತಿವೆ. 'ಉದಯ್ ಕಿರಣ್ ನಟಿಸುತ್ತಿದ್ದ ನನ್ನ ಚಿತ್ರ **80%** ಮಾತ್ರ ಪೂರ್ಣವಾಗಿಸಲು ಸಾಧ್ಯವಾಯ್ತು, ಇನ್ನುಳಿದ ಭಾಗವನ್ನು ಪೂರ್ಣಗೊಳಿಸದಂತೆ ಚಿರಂಜೀವಿ ಕಡೆಯವರೆಂದುಕೊಂಡ ಕೆಲವರು ಒತ್ತಡ ಹೇರಿದ್ದರಿಂದ ಅರ್ಧಕ್ಕೇ ನಿಲ್ಲಿಸಿದೆ' ಎನ್ನುವ ಚೆನ್ನೈ ಮೂಲದ ನಿರ್ಮಾಪಕ ಎ.ಎಂ ರತ್ನಂರ ಮಾತುಗಳು ಉದಯ್ ಬದುಕಲ್ಲಿ ಚಿರುಗಾರಿಕೆಯನ್ನು ಬಿಚ್ಚಿಡುತ್ತವೆ.

ಅತ್ತ ಸುಶ್ಮಿತಾ ಬೇರೊಂದು ಮದುವೆಯಾಗಿ, ಉದಯ್ ಕೂಡಾ ವಿಶಿತಾ ಎಂಬ ಬೇರೊಬ್ಬ ಹುಡುಗಿಯನ್ನು ಮದುವೆಯಾದರೂ ಚಿರು ಕೋಪ ತಣ್ಣಗಾಗಿರಲಿಲ್ಲ, ಹೀಗೆ ಬೆನ್ನಿಗೆ ಬಿದ್ದ ಚಿರುಗಾಲವನ್ನು ಸಹಿಸಿಕೊಳ್ಳಲಾಗದ ಆ ಮುಗ್ಧ ಹುಡುಗ ಈಗಾಗಲೇ ಹಲವಾರು ಬಾರಿ ಆತ್ಮಹತ್ಯೆಗೆ ಯತ್ನಿಸಿದ್ದ, ಆಗ ಅವನ ಹೆಂಡತಿ ವಿಶಿತ ಅವನ ಬೆಂಬಲಕ್ಕೆ ನಿಂತು ಆತ್ಮವಿಶ್ವಾಸ ತುಂಬುವ ಕೆಲಸ ಮಾಡಿದ್ದಳು. ಆದರೂ ಉದಯ್ ಖಿನ್ನತೆಯಿಂದ ಹೊರಬರಲಾಗದೆ ಬದುಕನ್ನು ಕೊನೆಗಾಣಿಸಿಕೊಂಡಿದ್ದಾನೆ.

ತಾನೆ ಆಳುತ್ತಿರುವ ತೆಲುಗು ಚಿತ್ರ ಸಾಮ್ರಾಜ್ಯದ ಹುಡುಗ, ಎಲ್ಲ ಸರಿಯಿದ್ದಿದ್ದರೆ ತನ್ನ ಅಳಿಯನಾಗಬೇಕಿದ್ದವ ಸತ್ತಾಗಲೂ ಆ ಕುಟುಂಬದ ಯಾರೊಬ್ಬರೂ ಅತ್ತ ಸುಳಿಯದಿದ್ದದ್ದು ಅವರೊಳಗಿನ ಪಾಪಪ್ರಜ್ಞೆಯನ್ನು ಪ್ರತಿನಿಧಿಸಿದ್ದಿರಬಹುದಲ್ಲವೆ.


ಅಂದಹಾಗೆ, ಹೈಕೋರ್ಟ್ ಅಡ್ವೊಕೇಟ್ ಪಿ.ಎಸ್ ಅರುಣ್ ಕುಮಾರ್ ಎಂಬುವವರು ಉದಯ್ ಸಾವಿಗೆ ನಾಲ್ಕು ಕುಟುಂಬಗಳ ಟಾಲಿವುಡ್ ಸಿನಿ ಮಾಫಿಯಾವೇ ಕಾರಣ, ಈ ಕುರಿತು ಸೂಕ್ತ ತನಿಖೆಯಾಗಬೇಕೆಂದು ಮಾನವ ಹಕ್ಕು ಆಯೋಗಕ್ಕೆ ದೂರನ್ನೂ ನೀಡಿದ್ದಾರೆ.

ಆಯೋಗ ಸಮಂಜಸವಾಗಿ ಪ್ರತಿಕ್ರಿಯಿಸದಿದ್ದರಿಂದ ಮಾಹಿತಿ ಮತ್ತು ಸಾರ್ವಜನಿಕ ವ್ಯವಹಾರ ಸಚಿವರ ಬಳಿಗೂ ದೂರು ಒಯ್ಯಲು ನಿರ್ಧರಿಸಿದ್ದಾರೆ. ಕೇಂದ್ರ ಸಚಿವ ದಾಸರಿ ನಾರಾಯಣ ರಾವ್ ಕೂಡಾ 'ಟಾಲಿವುಡ್‌ನ ಘಟಾನುಘಟಿ ಕುಟುಂಬಗಳ ಇಂಡಸ್ಟ್ರಿ ಮಾಫಿಯಾವೇ ಉದಯ್ ಕಿರಣನನ್ನು ಕೊಲೆ ಮಾಡಿದೆ' ಎಂತಲೂ ಆರೋಪಿಸಿದ್ದಾರೆ. ಏನೇ ಆದರೂ ಸತ್ತ ಹ್ಯಾಟ್ರಿಕ್ ಪ್ರತಿಭೆ ಎದ್ದು ಬಂದಾನೆ...

● ಗಿರೀಶ್ ತಾಳಿಕಟ್ಟೆ

ಐಟಿ ದಾಳಿಯ ಭೀತಿಯಲ್ಲಿ ನಿರ್ಮಾಪಕರು

ಭಜರಂಗಿ ಲಾಭ: ಅಯ್ಯೋ ಪಾಪ!



ದರ್ಶನ್‌ನ 'ಬುಲ್‌ಬುಲ್ ಮಾತಾಡಕಿಲ್ವಾ' ಚಿತ್ರದ ಮೊದಲ ವಾರದ ಕಲೆಕ್ಷನ್ನು ಐದು ಕೋಟಿ. ಆ ಕಾಲಕ್ಕೇ ಪುನೀತ್ ಅಭಿನಯದ 'ಜಾಕಿ'ಯ ಪ್ರಥಮ ಸಾಪ್ತಾಹಿಕ ಸಂಪಾದನೆ ಐದು ಕೋಟಿಗೇರಿತ್ತು. 'ಸಾರಥಿ', 'ಸಂಗೊಳ್ಳಿ ರಾಯಣ್ಣ', ಇತ್ತೀಚೆಗೆ ತೆರೆಕಂಡ ದರ್ಶನ್‌ನ 'ಬೃಂದಾವನ' ಸೇರಿದಂತೆ ಪುನೀತ್‌ನ 'ಅಣ್ಣಾ ಬಾಂಡ್', 'ಹುಡುಗರು', ಸುದೀಪ್ ಅಭಿನಯದ 'ಕೆಂಪೇಗೌಡ', ಉಪ್ಪಿಯ 'ಟೋಪಿವಾಲ'; ಇತ್ಯಾದಿ ಇತ್ತೀಚಿನ ಯಾವುದೇ ಕನ್ನಡ ಚಿತ್ರವೊಂದು ಮಾಡದಷ್ಟು ದುಡ್ಡನ್ನು ಶಿವಣ್ಣನ ಭಜರಂಗಿ ಬಾಚಿ ಹಾಕಿದೆಯೇ?

ಅಥವಾ ಮೊದಲ ವಾರದ ಕಲೆಕ್ಷನ್ ದೃಷ್ಟಿಯಿಂದ ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಶಿವಣ್ಣನ 'ಭಜರಂಗಿ' ಸಾರ್ವಕಾಲಿಕ ದಾಖಲೆಯೊಂದನ್ನು ಬರೆದಿದೆಯೆ? 2013ರ ಕೊನೆಯಲ್ಲಿ ಅಂದರೆ ಇಲ್ಲಿಗೆ ಏಳು ವಾರಗಳ ಹಿಂದಷ್ಟೇ ಬಿಡುಗಡೆಯಾದ ಈ ಚಿತ್ರವು ಮೊದಲ ವಾರದಲ್ಲೇ 10 ಕೋಟಿಯಷ್ಟನ್ನು ಗಳಿಸಿತೆಂಬುದು ಎಷ್ಟು ನಿಜ?

ಸದ್ಯ ಗಾಂಧಿನಗರದಲ್ಲಿ ಶಿವಣ್ಣನ ಬಂಪರ್ ಚಿತ್ರ 'ಭಜರಂಗಿ' ಕುರಿತಂತೆ ಹಬ್ಬಿರುವ ಚಿತ್ರವಿಚಿತ್ರ ವದಂತಿಗಳು ಒಂದೆರಡಲ್ಲ. ಯಾವೊಂದು ಕನ್ನಡ ಚಿತ್ರವೂ ಕರ್ನಾಟಕದ ಇಷ್ಟೊಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿದ್ದೇ ಇಲ್ಲ. ಅಂದ ಹಾಗೆ ಇಷ್ಟೊಂದು ದುಬಾರಿ ವೆಚ್ಚದಲ್ಲಿ ಇನ್ಯಾವುದೇ ಕನ್ನಡ ಚಿತ್ರವೂ ನಿರ್ಮಾಣಗೊಂಡಿರಲಿಲ್ಲ. ಮೊದಲ ವಾರಕ್ಕದು 10 ಕೋಟಿ ಕಲೆಕ್ಷನ್ ಮಾಡಿದಂತೆ ಎರಡನೇ ವಾರಕ್ಕೆ ಬೇರಾವುದೇ ಕನ್ನಡ ಚಿತ್ರವೊಂದು ಗಳಿಸದಷ್ಟು ಬಾಕ್ಸ್ ಆಫೀಸ್ ಚಿಂದಿಯೆಬ್ಬಿಸಿದೆ. ಈ ವಾರ ತುಂಬಿತೆಂದರೆ ವಿಷ್ಣು ಅಭಿನಯದ 'ಯಜಮಾನ'ದ ದಾಖಲೆಯನ್ನೂ ಮುರಿದು ಅತೀಹೆಚ್ಚು ಚಿತ್ರಮಂದಿರಗಳಲ್ಲಿ 50ನೇ ದಿನ ಮುಗಿಸಿದ ಚಿತ್ರ ಎಂಬ ಹೆಗ್ಗಳಿಕೆಗೆ ಭಜರಂಗಿ ಪಾತ್ರವಾಗಲಿದೆ. 'ಸಂಗೊಳ್ಳಿರಾಯಣ್ಣ'ದ ಎಲ್ಲಾ ದಾಖಲೆಗಳನ್ನೂ ಭಜರಂಗಿ ಮುರಿಯಲಿದೆ...!


ನಿರ್ದೇಶಕ ಹರ್ಷ

ಹೀಗೆ 'ಭಜರಂಗಿ' ಕುರಿತಂತೆ ಗಾಂಧಿನಗರದಲ್ಲಿ ಹಬ್ಬುತ್ತಿರುವ ವದಂತಿಗಳಿಗೇನೂ ಕಮ್ಮಿಯಿಲ್ಲ. ಯಾವ ಕಾರಣಕ್ಕೆ, ಯಾವ ಮೂಲದಿಂದ ಈ ಥರದ ಪುಕಾರೇಳುತ್ತಿದೆಯೋ ಗೊತ್ತಿಲ್ಲ. ಅದು ಶಿವಣ್ಣನ ಸುದೀರ್ಘ ಕಾಲದ ಬರಗೆಟ್ಟ ಪರಿಸ್ಥಿತಿಯ ಪರಿಣಾಮವೋ, ಒಂದರಮೇಲೊಂದು ಚಿತ್ರಗಳು ತೋಪೆದ್ದ ಫಲವಾಗಿ ಆಕಸ್ಮಿಕ ಗೆಲುವೊಂದು ಸಿಕ್ಕಿದ್ದರಿಂದಾಗಿ ಅಭಿಮಾನಿ ದೇವರುಗಳು ಇಂಥಾದೊಂದು ಭ್ರಮೆಗೆ ಬಿದ್ದಿರಬಹುದಾ ಅಥವಾ ದರ್ಶನ್, ಸುದೀಪ್ ಕೂಟದ ಕುಟಿಲಗಳ ವಿರುದ್ಧ ರಾಜ್ ಕುಟುಂಬ ನಿಷ್ಠರ ಗುಂಪೊಂದು ಈ ರೀತಿ ವಿಜೃಂಭಿಸುತ್ತಿದೆಯಾ ಗೊತ್ತಿಲ್ಲ!


ನಿರ್ಮಾಪಕ ಮಂಜು

ಸದ್ಯ ಕರ್ನಾಟಕದ ನಲವತ್ತಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಕಿಕ್ಕಿರಿದ ಪ್ರೇಕ್ಷಕರಿಂದ ಹೌಸ್‌ಫುಲ್ ಬೋರ್ಡು ಹೊತ್ತು ಮುನ್ನುಗ್ಗುತ್ತಿರುವ 'ಭಜರಂಗಿ' ಈ ವರ್ಷದ ಮೆಗಾಹಿಟ್ ಸಿನಿಮಾ ಎಂಬುದರಲ್ಲಿ ಎರಡು ಮಾತಿಲ್ಲ. ಈ ವಾರ ಪೂರ್ತಿಗೊಂಡಿತೆಂದರೆ ಕರ್ನಾಟಕದ ಬರೋಬ್ಬರಿ 22 ಚಿತ್ರಮಂದಿರಗಳಲ್ಲಿ 'ಭಜರಂಗಿ' ಐವತ್ತನೇ ದಿನ ಪೂರೈಸಿದಂತಾಗುತ್ತದೆ. ಚಿತ್ರವೊಂದು 20ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಅರ್ಧಶತಕ ಬಾರಿಸುತ್ತದೆಯೆಂದರೆ ಅದು ಒಂದಾನೊಂದು ಕಾಲದ 25ನೇ ವಾರದ ಲೆಕ್ಕವೆ. ಭಜರಂಗಿ ಹಿಟ್ಟಾಗಿದೆ ನಿಜ. ಅದೊಂದು ಸೂಪರ್‌ಹಿಟ್ ಸಿನಿಮಾ ಎಂಬ ಬಗ್ಗೆಯೂ ಯಾರಿಗೂ ಆಕ್ಷೇಪಣೆಯಿಲ್ಲ. ಈತನಕ ಬಂದ ಶಿವಣ್ಣನ ಬೇರೆಲ್ಲ ಚಿತ್ರಗಳಿಗೆ ಹೋಲಿಸಿದರೆ ಇದು ತೀರ ವಿಭಿನ್ನ ದಾಟಿಯ ಅಪರೂಪದ ಚಿತ್ರ. ಬಹುಶಃ ಈ ಕಾರಣಕ್ಕೇ ವಿಪರೀತ ನಿರೀಕ್ಷೆ ಮತ್ತು ಆವೇಶಕ್ಕೆ ಬಿದ್ದ ಅಭಿಮಾನಿ ದೇವರುಗಳು ಉತ್ಪ್ರೇಕ್ಷಿತ ಲೆಕ್ಕಾಚಾರಕ್ಕಿಳಿದಿರಲೂ ಬಹುದು!

ಹಾಗೆ ನೋಡಿದರೆ ಸಾಲುಸಾಲಾಗಿ ಬಂದ ಶಿವಣ್ಣನ ಇತ್ತೀಚಿನ ಚಿತ್ರಗಳೆಲ್ಲವೂ ನಿರೀಕ್ಷಿತಮಟ್ಟ ಮುಟ್ಟಲೇ ಇಲ್ಲ. ಚಂದ್ರು ಮಹತ್ವಾಕಾಂಕ್ಷೆಯಿಟ್ಟೇ 'ಕಡ್ಡಿಪುಡಿ' ನಿರ್ಮಿಸಿದರಾದರೂ ಅದು ಸೀಮಿತ ಯಶಸ್ಸಿನಾಚೆಗೆ ಬೆಳೆಯಲೇ ಇಲ್ಲ; ಇಂಥದ್ದೇ ನಿರೀಕ್ಷೆಯಿದ್ದ 'ಲಕ್ಷ್ಮಿ' ಕೂಡ ಬಾಕ್ಸ್ ಆಫೀಸ್ ಗುಡುಗಿಸಲಿಲ್ಲ. ಓಂಪ್ರಕಾಶ್ ಭಾರೀ ನಿರೀಕ್ಷೆಯಿಟ್ಟುಕೊಂಡೇ 'ಶಿವ' ಸೃಷ್ಟಿಸಿದ್ದರು. ನಿರ್ಮಾಪಕ ಶ್ರೀಕಾಂತ್ ಕೈಸುಟ್ಟುಕೊಳ್ಳಬೇಕಾಯಿತು. ಘಣೇಶ್ ನಿರ್ದೇಶನದ 'ಅಂದರ್ ಬಾಹರ್' ಕತೆ ಮತ್ತು ನಿರೂಪಣೆಯ ದೃಷ್ಟಿಯಿಂದ ವಿಭಿನ್ನ ಚಿತ್ರವಾಗಿತ್ತಾದರೂ ಗೆಲ್ಲುವ ಅದೃಷ್ಟ ವಿರಲಿಲ್ಲ. ಭಾರೀ ಭರವಸೆಯಿದ್ದ ಪ್ರೇಮ್ ನಿರ್ದೇಶನದ 'ಜೋಗಯ್ಯ' ಕೂಡ ಎಡವಿ ಬಿದ್ದ ಪರಿಸ್ಥಿತಿಯಲ್ಲಿ ಶತದಿನೋತ್ಸವದ ಭಾಗ್ಯ ಕಂಡದ್ದು ಆರ್.ಚಂದ್ರು ನಿರ್ದೇಶನದ 'ಮೈಲಾರಿ' ಮಾತ್ರ.

ಇಂಥಾ ಬರಗೆಟ್ಟ ಶಿವಣ್ಣನ ಇಮೇಜಿಗೆ ಹೊಸದೊಂದು ವರ್ಚಸ್ಸು ಕಲ್ಪಿಸಿದ್ದೇ 'ಭಜರಂಗಿ'. ಅದು ಅಪ್ಪಟ ಪ್ರತಿಭೆ ಹರ್ಷ ಎಂಬ ನಿರ್ದೇಶಕನ ಕಲ್ಪನೆಯ ಕೂಸು. ವೃತ್ತಿಯಿಂದ ನೃತ್ಯ ನಿರ್ದೇಶಕನಾಗಿದ್ದ ಹರ್ಷ ಮೊದಲು ನಿರ್ದೇಶಿಸಿದ್ದು ಪ್ರಜ್ವಲ್ ದೇವರಾಜ್ ಅಭಿನಯದ 'ಗೆಳೆಯ' ಚಿತ್ರವನ್ನು. ಅದು ಅದ್ಭುತ ಚಿತ್ರವಲ್ಲದೆ ಹೋದರೂ ಕೈಕಚ್ಚಲಿಲ್ಲ. ಆನಂತರ ಚೇತನ್‌ನನ್ನು ಹೀರೋ ಮಾಡಿ 'ಬಿರುಗಾಳಿ' ನಿರ್ದೇಶಿಸಿದ ಹರ್ಷನಿಗದು ಅಂತಾ ಹೆಸರು ಕೊಡದೇ ಹೋದರೂ 'ಮಧುರಾ ಪಿಸುಮಾತಿಗೆ' ಎಂಬ ಹಾಡಿನ ನೃತ್ಯ ಸಂಯೋಜನೆಯಿಂದಾಗಿ ಅದು ವಿಶಿಷ್ಟವೆನಿಸಿತ್ತು. ಇದಾದ ನಂತರದ ದರ್ಶನ್‌ನ 'ಚಿಂಗಾರಿ' ಹರ್ಷನನ್ನು ಓರ್ವ ಸ್ಟೈಲಿಸ್ ಡೈರೆಕ್ಟರ್ ಎಂಬ ಮನ್ನಣೆಗೀಡುಮಾಡಿತ್ತು. ಈಗ ಸಿಕ್ಸರ್ ಬಾರಿಸಿದಂತೆ 'ಭಜರಂಗಿ'ಯನ್ನು ಗೆಲ್ಲಿಸಿದ ಹರ್ಷನ ವೈಶಿಷ್ಟ್ಯವಿರುವುದೇ ಚಿತ್ರದಿಂದ ಚಿತ್ರಕ್ಕೆ ಆತ ಕಾಯ್ದುಕೊಂಡ ಭಿನ್ನತೆಯಿಂದಾಗಿ.

ಈತನಕ ಹರ್ಷ ನಿರ್ದೇಶಿಸಿದ ನಾಲ್ಕೂ ಚಿತ್ರಗಳ ಪೈಕಿ ಒಂದಕ್ಕಿಂತ ಒಂದು ವಿಭಿನ್ನ ಮತ್ತು ಬೇರೆಲ್ಲ ನಿರ್ದೇಶಕರಂತೆ ಒಂದೇ ಶೇಡು ಕಾಣಿಸುವುದಿಲ್ಲ. ಇಂಥ ಹಿನ್ನೆಲೆಯಲ್ಲೇ ಕನ್ನಡದ ಜಾಯಮಾನಕ್ಕೆ ತೀರ ವಿಭಿನ್ನವಾದ ಕತೆ ಹೆಣೆದ ಹರ್ಷ ವಿಷಯದ ಮಟ್ಟಿಗೆ ಜೊತೆ ಹಾಕಿಕೊಂಡದ್ದು ನಂದ ಸುಧೀರ್ ಎಂಬ ಪ್ರತಿಭಾವಂತ ಸಹ ನಿರ್ದೇಶಕನನ್ನು. ಪ್ರೀತಮ್ ಗುಬ್ಬಿಯ ನಂತರ ಗಾಂಧಿನಗರದ ಮಟ್ಟಿಗೆ ಕ್ರಿಯಾಶೀಲ ಕತೆಗಾರನೆಂದೇ ಗುರುತಿಸಲ್ಪಟ್ಟ ನಂದ ಸುಧೀರ್ ಈ ಹಿಂದೆ 'ರ್‍ಯಾಂಬೋ', 'ವಿಕ್ಟರಿ'ಯಂಥ ಶರಣ್‌ಗೆ ಜೀವಕೊಟ್ಟ ಚಿತ್ರಗಳ ಕಥಾಸೃಷ್ಟಿಯಲ್ಲಿ ಕೈಜೋಡಿಸಿದ್ದಾತ.

'ಭಜರಂಗಿ'ಯ ಕತೆಯೇ ವಿಚಿತ್ರವಾದ್ದಾಗಿತ್ತು. ಮೂರು ತಲೆಮಾರುಗಳ ಸುದೀರ್ಘ ಸೇಡೊಂದರ ಸುತ್ತ ಹೆಣೆದ ಕತೆಗೆ ಮೆರಗು ಬರುವುದು ಇದ್ದಕ್ಕಿದ್ದಂತೆ ಅದು ಭೂತ, ಪ್ರೇತ, ವಾಮಾಚಾರದ ಪೈಶಾಚಿಕ ಲೋಕವೊಂದಕ್ಕೆ ಕೊಂಡೊಯ್ಯುವುದರಿಂದ. ಆಧುನಿಕ ಜಗತ್ತಿನ ಹೀರೋ ಇದ್ದಕ್ಕಿದ್ದಂತೆ ತನ್ನ ಜನ್ಮ ರಹಸ್ಯವನ್ನು ಕೆದಕುತ್ತ ಯಾವುದೋ ಪುರಾತನ ಗ್ರಾಮವೊಂದಕ್ಕೆ ಬರುತ್ತಾನೆ. ಆ ಊರಿನ ಪಾಳೇಗಾರನಂತಿರುವವನು ಓರ್ವ ವಿಕರಾಳ ಮಂತ್ರವಾದಿ. ಯಾವುದೋ ಕ್ಷುದ್ರ ಶಕ್ತಿಯೊಂದನ್ನು ಸಿದ್ಧಿಸಿಕೊಂಡು ಊರಿನ ಒಬ್ಬೊಬ್ಬರೇ ಹೆಂಗಸರನ್ನು ಭೋಗಿಸುವುದು, ಜನರನ್ನು ದೋಚುವುದು; ತನಗೆ ಎದುರಾಡಿದವರನ್ನೂ ಕ್ರೂರವಾಗಿ ಕೊಲ್ಲುವುದನ್ನೇ ಪ್ರವೃತ್ತಿಯನ್ನಾಗಿಸಿಕೊಂಡ ಆ ಮಾಂತ್ರಿಕನೇ ಭಜರಂಗಿ ಎಂಬ ತನ್ನ ತಾತನನ್ನು ಮುಗಿಸಿದ್ದೆಂಬುದು ನಾಯಕನಿಗೆ ಗೊತ್ತಾಗುತ್ತದೆ. ಅಲ್ಲಿಂದಾಚೆಗೆ ಭೂತ, ಪ್ರೇತ, ವಾಮಾಚಾರಗಳ ಬೇರೆಯದೇ ಲೋಕವೊಂದನ್ನು ತೆರೆದಿಡುತ್ತದೆ. ಅಂತಿಮವಾಗಿ ಹೀರೋ ಕ್ಷುದ್ರ ಯಾಂತ್ರಿಕನನ್ನು ಕೊಂದು ಊರನ್ನು ಮುಕ್ತಿಗೊಳಿಸುತ್ತಾನೆ. ಜೊತೆಗೆ ನಾಯಕಿಯ ಮಾನವನ್ನೂ ಉಳಿಸುತ್ತಾನೆ.

ಮೇಲುನೋಟಕ್ಕಿದು ದುರುಳ ಮಾಂತ್ರಿಕನ ವಿರುದ್ಧ ನಾಯಕನ ಹೋರಾಟವಾಗಿ ಕಂಡರೂ ಕತೆಯಲ್ಲಿ ಭಿನ್ನವಿಭಿನ್ನ ತಿರುವುಗಳಿವೆ. ಆಧುನಿಕ ಯುವಕ ತನ್ನ ಜನ್ಮ ರಹಸ್ಯ ಕೆದಕುತ್ತಾ ಕಾಡಿನಂಚಿನ ಊರೊಂದಕ್ಕೆ ಬರುವುದು, ಅದೇ ಊರಿನ ಮಾಂತ್ರಿಕನ ಕುಖ್ಯಾತಿ ಕೇಳಿ ಸಂಶೋಧನಾ ವಿದ್ಯಾರ್ಥಿನಿಯಾದ ಹೀರೋಯಿನ್ ಐಂದ್ರಿತಾ ರೈ ಕೂಡ ಬಂದಿರುವುದು, ಆ ಊರಿನಲ್ಲಿ ಮಾಂತ್ರಿಕ ಸೃಷ್ಟಿಸಿದ್ದ ಕಿರಾತಕನೊಬ್ಬ ಪಾಳೇಗಾರನಂತೆ ಮೆರೆಯುವುದು, ಆತ ಹೀರೋಯಿನ್ ಮೇಲೆ ಕಣ್ಣು ಹಾಕುವುದು, ಅದೇ ಹೊತ್ತಿಗೆ ತಪಸ್ಸಿಗೆಂದು ಹೋಗಿದ್ದ ಮಾಂತ್ರಿಕನೂ ವಾಪಸ್ಸಾಗುವುದು, ಇಂಥವರ ವಿರುದ್ಧ ಹೀರೋ ಸೆಣಸಾಡುವುದು ಕೇವಲ ಕನ್ನಡದ ಮಟ್ಟಿಗಷ್ಟೇ ಅಲ್ಲ ಇತ್ತೀಚೆಗೆ ತೆರೆಕಂಡ ಇತರೇ ಭಾಷೆಗಳ ಚಿತ್ರಗಳ ಮಟ್ಟಿಗೂ ಹೊಸದೆ.


ಭಜರಂಗಿಯ ಕಿರಾತಕ

ಸದ್ದಿಲ್ಲದ ಶ್ರಾವಣಿ ಗಣೇಶನ ಭಾಗ್ಯದೇವತೆ!

ಗಣೇಶ್-ಅಮೂಲ್ಯ ಅದ್ಭುತ ಕೆಮಿಸ್ಟ್ರಿ ಮತ್ತೊಮ್ಮೆ ಜಾದೂ ಮಾಡಿದೆ. ಹೆಚ್ಚೂಕಮ್ಮಿ 'ಚೆಲುವಿನ ಚಿತ್ತಾರ'ದ ಎರಡನೇ ಭಾಗದಂತಿರುವ 'ಶ್ರಾವಣಿ ಸುಬ್ರಹ್ಮಣ್ಯ' ಅಬ್ಬರದ ಆರ್ಭಟಗಳಿಲ್ಲದೆಯೇ ಕೌಟುಂಬಿಕ- ಪ್ರೇಕ್ಷಕ ಸಮೂಹದ ಮನ ಮುಟ್ಟಿರುವುದೇ ಅದರ ವೈಶಿಷ್ಟ್ಯ ಕೂಡ.

'ಭಜರಂಗಿ' ತೆರೆಕಂಡ ಎರಡನೇ ವಾರಕ್ಕೆ ಬಂದ ಶ್ರಾವಣಿ... ಮೊದಮೊದಲು ಗಣೇಶ್ ದೌರ್ಭಾಗ್ಯದ ಮುಂದುವರಿಕೆ ಎಂದೇ ಗೇಲಿಗೀಡಾಗಿತ್ತು. ಆದರೆ ಅಮೂಲ್ಯಳ ಕಣ್ಣೋಟ ಮತ್ತು ಚೆಲ್ಲಾಟಗಳೆರಡೂ ಗಣೇಶನ ದುರ್ಗತಿಗೊದಗಿದ ಸಂಜೀವಿನಿಯಂತಿತ್ತು. ತೊಂಬತ್ತು ಚಿತ್ರಮಂದಿರಗಳಲ್ಲಿ ರಿಲೀಜಾಗಿ ನಾಲ್ಕನೇ ವಾರದ ಹೊತ್ತಿಗೆ 70 ಥೇಟರುಗಳಲ್ಲಿ ಇನ್ನೂ ಉಸಿರಾಡುತ್ತಿದ್ದ ಅದರ ವೈಶಿಷ್ಟ್ಯವೆಂದರೆ ಎರಡನೇ ವಾರಕ್ಕೇ ಅದು 40 ಅಧಿಕ ಚಿತ್ರಮಂದಿರಗಳನ್ನು ವ್ಯಾಪಿಸಿತ್ತು. ಮುಂದಿನ ವಾರದ ಹೊತ್ತಿಗೆ ಇನ್ನೂ 30 ಥೇಟರುಗಳು ಹೆಚ್ಚಾದರೆ ಅಚ್ಚರಿಯೇನಲ್ಲ. ಅಲ್ಲಿಗೆ ಕರ್ನಾಟಕ ಬರೋಬ್ಬರಿ ನೂರು ಚಿತ್ರಮಂದಿರಗಳಲ್ಲಿ ಶ್ರಾವಣಿ ಓಡುತ್ತಿರುತ್ತದೆ!



ಶಿವಣ್ಣನ ಭಜರಂಗಿಗೆ ಹೋಲಿಸಿದರೆ ಶ್ರಾವಣಿ...ಯ ಸಾಧನೆ ಕಮ್ಮಿಯದೇನಲ್ಲ. ಭಜರಂಗಿಯಂತೆ ಮಾಸ್ ಆಕರ್ಷಣೆಯಿಲ್ಲದೆ ಹೋದರೂ ಸದ್ದಿಲ್ಲದೆ ಅದು ಮನೆಮಂದಿಯನ್ನು ಸೆಳೆಯುತ್ತಿದೆ. ಈಗಾಗಲೇ ಐದೂವರೆ ಕೋಟಿಯಷ್ಟು ಗಲ್ಲಾ ಗಳಿಕೆಯಾಗಿದೆ. ಟೀವಿ ರೈಟ್ಸ್ ಕಮ್ಮಿಯೆಂದರೂ 3 ಕೋಟಿ ಮುಟ್ಟುತ್ತದೆ. ಥೇಟರ್ ಕಲೆಕ್ಷನ್ನಿನಿಂದಲೇ ಹಾಕಿದ ದುಡ್ಡು ಬಂದಾಗಿದೆ. ಟೀವಿಯ ದುಡ್ಡೇನಿದ್ದರೂ ಹೆಚ್ಚುವರಿ ಬಂಪರ್ ಮಾತ್ರ. ಇನ್ನು ತೆಲುಗು, ತಮಿಳು, ಹಿಂದಿಯ ರೀಮೇಕ್ ಬಾಬತ್ತು ಬಂತೆಂದರೆ ಅದೇ ಒಂದು ಕೋಟಿಯಷ್ಟಾಗಲಿದೆ. ಹಿಂದಿಯಲ್ಲಿ ಶ್ರೀದೇವಿಯ ಮಗಳ ಅರಂಗೇಟ್ರಂಗೆಂದು ಹೇಳಿಮಾಡಿಸಿದಂತಿದೆ ಎಂದೇ ತಂದೆ ಬೋನಿಕಪೂರ್ ಕತೆ ಖರೀದಿಗೆ ಚೌಕಾಶಿ ನಡೆಸಿರುವುದು ಒಂದೆಡೆಯಾದರೆ ಮತ್ತೊಂದೆಡೆ ತೆಲುಗಿನಲ್ಲಿ ಮಂಜು ಸ್ವರಾಜ್‌ಗೇ ನಿರ್ದೇಶನದ ಅದೃಷ್ಟ ಖುಲಾಯಿಸಲಿದೆ. ಬಡಪಾಯಿ ಗಣೇಶನಿಗೂ ಮರುಜನ್ಮ!

ಭಜರಂಗಿಯ ಅಬ್ಬರ ಮತ್ತು ಆರ್ಭಟಕ್ಕೆ ಹೋಲಿಸಿದರೆ ಶ್ರಾವಣಿ... ಯದ್ದು ಸದ್ದಿಲ್ಲದಿರಬಹುದು. ಆದರೆ ಪರಿಣಾಮದಲ್ಲಿ...? ಹೊಸ ವರ್ಷದ ಹೊಸ್ತಿನಲ್ಲೇ ಸಿನಿಮಾ ಸಂಭ್ರಮದ ಚಿತ್ತಾರ!

ಈ ಹಿಂದೆ ತೆಲುಗಿನಲ್ಲಿ ಆರುಂಧತಿ ಬಂದಿತ್ತು. ಕನ್ನಡದಲ್ಲಿ ಆಪ್ತಮಿತ್ರ, ಆಪ್ತ ರಕ್ಷಕ ಇತ್ಯಾದಿ ಅತೀಂದ್ರಿಯ ಘಟನಾವಳಿಗಳನ್ನಾಧರಿಸಿದ ಕಥಾವಸ್ತುವಿನ ಚಿತ್ರಗಳೂ ಬಂದಿದ್ದವು. ಆದರೆ ಭಜರಂಗಿ ಇವೆಲ್ಲವುಗಳಿಗಿಂತಲೂ ವಿಭಿನ್ನವಾಗಿದೆ. ದೈತ್ಯ ಮಾಂತ್ರಿಕ, ಆತ ಸೃಷ್ಟಿಸಿದ ರಕ್ಕಸ, ಮಾಂತ್ರಿಕನ ಕಿರಾತಕ ಸಹಚರರೆಲ್ಲ ಅಕ್ಷರಶಃ ಪೌರಾಣಿಕ ಕತೆಗಳ ರಾಕ್ಷಸರಂತೆ, ಇಂಗ್ಲಿಷ್ ಟೀವಿ ಚಾನಲ್ಲುಗಳಲ್ಲಿ ಬರುವ ರೆಸ್ಲಿಂಗ್ ಕುಸ್ತಿಯ ದೈತ್ಯರಂತೆ ಕಾಣುತ್ತಾರೆ. ಈ ಚಿತ್ರದ ವೈಶಿಷ್ಟ್ಯವೇ ಅದರ ದೈತ್ಯದೇಹಿ ವಿಲನ್‌ಗಳು.

(12ನೇ ಪುಟಕ್ಕೆ)

6-5=2 ಮಾಡಿದ ಕ್ರಾಂತಿ

ಚಿತ್ರವೊಂದಕ್ಕೆ ಮೂರು ಕೋಟಿ ಸುರಿದು 50 ಲಕ್ಷದ ಲಾಭ ಕಾಣುವುದಕ್ಕೂ, ಅದೇ 30 ಲಕ್ಷದ ಬಜೆಟ್ಟಿನಲ್ಲಿ ಸಿನಿಮಾ ಮುಗಿಸಿ 3 ಕೋಟಿ ಸಂಪಾದಿಸುವುದಕ್ಕೂ ಇರುವ ವ್ಯತ್ಯಾಸಕ್ಕೆ ಸಾಕ್ಷಿಯಂತಿದ್ದರೆ ಅದು 6-5=2 ಎಂಬ ವಿಶಿಷ್ಟ ಚಿತ್ರ.

ಮೊದಲು ಅದನ್ನೊಂದು ಹಾಲಿವುಡ್ ಚಿತ್ರವೆಂದು ಭಾವಿಸಿದವರಿಗೆ ಅದು ಕನ್ನಡ ಚಿತ್ರವೆಂದು ಗೊತ್ತಾಗಿದ್ದೇ ಚಿತ್ರವಿಚಿತ್ರ ಪ್ರತಿಕ್ರಿಯೆಗಳು ಬರತೊಡಗಿದವು. ನಿರ್ದೇಶಕ ಅಶೋಕ್ ಮತ್ತು ನಿರ್ಮಾಪಕ ಕೃಷ್ಣ ಚೈತನ್ಯ ಅದೆಂಥಾ ಗಿಮಿಕ್ ಮಾಡಿದ್ದರೆಂದರೆ 'A video shot by late Ramesh...!' ಎಂಬ ಅದರ ಉಪಶೀರ್ಷಿಕೆಯೇ ಅದನ್ನೊಂದು ನಿಜ ಘಟನೆಯೆಂಬಂತೆ ನಂಬಿಸಿಬಿಟ್ಟಿತ್ತು. ಅದ್ದೂರಿಯ ಬಿಡುಗಡೆ, ಪತ್ರಿಕಾಗೋಷ್ಠಿ, ಟೀವಿ ಸಂದರ್ಶನಗಳಿಲ್ಲದೆಯೇ ಚಿತ್ರ ತೆರೆಕಂಡದ್ದು ಅದು ಸತ್ತವನ ಕ್ಯಾಮರಾ ದೃಶ್ಯಾವಳಿಗಳೆಂಬುದಕ್ಕೆ ಮತ್ತಷ್ಟು ಪುಷ್ಟಿಕೊಟ್ಟಿತ್ತು. ಯಾರೇ ಹೆಸರಾಂತ ಹೀರೋ, ಹೀರೋಯಿನ್, ಸಂಗೀತ ನಿರ್ದೇಶಕ, ಕಲಾವಿದರುಗಳೇ ಇಲ್ಲದೆ ಕೇವಲ ತನ್ನ ಕ್ಯಾಮರಾ ತಂತ್ರಗಾರಿಕೆಯಿಂದಾಗಿಯೇ 6-5=2 ಗೆದ್ದುಬಿಟ್ಟಿತ್ತು. ಮೂರನೇ ವಾರದ ಹೊತ್ತಿಗೆ ಪತ್ರಿಕೆ, ಟೀವಿಗಳಲ್ಲಿ ಈ ಬಗ್ಗೆ ವಿಶೇಷ ವರದಿ ಪ್ರಕಟಿಸಿದವು. ಯಾರೂ ನಿರೀಕ್ಷಿಸದ ಹಾಗೆ ದಾವಣಗೆರೆ ತ್ರಿನೇತ್ರ, ಮಂಗಳೂರಿನ ಪ್ರಭಾತ್, ಮೈಸೂರಿನ ಶಾಂತಲ ಮತ್ತು ಬೆಂಗಳೂರಿನ ನಂದಿನಿ ಸೇರಿದಂತೆ ಆರು ಮಲ್ಟಿಪ್ಲೆಕ್ಸ್‌ಗಳಲ್ಲದು 50ನೇ ದಿನಕ್ಕೆ ಮುನ್ನುಗ್ಗಿತ್ತು. ಮೆಜೆಸ್ಟಿಕ್‌ನ ಮೇನಕಾ ಸೇರಿದಂತೆ ಸದ್ಯ ನಾಲ್ಕು ಮಲ್ಟಿಪೆಕ್ಸ್ ಮತ್ತು ಮೂರು ಥೇಟರುಗಳಲ್ಲಿ 6-5=2 ಒಂಬತ್ತನೇ ವಾರಕ್ಕೆ ಕಾಲಿಟ್ಟಿದೆ. ಇದಲ್ಲದೆ 15 ಹೊಸ ಥೇಟರುಗಳಲ್ಲಿ ಯಶಸ್ವಿಯಾಗಿ ಮುನ್ನುಗ್ಗುತ್ತಿದೆ.


ಡೈರೆಕ್ಟರ್ ಅಶೋಕ್



ತಮಾಷೆಯೆಂದರೆ ಇಡೀ ಚಿತ್ರಕ್ಕೆಂದು ಹಾಕಿದ ಬಂಡವಾಳವೇ 30 ಲಕ್ಷ. ಬಂದ ಲಾಭ ಇದರ ಹತ್ತುಪಟ್ಟು ಅಂದರೆ ಮೂರು ಕೋಟಿ. ಇನ್ನು ಟೀವಿ ರೈಟ್ಸ್, ತಮಿಳು, ತೆಲುಗು ಡಬ್ಬಿಂಗ್ ರೈಟ್ಸ್ ಇತ್ಯಾದಿ ಲೆಕ್ಕಹಾಕಹೊರಟರೆ ಲಾಭದ ಮೊತ್ತ ಕಮ್ಮಿಯೆಂದರೂ ಐದು ಕೋಟಿ ಮುಟ್ಟಬಹುದು. ಎಂಟು ಕೋಟಿ ಸುರಿದು ಯಾರು ಬೇಕಾದರು 10 ಕೋಟಿ ಬಾಚಬಹುದು. ಆದರೆ 30 ಲಕ್ಷ ಹಾಕಿ 3 ಕೋಟಿ ದುಡಿಯುವುದಿದೆಯಲ್ಲ; ಬಹುಶಃ ಗಾಂಧಿನಗರದ ಇತಿಹಾಸದಲ್ಲೆಂದೂ ಇದು ನಡೆದೇ ಇರಲಿಲ್ಲ!

ಕೆಗೆ ಎಲ್ಲವೂ ಇತ್ತು. ವಿದ್ಯೆ, ಸೌಂದರ್ಯ, ಯಶಸ್ಸು, ..., ಖ್ಯಾತಿ, ಪ್ರೀತಿಸುವ ಗಂಡ ಮತ್ತು ಮಗ... ದರಲ್ಲೂ ಆಕೆಗೆ ಕೊರತೆ ಎಂಬುದೇ ಇರಲಿಲ್ಲ. ಆಕೆ ಆತ್ಮಹತ್ಯೆ ಮಾಡಿಕೊಂಡದ್ದು ಯಾಕೆ? ...ದೇ ಸುನಂದ ಪುಷ್ಕರ್ ತರೂರ್‌ಳ ನಿಗೂಢ ಸಾವಿನ ...ಲ್ಲರನ್ನೂ ಕಾಡುತ್ತಿರುವ ಪ್ರಶ್ನೆ.

...ನಂದಾ ಸಾಮಾನ್ಯ ಮಹಿಳೆಯಾಗಿರಲಿಲ್ಲ. ಕಾಶ್ಮೀರದ ...ರಿನಿಂದ ಬಂದ ಆಕೆ ಎಂತಹ ಯಶಸ್ವೀ ಬ್ಯುಸಿನೆಸ್ ... ಆಗಿದ್ದಳೆಂದರೆ ಇತ್ತೀಚೆಗೆ ಆಕೆ ತೀರಿಕೊಂಡಾಗ ...ಂತರ ರೂಪಾಯಿಗಳ ಆಸ್ತಿ ಅವಳ ಹೆಸರಿನಲ್ಲಿತ್ತು. ...ಲ್ಲಿ ದುಬೈನಲ್ಲಿರುವ ಬರೋಬ್ಬರಿ ಹನ್ನೆರಡು ...ಮೆಂಟ್‌ಗಳು, ಕೆನಡಾ ದೇಶದಲ್ಲಿ ಒಂದು ಮನೆ, ...ನಲ್ಲಿ ಒಂದು ಫಾರ್ಮ್ ಸೇರಿದ್ದವು. ಆಕೆಯ ...ದ್ದ ಒಡವೆ ಮತ್ತು ಐವತ್ತು ವಾಚ್‌ಗಳ ಮೌಲ್ಯವೇ ...ೋಟಿ ರೂಪಾಯಿ. ಪೂರ್ವಿಕರಿಂದ ಸುನಂದಾಳಿಗೆ ...ಬಳಿಯಾಗಿ ಬಂದ, ಎಳೆಯ ಎರಳೆಗಳ ಮೆತ್ತನೆ ...ನಿಂದ ತಯಾರಿಸುವ ಅಪರೂಪದ ಶಶ್‌ತೂಶ್ ...ಗಳ ಇವತ್ತಿನ ಮಾರುಕಟ್ಟೆ ರೇಟು ಲಕ್ಷಾಂತರ ...ಯಿಗಳು. ಇನ್ನು ನಗದು, ಬ್ಯಾಂಕು, ಸ್ಟಾಕು ...ಗಳನ್ನು ಲೆಕ್ಕ ಹಾಕಿದರೆ ಅದೇ ಹತ್ತು ಕೋಟಿ ...ಯಿಗಳಾಗುತ್ತದೆ. ಅಂದರೆ ಒಟ್ಟಾರೆ ಸುನಂದಾಳ ...ರೋಬ್ಬರಿ ನೂರು ಕೋಟಿ ರೂಪಾಯಿಗಳಷ್ಟು ...ಸ್ತಿ ಇದ್ದವು. ನೆನಪಿಡಿ, ಇವುಗಳಲ್ಲಿ ಜಮ್ಮುವಿನಲ್ಲಿರುವ ...ರ್ಮ್ ಮತ್ತು ಶಶ್‌ತೂಶ್ ಶಾಲ್‌ಗಳನ್ನು ...ತುಪಡಿಸಿದರೆ ಮಿಕ್ಕೆಲ್ಲವನ್ನೂ ಆಕೆಯೇ ಕಷ್ಟಪಟ್ಟು ...ಬ ಗಳಿಸಿದ್ದಳು.

...ಂತಹ ಸುನಂದಾ ಆತ್ಮಹತ್ಯೆ ಮಾಡಿಕೊಂಡಿದ್ದು ...

...ನಂದಾಳನ್ನು ಸಾವಿನತ್ತ ದೂಡಿದ್ದು ಆಕೆಯ ದಾಂಪತ್ಯ ...ನಲ್ಲಾದ ಏರುಪೇರುಗಳೇ? ಆರೋಗ್ಯದಲ್ಲಿ ತಲೆ ...ದ ಸಮಸ್ಯೆಗಳೇ? ಅಥವಾ ಆಕೆ ಗೊತ್ತಿಲ್ಲದೆ ...ಾಗಿ ಸೇವಿಸಿದ ಔಷಧಿಗಳೇ? ಯಾಕೆ ಸುನಂದಾ ...ಸ್ವಾಭಿಮಾನಿ ಮತ್ತು ಸ್ವಾವಲಂಬಿ ಮಹಿಳೆ ಹೀಗೆ ...ತವಾಗಿ ಸಾವನ್ನಪ್ಪಿದಳು?

ಟ್ವಿಟರ್ ಯುದ್ಧ

...ನಂದಾ ಸಾಯುವ ಮುನ್ನಾ ದಿನ ದೊಡ್ಡ ಜಗಳ ...ದರ ಕೇಂದ್ರಬಿಂದುವಾಗಿದ್ದಳು. ಅದು ಪಾಕಿಸ್ತಾನಿ ... ಮೆಹರ್ ತರಾರ್ ಕುರಿತಂತೆ ಸುನಂದಾ ಮಾಡಿದ್ದ ...ಪಗಳು. ಮೆಹರ್ ವಯಸ್ಸಿನಲ್ಲಿ ಸುನಂದಾಗಿಂತ ...ಸು. ಸೌಂದರ್ಯದಲ್ಲಿ ಸುನಂದಾಳಿಗೆ ಪೈಪೋಟಿ ...ುವಂತಹವಳು. ಅದೆಲ್ಲಕ್ಕಿಂತ ಮುಖ್ಯವಾಗಿ ಸುನಂದಾಳ ...ಶಿ ತರೂರ್ ಜೊತೆ ಗೆಳೆತನ ಸಂಪಾದಿಸಿದ್ದವಳು. ...ೇಲ್ ಮತ್ತು ಟ್ವಿಟರ್ ಮೂಲಕ ಶಶಿ ಜೊತೆ ...ಂಪರ್ಕ ಇಟ್ಟುಕೊಂಡಿದ್ದವಳು. ಗೆಳೆತನ ಮತ್ತು ಪರಸ್ಪರ ...ಾನದ ಹೊರತಾಗಿ ಶಶಿ ಮತ್ತು ಮೆಹರ್ ನಡುವೆ ... ಸಂಬಂಧ ಇದ್ದ ಯಾವ ಸೂಚನೆಗಳೂ ಇರಲಿಲ್ಲ. ... ಮೆಹರ್ ಬಗ್ಗೆ ಸುನಂದಾಳಿಗೆ ಅನುಮಾನ ಬಂದಿದ್ದು ...? ತನ್ನ ಪತಿ ಶಶಿ ತನ್ನನ್ನು ತೊರೆದು ಮೆಹರ್‌ಳ ...ಯಾಗಬಹುದು ಎಂಬ ಆತಂಕ ಅವಳಲ್ಲಿ ...ಗೊಂಡಿದ್ದು ಹೇಗೆ? ಈ ಆತಂಕವೇ ಆಕೆ ವಿಚಿತ್ರವಾಗಿ ...ುವಂತೆ ಮಾಡಿತೆ? ಕೊನೆಗೆ ಅದೇ ಆಕೆಯ ಆತ್ಮಹತ್ಯೆಗೆ ...ವಾಯಿತೇ?

... ಪ್ರಶ್ನೆಗಳಿಗೆ ಉತ್ತರ ಬಲ್ಲವರಿಲ್ಲ. ಆದರೆ ಸಾಯುವ ... ದಿನ ಸುನಂದಾ ವಿಚಿತ್ರವಾಗಿ ವರ್ತಿಸಿದ್ದಂತೂ ...ವತ್ತು ಏನಾಯಿತೆಂದರೆ ಇದ್ದಕ್ಕಿ... ಶಶಿ ತರೂರ್ ಅವರ ಟ್ವಿಟರ್ ...ನಿಂದ ವಿಚಿತ್ರವಾದ ಮೆಸೇಜ್ ...ಬಿತ್ತರಗೊಂಡವು. ಆ ಮೆಸೇಜು ...ಹೇಗಿದ್ದವೆಂದರೆ ಅವುಗಳಲ್ಲಿ ಶಶಿ ... ಮೆಹರ್ ತುಂಬಾ ಪ್ರೀತಿ ...ಸುತ್ತಿರುವುದು ಮತ್ತು ಮೆಹರ್ ... ಪ್ರೀತಿಸುತ್ತಿದ್ದಾಳೆ ಎಂದು ಸ್ವತಃ ...ಗಟ್ಟಿಗೆ ಸಾರುತ್ತಿದ್ದಾರೆ ಎಂಬಂತೆ ...ುತ್ತಿತ್ತು.

...ಮದುವೆಯಾಗಿರುವ, ಕೇಂದ್ರ ...ದಲ್ಲಿ ಸಚಿವರಾಗಿರುವ, ಲೇಖಕ ...ಅಪಾರ ಖ್ಯಾತಿಗಳಿಸಿರುವ, ವಿಶ್ವ ...ದಲ್ಲಿ ಕೆಲಸ ಮಾಡಿ ಮನ್ನಣೆ ...ಪಡೆ ಶಶಿ ತರೂರ್ ಯಾಕಿಂತಹ ... ಟ್ವಿಟರ್ ಮೆಸೇಜ್‌ಗಳನ್ನು ಕಳುಹಿಸುತ್ತಿದ್ದಾರೆಂದು ... ಟ್ವಿಟರ್ ಸಂದೇಶಗಳನ್ನು ಹಿಂಬಾಲಿಸುವ ಸುಮಾರು ... ಲಕ್ಷ ಜನ ಅಚ್ಚರಿಗೊಂಡಿದ್ದರು. ಜೊತೆಗೆ ಸುನಂದಾಳ ... ಅಕೌಂಟಿನಿಂದಲೂ ಚಿತ್ರವಿಚಿತ್ರ ಮೆಸೇಜುಗಳು ...ಾದರೆ. ಇದೆಲ್ಲದರಿಂದ ಗಾಬರಿಗೊಂಡಿದ್ದ ಶಶಿ ...ರ.



ಶಿವ್

ಅವರು ಕೂಡಲೇ "ಯಾರೋ ನನ್ನ ಮತ್ತು ನನ್ನ ಪತ್ನಿ ಸುನಂದಾರ ಟ್ವಿಟರ್ ಅಕೌಂಟ್‌ಗಳನ್ನು ಅಕ್ರಮವಾಗಿ ಉಪಯೋಗಿಸಿದ್ದಾರೆ. ಇದರ ಮೂಲವನ್ನು ಪತ್ತೆ ಹಚ್ಚುತ್ತೇನೆ" ಎಂದು ಇನ್ನೊಂದು ಮೆಸೇಜ್ ಕಳುಹಿಸಿದ ನಂತರ ತಮ್ಮ ಟ್ವಿಟರ್ ಅಕೌಂಟನ್ನು ಸ್ತಬ್ಧಗೊಳಿಸಿದರು.



ಇದು ಯಾರೋ ಕಿತಾಪತಿ ಪ್ರವೃತ್ತಿಯ ಕೆಲಸ ಎಂದು ಎಲ್ಲರೂ ಸುಮ್ಮನಾಗುವ ಹೊತ್ತಿಗೆ ಸುನಂದಾ ಒಂದು 'ಬಾಂಬ್' ಸ್ಫೋಟಿಸಿದರು. "ಯಾರೂ ನನ್ನ ಮತ್ತು ನನ್ನ ಪತಿಯ ಟ್ವಿಟರ್ ಅಕೌಂಟುಗಳನ್ನು ಅಕ್ರಮವಾಗಿ ಉಪಯೋಗಿಸಿಲ್ಲ. ನಾನೇ ನನ್ನ ಮತ್ತು ಶಶಿಯ ಅಕೌಂಟುಗಳಿಂದ ಆ ಮೆಸೇಜುಗಳನ್ನು ಕಳುಹಿಸಿದ್ದು. ಆ ಮೆಹರ್ ಇದ್ದಾಳಲ್ಲ

ಗೆದ್ದೂ ಸೋತ ಸುನಂದಾ



ಅವಳು ನನ್ನ ಗಂಡನನ್ನು ಮರಳು ಮಾಡಿದ್ದಾಳೆ. ಈ ಪುರುಷರೂ ಅಷ್ಟೇ; ಅವರನ್ನು ಯಾವಳೋ ಒಂದಿಷ್ಟು ಪುಸಲಾಯಿಸಿದರೆ ಸಾಕು ಇವರು ಆಕೆಗೆ ಶರಣಾಗುತ್ತಾರೆ. ಆದರೆ ನಾನು ಸುಮ್ಮನಿರುವುದಿಲ್ಲ. ಮೆಹರ್ ಮತ್ತು ಶಶಿ ನಡುವೆ ಸಂಬಂಧ ಇದೆ. ಆಕೆ ಪತ್ರಕರ್ತೆಯೇ ಅಲ್ಲ, ಬದಲಾಗಿ ಐಎಸ್‌ಐ ಏಜೆಂಟ್. ಐಪಿಎಲ್ ಹಗರಣದಲ್ಲಿ ನನ್ನ ಗಂಡ ಮಾಡಿದ ಪಾಪಗಳಿಗೆ ನಾನು ಹೊಣೆಯಾಗಬೇಕಾಗಿತ್ತು. ಆದರೆ ಈಗ ಹಾಗೆ ಆಗಲು ಬಿಡುವುದಿಲ್ಲ. ನನ್ನ ಗಂಡನನ್ನು ಸೆಳೆದುಕೊಳ್ಳಲು ನಾನು ಆ ಪಾಕಿಸ್ತಾನಿ ಹೆಂಗಸಿಗೆ ಬಿಡುವುದಿಲ್ಲ. ನಾನು ಶಶಿಯಿಂದ ವಿಚ್ಛೇದನೆ ಪಡೆಯುತ್ತೇನೆ" ಎಂದೆಲ್ಲ ಸುನಂದಾ ಟಿವಿ ಚಾನೆಲ್‌ಗಳ ಮುಂದೆ ಬಡಬಡಾಯಿಸಿದ್ದಳು. ಆಕೆಯ ಮಾತಿನಲ್ಲಿ ಎದ್ದು ಕಾಣುತ್ತಿದ್ದ ಅಸ್ಪಷ್ಟತೆ ಆಕೆ ಮಾನಸಿಕ ಒತ್ತಡಕ್ಕೆ ಗುರಿಯಾಗಿದ್ದನ್ನು ಸೂಚಿಸುತ್ತಿತ್ತು. ಯಾಕೆ ಸುನಂದಾ ಹೀಗೆಲ್ಲ ಮಾತನಾಡುತ್ತಿದ್ದಾಳೆ? ಆಕೆ ಮತ್ತು ಶಶಿಯ ದಾಂಪತ್ಯದಲ್ಲಿ ಬಿರುಕು ಮೂಡಿದೆಯೇ? ಶಶಿ ಬಗೆಗಿನ ಆತಂಕ ಆಕೆ ಸ್ವಿಮಿತ ಕಳೆದುಕೊಳ್ಳುವಂತೆ ಮಾಡಿದೆಯೆ? ಎಂಬೆಲ್ಲ ಪ್ರಶ್ನೆಗಳು ಆಗ ಎಲ್ಲೆಡೆ ಹರಿದಾಡಿದ್ದವು.

ಯಾರು ಈ ಸುನಂದಾ?

ಕಾಶ್ಮೀರಿ ಮೂಲದ ಸುನಂದ ಓರ್ವ ಸಾಮಾನ್ಯ ಸೈನ್ಯಾಧಿಕಾರಿಯ ಮಗಳು. ಆಕೆ ಓದಿದ್ದು ಸೊಪೋರ್ ಎಂಬ ಚಿಕ್ಕ ನಗರದಲ್ಲಿ. ಆಕೆ ಇನ್ನೂ 17 ವರ್ಷ ವಯಸ್ಸಿನ ಯುವತಿಯಾಗಿದ್ದಾಗ ಸಂಜಯ್ ರೈನಾ ಎಂಬ ಯುವಕನನ್ನು ಪ್ರೀತಿಸಿದಳು. ಆದರೆ ಸಂಜಯ ನಿರುಪದ್ರವಿ; ಯಾವ ಕೆಲಸಕ್ಕೂ ಬಾರದವನು. ಸುನಂದಾಳ ತಂದೆತಾಯಂದಿರು ಬೇಡವೆಂದರೂ ಸುನಂದ ಸಂಜಯ್‌ನನ್ನು ಮದುವೆಯಾದಳು. ಆದರೆ ಕೆಲವು ದಿನಗಳಲ್ಲೇ ಆತ ಎಂತಹವನು ಎಂದು ಆಕೆಗೆ ಅರ್ಥವಾಗಿತ್ತು. ಆಕೆಯ ದಾಂಪತ್ಯ ಜೀವನ ಕಷ್ಟಕರವಾಗಿತ್ತು. ಎರಡು ಹೊತ್ತಿನ ಊಟಕ್ಕೂ ಪರದಾಡುವಂತಾಯಿತು. ಯೌವನದ ಹುಮ್ಮಸ್ಸಿನಲ್ಲಿ ಮಾಡಿದ ತಪ್ಪಿಗೆ ಆಕೆ ಬೆಲೆ ತೆರುವಂತಾಯಿತು. ಇನ್ನು ಮುಂದೆ ಇದನ್ನು ಸಹಿಸುವುದು ಅಸಾಧ್ಯ ಎಂದು ನಿರ್ಧರಿಸಿದ ಸುನಂದ ಸಂಜಯ್‌ನಿಂದ ವಿಚ್ಛೇದನ ಪಡೆದಳು.

ಆ ಹಂತದಲ್ಲಿ ತನ್ನ ಬದುಕಿನಲ್ಲಿ ಒಂದು ಬದಲಾವಣೆಯನ್ನು ಬಯಸಿದ ಸುನಂದಾಳಿಗೆ ಆಗ ಸರಿಯಾದ ಆಯ್ಕೆಯಾಗಿ ಕಂಡದ್ದು ದೂರದ ದುಬೈ. ಆಗ ತಾನೇ ದುಬೈ ಅಭಿವೃದ್ಧಿ ಹೊಂದಲಾರಂಭಿಸಿತ್ತು. ವಿವಿಧ ಕ್ಷೇತ್ರಗಳ ಜನರನ್ನು ಆಕರ್ಷಿಸುತ್ತಿತ್ತು. ಸುನಂದಾ ದುಬೈಗೆ ಹಾರಿ ಹೋಗಿ ಅಲ್ಲಿ ಮತ್ತೆ ತನ್ನ ಬದುಕನ್ನು ಹೊಸದಾಗಿ ರೂಪಿಸಿಕೊಳ್ಳಲು ಯತ್ನಿಸಿದಳು. ಆಗ ಆಕೆಯ ನೆರವಿಗೆ ನಿಂತದ್ದು ಸುಜಿತ್ ಮೆನನ್ ಎಂಬ ಕೇರಳದ ಯುವಕ.

ಸುನಂದಾ ಎಕ್ಸ್‌ಪ್ರೆಶನ್ಸ್ ಎಂಬ ಪುಟ್ಟ ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ಚಿಕ್ಕಪುಟ್ಟ ಸಭೆ ಸಮಾರಂಭ ಮತ್ತು ಇವೆಂಟ್ ಅರೇಂಜ್‌ಮೆಂಟ್‌ಗಳಲ್ಲಿ ತನ್ನನ್ನು ತೊಡಗಿಸಿಕೊಂಡಳು. ಸುಜಿತ್ ಕೂಡ ಫೈನಾನ್ಸಿಯಲ್ ಕನ್ಸಲ್‌ಟೆಂಟ್ ಆಗಿ ಕೆಲಸ ಪ್ರಾರಂಭಿಸಿದ್ದ. ಆಗ ಇಬ್ಬರ ಕೈಗೂ ಸಾಕಾಗುವಷ್ಟು ಆದಾಯ ಬರಲಾರಂಭಿಸಿತು. ಅದೇ ಹೊತ್ತಿಗೆ ಸುನಂದ ಮತ್ತು ಸುಜಿತ್ ನಡುವೆ ಪ್ರೇಮಾಂಕುರವಾಯಿತು. ಅವರಿಬ್ಬರು 1991ರಲ್ಲಿ ಮದುವೆಯಾದರು. ಅದರ ಮರುವರ್ಷವೇ ಅವರಿಗೆ ಶಿವ್ ಎಂಬ ಪುತ್ರ ಜನಿಸಿದ. ಸುನಂದಾಳ ಬಿಸಿನೆಸ್ ಚೆನ್ನಾಗಿ ನಡೆಯುತ್ತಿತ್ತು. ಆಗಲೇ ಆಕೆ ದುಬೈಗೆ ಐಶ್ವರ್ಯ ರೈ ಎಂಬ ವಿಶ್ವ ಸುಂದರಿಯನ್ನು ಕರೆಸಿ ಸುದ್ದಿ ಮಾಡಿದ್ದಳು. ಇನ್ನು ಯಾವುದರ ಬಗ್ಗೆಯೂ ಆತಂಕವಿಲ್ಲ ಎಂದು ನಿಟ್ಟುಸಿರುಬಿಡುವಷ್ಟರಲ್ಲಿ ಸುನಂದ ಬದುಕಿನಲ್ಲಿ ಮತ್ತೊಂದು ತಿರುವು ಸಂಭವಿಸಿತು. ಅದು ಸುಜಿತ್ ಮತ್ತು ಸುನಂದ ಜಂಟಿಯಾಗಿ ದುಬೈನಲ್ಲಿ ಆಯೋಜಿಸಿದ್ದ ಮಲೆಯಾಳಂ ನಟ ಮಮ್ಮೂಟಿಯ ಕಾರ್ಯಕ್ರಮ. ಅದಕ್ಕೆ ಅವರಿಬ್ಬರು ನಿರೀಕ್ಷಿಸಿದ್ದ ಯಶಸ್ಸು ಸಿಗಲಿಲ್ಲ ಮಾತ್ರವಲ್ಲ ಅವರ ಕೈಸುಟ್ಟಿತು. ಅಷ್ಟು ಹೊತ್ತಿಗೆ ಸುಜಿತ್ ಕೂಡ ತಪ್ಪು ನಿರ್ಧಾರಗಳಿಂದ ಮೈತುಂಬ ಸಾಲ ಮಾಡಿಕೊಂಡಿದ್ದ. ಸಾಲಗಾರರು ಆತನ ಬೆನ್ನುಹತ್ತಿದ್ದರಿಂದ ಆತ ದುಬೈ ತೊರೆದು ದೆಹಲಿಗೆ ವಾಪಸ್ ಆದ. ಆದರೆ ಸುನಂದಾ ದುಬೈಯಲ್ಲೇ ತನ್ನ ಚಿಕ್ಕ ಉದ್ಯಮವನ್ನು ಮುಂದುವರೆಸಿದಳು.

ಒಂದು ದಿನ ದೆಹಲಿಯಲ್ಲಿ ಗಾಡಿ ಓಡಿಸುತ್ತಿದ್ದ ಸುಜಿತ್ ರಸ್ತೆ ಅಪಘಾತದಲ್ಲಿ ಸತ್ತು ಹೋದ. ಮತ್ತೆ ಸುನಂದಾಳ ಬದುಕು ಅತಂತ್ರಗೊಂಡಿತ್ತು. ಸುಜಿತ್ ಸತ್ತಾಗ ಅವರ ಮಗ ಶಿವ್ ಇನ್ನೂ ಐದು ವರ್ಷ ವಯಸ್ಸಿನ ಬಾಲಕ. ತಂದೆಯ ಸಾವಿನಿಂದ ಆತನಿಗೆ ಅದೆಷ್ಟು ಘಾಸಿ ಆಗಿತ್ತೆಂದರೆ ಆತ ಮಾತನಾಡುವುದನ್ನೇ ಬಿಟ್ಟ.

ಮಗನಿಗೆ ಸೂಕ್ತ ಚಿಕಿತ್ಸೆ ಕೊಡಿಸುವ ಉದ್ದೇಶದಿಂದ ಸುನಂದ ಮತ್ತೊಮ್ಮೆ ತನ್ನ ಬದುಕಿನ ದಿಕ್ಕನ್ನೇ ಬದಲಿಸಬೇಕಾಯಿತು. ಆಗ ಉತ್ತಮ ಸ್ಪೀಚ್ ಥೆರಪಿ ಸಿಗುತ್ತಿದ್ದ ಕೆನಡಾ ದೇಶಕ್ಕೆ ಸುನಂದಾ ತನ್ನ ವಾಸ್ತವ್ಯವನ್ನು ಬದಲಾಯಿಸಿದಳು. ಆಕೆಯ ಅದೃಷ್ಟಕ್ಕೆ ಅದು ಡಾಟ್ ಕಾಮ್‌ಗಳು ದೊಡ್ಡ ಸದ್ದು ಮಾಡುತ್ತಿದ್ದ ಕಾಲ. ದುಬೈಯಲ್ಲಿ ಇವೆಂಟ್ ಮ್ಯಾನೇಜರ್ ಆಗಿ ಅನುಭವ ಪಡೆದಿದ್ದ ಸುನಂದ ಡಾಟ್ ಕಾಂ ವಲಯವನ್ನು ಪ್ರವೇಶಿಸಿ ಅಲ್ಲೂ ಸಾಕಷ್ಟು ಯಶಸ್ಸು ಕಂಡಳು. ಎಷ್ಟರ ಮಟ್ಟಿಗೆಂದರೆ ಕೆನಡಾ ದೇಶದಲ್ಲಿ ಒಂದು ಮನೆಯನ್ನು ಖರೀದಿಸುವಷ್ಟು. ಇಷ್ಟೆಲ್ಲದರ ನಡುವೆ ಸುನಂದಾ ಮಗ ಶಿವ್‌ಗೆ ಚಿಕಿತ್ಸೆ ಕೊಡಿಸಿ, ಆತ ಸರಿಹೋಗುವಂತೆ ನೋಡಿಕೊಂಡಳಲ್ಲದೆ ಏಕಾಂಗಿಯಾಗಿ ಆತನನ್ನು ಪ್ರೀತಿಯಿಂದ ಬೆಳೆಸಿದಳು.

ಇನ್ನು ತನ್ನ ಬದುಕಿನಲ್ಲಿ ಯಾವ ಆತಂಕವೂ ಇಲ್ಲ ಎಂದು ಸುನಂದ ಅಂದುಕೊಳ್ಳುವಷ್ಟರಲ್ಲಿ 9/11 ಭಯೋತ್ಪಾದಕ ದಾಳಿ ಅಮೆರಿಕೆಯ ಮೇಲೆ ನಡೆಯಿತು. ಅದು ಆಕೆಯ ಡಾಟ್‌ಕಾಂ ಮತ್ತು ಐಟಿ ವಲಯದಲ್ಲಿನ ವೃತ್ತಿಗೆ ದೊಡ್ಡ ಪೆಟ್ಟು ನೀಡಿತು. ಸುನಂದ ತನ್ನ ಕಂಪನಿಯ ಬಾಗಿಲನ್ನು ಮುಚ್ಚಬೇಕಾಯಿತು. ಮತ್ತೆ ಆಕೆಯ ಬದುಕು ಅತಂತ್ರಗೊಂಡಿತು.

ಸುನಂದಾಳ ಬದುಕಿನಲ್ಲಿ ದುರಂತ ಮತ್ತು ಅದೃಷ್ಟ ಜೊತೆಜೊತೆಗೇ ವಿಚಿತ್ರವಾಗಿ ಸಾಗಿಬಂದಿದೆ. ಯಾಕೆಂದರೆ ಆಕೆ ಮತ್ತೆ ಎಲ್ಲವೂ ಮುಗಿಯಿತು ಎಂದು ನಿರಾಶೆಗೊಳ್ಳುವ ಸಂದರ್ಭದಲ್ಲೇ ದುಬೈನಲ್ಲಿ ರಿಯಲ್ ಎಸ್ಟೇಟ್ ಬಿಸಿನೆಸ್ ವಿಸ್ತಾರಗೊಳ್ಳಲಾರಂಭಿಸಿತ್ತು. ಮತ್ತೆ ದುಬೈಗೆ ಹಿಂದಿರುಗಿದ ಸುನಂದ ಒಂದು ಪ್ರತಿಷ್ಠಿತ ರಿಯಲ್ ಎಸ್ಟೇಟ್ ಕಂಪನಿಯಲ್ಲಿ ಕೆಲಸ ಪ್ರಾರಂಭಿಸಿದಳು. ಆಕೆಯ ಬುದ್ಧಿವಂತಿಕೆ, ಮಾತಿನ ಚಮತ್ಕಾರ, ವಿವಿಧ ವಲಯಗಳಲ್ಲಿ ಆಕೆಗಿದ್ದ ಸಂಪರ್ಕ, ಸ್ನೇಹಮಯಿ ಪ್ರವೃತ್ತಿ ಎಲ್ಲವೂ ಈ ಹಂತದಲ್ಲಿ ಜೊತೆಗೂಡಿ ಆಕೆಗೆ ಬಹಳಷ್ಟು ಗೆಲುವುಗಳನ್ನು ತಂದಿತು. ಸಂಬಳದೊಂದಿಗೆ ಪ್ರತಿ ಡೀಲಿನಲ್ಲಿ ಆಕೆಗೆ ಕಮಿಷನ್ ಕೂಡ ಸಿಗುತ್ತಿದ್ದರಿಂದ ಆಕೆ ಸಾಕಷ್ಟು ಹಣ ಗಳಿಸಿದಳಲ್ಲದೆ ಅದನ್ನೆಲ್ಲ ವಿವೇಕದಿಂದ ಸರಿಯಾದ ಜಾಗಗಳಲ್ಲಿ ಹೂಡಿದಳು. ಆ ಕಾರಣಕ್ಕೇ ಆಕೆ ದುಬೈನಲ್ಲಿ 12 ಅಪಾರ್ಟ್‌ಮೆಂಟ್‌ಗಳನ್ನು ಖರೀದಿಸಲು ಸಾಧ್ಯವಾಯಿತು.

ಹೀಗೆ ಸುನಂದ ಓರ್ವ ವಿಧವಾ ಮಹಿಳೆಯಾಗಿದ್ದರೂ ಪುರುಷ ಜಗತ್ತಿನಲ್ಲಿ ತನ್ನತನವನ್ನು ಸಾದರಪಡಿಸಿದ್ದಳಲ್ಲದೆ, ಯಾವ ಪುರುಷನ ಬೆಂಬಲವಿಲ್ಲದೆ ತನ್ನ ಕಾಲುಗಳ ಮೇಲೆ ನಿಂತು ಅಪಾರ ಯಶಸ್ಸನ್ನು ಗಳಿಸಿದ್ದಳು. ಆಗ ಸುನಂದಾಳ ವಯಸ್ಸು ಕೇವಲ 48.

ಶಶಿ ಎಂಟ್ರಿ

ಆಕೆಯ ಬದುಕಿನ ಆ ಹಂತದಲ್ಲೇ ಮಾಜಿ ರಾಜತಂತ್ರಜ್ಞ ಮತ್ತು ಖ್ಯಾತ ಲೇಖಕ ಶಶಿ ತರೂರ್ ಅವರ ಪ್ರವೇಶವಾಗಿದ್ದು. ವಿಶ್ವ ಸಂಸ್ಥೆಯನ್ನು ಆಗತಾನೆ ತೊರೆದಿದ್ದ ಶಶಿ ದುಬೈಯಲ್ಲಿದ್ದ ಅಫ್ರಾಸ್ ವೆಂಚರ್ಸ್ ಎಂಬ ಕಂಪನಿಯಲ್ಲಿ ಕೆಲಸ ಮಾಡಲು ತಮ್ಮ ಎರಡನೆ ಪತ್ನಿ ಕೆನಡಾದ ಕ್ರಿಸ್ಟಾ ಜೊತೆ ಅಲ್ಲಿಗೆ ಹೋಗಿದ್ದರು.

ಶಶಿ ತರೂರ್ ಸುರದ್ರೂಪಿ ಮತ್ತು ಬುದ್ಧಿವಂತ ಮಾತ್ರವಲ್ಲ, ಯಾರನ್ನು ಬೇಕಾದರೂ ತನ್ನ ಮಾತಿನ ಮೋಡಿಯಿಂದಲೇ ಮರಳು ಮಾಡುವಂತಹ ಚಮತ್ಕಾರಿ. ಸುನಂದಾ ಕೂಡ ತನ್ನ ಸ್ವಂತ ಬಲದಿಂದ ಯಶಸ್ವಿಯಾಗಿದ್ದ ಸುಂದರಿ. ಇವರಿಬ್ಬರು ದುಬೈಯಲ್ಲಿ ಅದ್ಯಾವಾಗ ಭೇಟಿ ಆದರೋ ಗೊತ್ತಿಲ್ಲ. ಆದರೆ ಅವರಿಬ್ಬರ ನಡುವೆ ಪ್ರೇಮ ಶುರುವಾಗಿದ್ದಂತೂ ಸತ್ಯ. ಸುನಂದಾಳತ್ತ ಶಶಿ ಅದೆಷ್ಟು ಆಕರ್ಷಿತರಾದರೆಂದರೆ ತಮ್ಮ ಎರಡನೆ ಪತ್ನಿ ಕ್ರಿಸ್ಟಾಗೆ ವಿಚ್ಛೇದನೆ ನೀಡಿ ಸುನಂದಾ ಜೊತೆ ಯಾವುದೇ ಮುಚ್ಚುಮರೆ ಇಲ್ಲದೆ ವಾಸಿಸಲಾರಂಭಿಸಿದರು.

ಅದಾದ ಕೆಲವು ತಿಂಗಳಲ್ಲೇ (2009ರಲ್ಲಿ) ಭಾರತದಲ್ಲಿ ಪಾರ್ಲಿಮೆಂಟ್ ಚುನಾವಣೆಗಳು ಪ್ರಕಟಗೊಂಡವು. ರಾಜಕೀಯದಲ್ಲಿ ಆಸಕ್ತಿ ಹೊಂದಿದ್ದ ಶಶಿ ಕಾಂಗ್ರೆಸ್ ಪಕ್ಷದ ಟಿಕೆಟ್ ಪಡೆದು ಮತ ಪೆಟ್ಟಿಗೆಯಲ್ಲಿ ತಮ್ಮ ಅದೃಷ್ಟವನ್ನರಸಿ ತಿರುವನಂತಪುರಂನಿಂದ ಸ್ಪರ್ಧಿಸಿದರು. ಆ ಹಂತದಲ್ಲೂ ಸುನಂದ ತಮ್ಮ ಪ್ರೇಯಸಿ ಎಂಬುದರ ಬಗ್ಗೆ ಶಶಿ ಯಾವ ಮುಚ್ಚುಮರೆ ಮಾಡಲಿಲ್ಲ. ಅಷ್ಟೇ ಅಲ್ಲ, ಚುನಾವಣೆಯಲ್ಲಿ ಗೆದ್ದು ವಿದೇಶಿ ವ್ಯವಹಾರಗಳ ರಾಜ್ಯ ಸಚಿವ ಸ್ಥಾನವನ್ನು ಪಡೆದಾಗಲೂ ಅವರು ಎಲ್ಲ ಕಡೆ ಸುನಂದಾರನ್ನು ತಮ್ಮೊಂದಿಗೆ ಕರೆದುಕೊಂಡು ಹೋಗುತ್ತಿದ್ದರು. ಕೊನೆಗೆ ಅವರಿಬ್ಬರು ಮದುವೆಯೂ ಆಗುವ ಮೂಲಕ ತಮ್ಮ ಸಂಬಂಧಕ್ಕೆ ಅಧಿಕೃತತೆಯನ್ನೂ ಪಡೆದರು.

ನಮ್ಮ ಸಮಾಜ ಎಂತಹ ಮೌಲ್ಯಗಳನ್ನು ತನ್ನೊಳಗೆ ಅಡಗಿಸಿಕೊಂಡಿದೆ ಎಂದರೆ ಓರ್ವ ಮಹಿಳೆ ಬುದ್ಧಿವಂತೆಯೂ, ಸುಂದರಿಯೂ, ಯಶಸ್ವಿ ಉದ್ಯಮಿಯೂ ಆಗಿರುವುದು ಸಾಧ್ಯವೇ ಇಲ್ಲ ಎಂದು ಹೆಚ್ಚಿನ ಜನ



ಎರಡನೇ ಗಂಡ ಸುಜಿತ್ ಜೊತೆ ಸುನಂದಾ

ಭಾವಿಸುತ್ತಾರೆ. ಅದ್ದರಿಂದ ಕೆಲವರು ಸುನಂದಾ ಪೆದ್ದ ಶಿಖಾಮಣಿ ಎಂದೂ, ಆಕೆಯ ಸೌಂದರ್ಯಕ್ಕೆ ಶಶಿ ಮಾರುಹೋಗಿ ಆಕೆಯನ್ನು ಮದುವೆಯಾಗಿದ್ದಾರೆ ಎಂದೂ ಹಲವರು ಆಕೆಯ ವಿರುದ್ಧ ಟೀಕಾಪ್ರಹಾರವನ್ನೇ ಮಾಡಿದರು. ಆದರೆ ಅದ್ಯಾವುದರಿಂದಲೂ ಸುನಂದ ಧೃತಿಗೆಟ್ಟಿರಲಿಲ್ಲ. ಬದಲಾಗಿ "ನನಗೆ ಯಾವ ಪುರುಷನ ಬೆಂಬಲವೂ [illegible] ಹಣ ಗಳಿಸುವುದು ಮತ್ತು ಅದನ್ನು ವೆಚ್ಚ ಮಾಡುವುದು ಎರಡೂ ನನಗೆ ಗೊತ್ತು. ನಾನು ಸ್ವಾಭಿಮಾನಿಯೂ ಹೌದು, ಸ್ವಾವಲಂಬಿಯೂ ಹೌದು" ಎಂದು ಸುನಂದ ಘಂಟಾಘೋಷವಾಗಿ ಘೋಷಿಸಿದ್ದರು.

ಇಂತಹ ಸುನಂದ ಅದ್ಯಾಕೆ ಮೆಹರ್ ತರಾರ್ ಎಂಬ ಮಹಿಳೆಯ ಬಗ್ಗೆ ಅಷ್ಟು ಆತಂಕಗೊಂಡಿದ್ದರು? ಅಥವಾ ಅವರ ದೇಹವನ್ನು ಆಕ್ರಮಿಸಿಕೊಳ್ಳುತ್ತಿದ್ದ ಕಾಯಿಲೆ ಅವರ ಮಾನಸಿಕ ಸ್ಥಿತಿಯ ಮೇಲೂ ಪರಿಣಾಮ ಬೀರಿತ್ತಾ? ವೈಯಕ್ತಿಕ ಬದುಕಿನಲ್ಲಿ ಉಂಟಾದ ಭಯ ಮತ್ತು ದೇಹದ ಮೇಲಾಗುತ್ತಿರುವ ದಾಳಿ ಇವೆರಡನ್ನೂ ತಡೆಯಲಾಗದೆ ಸುನಂದಾ ಆತ್ಮಹತ್ಯೆ ಮಾಡಿಕೊಂಡರಾ?

ಅದ್ಯಾವುದೂ ನಿಜವಾಗಿರದೆ ಆಕೆ ತನ್ನ ಆಕಸ್ಮಿಕವಾಗಿ ಹೆಚ್ಚಿನ ಔಷಧಿಯನ್ನು ಸೇವಿಸಿದ್ದರಿಂದ ಸಾವಿಗೀಡಾದರಾ?

ಈ ಪ್ರಶ್ನೆಗಳಿಗೆ ಉತ್ತರ ಸಿಗಲಾರದು. ಆದರೆ ಸುನಂದ ಬದುಕಿನ ವಿವಿಧ ಸವಾಲುಗಳನ್ನು ಎದುರಿಸಿ ಜಯಿಸಿದ ಸುಂದರಾಂಗಿ ಆಗಿದ್ದರು ಎಂಬುದರ ಬಗ್ಗೆ ಯಾವ ಅನುಮಾನಗಳೂ ಇಲ್ಲ.

ಬದುಕಿನಲ್ಲಿ ಗೆದ್ದೂ ಸೋತ ದಿಟ್ಟ ಮಹಿಳೆ ಸುನಂದಾಗೆ ವಿದಾಯ...

ಮಂಡ್ಯ: 'ಕೃಷ್ಣಾಂಬಿ' ಕಾಳಗದಲ್ಲಿ ಟಿಕೆಟ್ 'ರಮ್ಯ'ಕಥಾ....



ಮೋಹಕ ತಾರೆ ರಮ್ಯಾರ ರಾಜಕೀಯ ನಸೀಬ ನೆಟ್ಟಗಿದ್ದಂತಿಲ್ಲ. ಕಳೆದ ಮಂಡ್ಯ ಎಂಪಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಅಖಾಡಕ್ಕಿಳಿದು ಜೆಡಿಎಸ್ ಖಳ ಸಿ.ಎಸ್.ಪುಟ್ಟರಾಜುನನ್ನು ಮಕಾಡೆ ಮಲಗಿಸಿದ್ದ ರಮ್ಯಾ ಗ್ರಹಗತಿ ಗೆದ್ದ 5 ತಿಂಗಳಿಗೇ ಕೆಟ್ಟು ಹೋಗಿದೆ. ರಮ್ಯಾ ಗೆಲುವಿಗೆ ಕಾರಣವಾಗಿದ್ದ ಕಾಂಗ್ರೆಸ್ ನಾಯಕರ ಒಗ್ಗಟ್ಟು ಈಗ ದಿಕ್ಕೆಟ್ಟು ಕೂತಿರುವುದೇ ಎಲ್ಲಾ ಸಮಸ್ಯೆಯ ಮೂಲ. ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಹಾಗೂ ಎಸ್.ಎಂ.ಕೃಷ್ಣ ಬಣಗಳ ತಿಕ್ಕಾಟ ತಾರಕಕ್ಕೇರುತ್ತಿರುವಂತೆಯೇ ಮುಂದಿನ ಎಂಪಿ ಎಲೆಕ್ಷನ್‌ನಲ್ಲಿ ರಮ್ಯಾಗೆ ಟಿಕೆಟ್ ಕೊಡಬಾರದೆಂದು ಅಂಬಿ ಪಾಳಯ ಬಿರುಸು ಕಾರ್ಯಾಚರಣೆ ನಡೆಸುತ್ತಿದೆ. ರಮ್ಯಾ ಮೇಡಮ್ ಕೃಷ್ಣ ಬಣದ ಜೊತೆ ಸಾಫ್ಟ್ ಆಗುತ್ತಿದ್ದಾರೆನ್ನುವುದೇ ಅಂಬಿ ಗುಂಪಿನ ಮುನಿಸಿಗೆ ಕಾರಣ.

ಕಳೆದ ಉಪಚುನಾವಣೆಯಲ್ಲಿ ಕೃಷ್ಣಾಪ್ತೆ ರಮ್ಯಾಳನ್ನು ಕೈ ಅಭ್ಯರ್ಥಿಯಾಗಿ ಕಣಕ್ಕಿಳಿಸಿದಾಗಲೇ ಅಂಬಿ ಟೀಮಿಗೆ ದೊಡ್ಡ ಅಸಮಾಧಾನವಾಗಿತ್ತು. ಅಂಬಿಗೆ ರಮ್ಯಾರನ್ನು ಕಂಡರೆ ಅಷ್ಟಕಷ್ಟೆ. ಆದರೂ ಉಪಚುನಾವಣೆಯಲ್ಲಿ ತಮ್ಮ ಅಭ್ಯರ್ಥಿಯನ್ನು ಗೆಲ್ಲಿಸಿಕೊಂಡು ಮುಖ ಉಳಿಸಿಕೊಳ್ಳುವ ಅನಿವಾರ್ಯತೆ ಅಂಬಿ ಮತ್ತು ಸಿಎಂ ಸಿದ್ದರಾಮಯ್ಯ ಇಬ್ಬರಿಗೂ ಇದ್ದುದರಿಂದ ತನ್ನೆಲ್ಲ ಅಸಮಾಧಾನವನ್ನು ಬದಿಗಿಟ್ಟು ರಮ್ಯಾ ಗೆಲುವಿಗೆ ಕೈ ಪಾಳಯ ಒಮ್ಮತದಿಂದ ಶ್ರಮಿಸಿತ್ತು. ಆರಂಭದಲ್ಲಿ ಹಾಗೋ-ಹೀಗೋ ಇದ್ದ ಅಂಬಿ-ರಮ್ಯಾ ಬಾಂಧವ್ಯ ಈಗ ಕೆಟ್ಟುಹೋಗಿದೆ. ರಮ್ಯಾಳ ಮುಖ ಕಂಡರೇನೆ ಸಿಡಿಮಿಡಿಗೊಳ್ಳುವಷ್ಟು ಅಂಬಿ 'ರೆಬೆಲ್' ಆಗಿದ್ದರೆ ಅಂಬಿ ಬಳಗಕ್ಕೆ ರಮ್ಯಾ ತಲೆ ಕಂಡರಾಗದಂತಾಗಿದೆ. ದಿನೇದಿನೇ ರಮ್ಯಾಳ ವಿರುದ್ಧ ಆರೋಪಗಳ ಸುರಿಮಳೆಯನ್ನೇ ಸುರಿಸುತ್ತಾ ಯಾವ ಕಾರಣಕ್ಕೂ ಮುಂದಿನ ಎಂಪಿ ಚುನಾವಣೆಯಲ್ಲಿ ರಮ್ಯಾ ಬೇಡವೇ ಬೇಡ ಎಂದು ಅಂಬಿ ಹಿಂಬಾಲಕರು ಆಂತರಿಕ ಪ್ರಚಾರ ನಡೆಸಿದ್ದಾರೆ. ಇದು ಎಸ್.ಎಂ.ಕೃಷ್ಣ ಬಣಕ್ಕೆ ಸೆಡ್ಡು ಹೊಡೆಯುವ ಪ್ರಯತ್ನ ಎನ್ನುವುದು ಬಹಿರಂಗ ರಹಸ್ಯ. ಅಂತೂಇಂತೂ ಕೃಷ್ಣಾಂಬಿ ಬಣಗಳ ಮುಸುಕಿನ ಮುಲುಕಾಟ ಜಿಲ್ಲಾ ಕಾಂಗ್ರೆಸ್ ಮಾನವನ್ನು ಬೀದಿಗೆ ತಂದು ಬಿಟ್ಟಿದೆ. ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರೂ ಮಂಡ್ಯಕ್ಕೆ ಕಾಲಿಡದ ಪರಿಣಾಮ ಇಲ್ಲಿ ಅಂಬರೀಷ್‌ಗಿಂತ ಅವರ ಬೆಂಬಲಿಗರ ರಾಜಕೀಯ ಆರ್ಭಟವೇ ಜೋರಾಗಿ ಸಾಗುತ್ತಿದೆ.

ಇತ್ತೀಚೆಗಷ್ಟೆ ಪಾಂಡವಪುರ ಹಾಗೂ ಶ್ರೀರಂಗಪಟ್ಟಣಗಳ ಸಭೆಯಲ್ಲಿ ಅಂಬಿ ಶಿಷ್ಯರಾದ ಎಲ್.ಡಿ.ರವಿ, ಲಿಂಗರಾಜು ಮತ್ತಿತರರು ರಮ್ಯಾರಿಗೆ ಟಿಕೆಟ್ ಕೊಡಬೇಡಿ, ಒಂದು ವೇಳೆ ಟಿಕೆಟ್ ಕೊಟ್ಟರೆ ಅವರ ಪರ ಕೆಲಸ ಮಾಡುವುದಿಲ್ಲ ಎಂದು ಪಕ್ಷದ ನಾಯಕರಿಗೆ ಎಚ್ಚರಿಕೆ ನೀಡಿದ್ದಾರೆ. ಈ ನಡುವೆ ಅಂಬಿ ಶಿಷ್ಯರಿಗೆ ಸಾಥ್ ನೀಡಿರುವ ನಾಗಮಂಗಲದ ಮಾಜಿ ಶಾಸಕ 'ಸಮಯದ ಗೊಂಬೆ' ಎಲ್.ಆರ್.ಶಿವರಾಮೇಗೌಡ ಕೂಡ ರಮ್ಯಾ ವಿರುದ್ಧ ಮಾತನಾಡಿ ತನ್ನ ಬೇಳೆ ಬೇಯಿಸಿಕೊಳ್ಳಲು ಮುಂದಾಗಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಓಲೈಸಿಕೊಂಡು ಎಂಪಿ ಟಿಕೆಟ್ ಪಡೆಯುವ ಹುನ್ನಾರ ನಡೆಸಿರುವ ಶಿವರಾಮೇಗೌಡರದ್ದು. ಹಾಗಿದ್ದರೂ 'ಹೈಕಮಾಂಡ್ ನನಗಾದರೂ ಟಿಕೆಟ್ ಕೊಡ್ಲಿ, ಎಸ್.ಎಂ.ಕೃಷ್ಣ ಪುತ್ರಿ ಶಾಂಭವಿಗಾದ್ರೂ ಟಿಕೆಟ್ ಕೊಡ್ಲಿ, ಇಲ್ಲಾ ರಮ್ಯಾಗಾದ್ರು ಟಿಕೆಟ್ ಕೊಡ್ಲಿ, ಯಾರನ್ನು ಹೈಕಮಾಂಡ್ ಅಭ್ಯರ್ಥಿ ಮಾಡುತ್ತೋ ಅವರ ಪರ ಕೆಲಸ ಮಾಡುತ್ತೇನೆ' ಎಂಬರ್ಥದ ಸರ್ವಸ್ನೇಹಿ ಡೈಲಾಗ್ ಹೊಡೆಯುತ್ತಲೇ ಅಂಬಿ ಶಿಷ್ಯರ 'ರಮ್ಯಾ ಹಠವೋ' ಹೋರಾಟಕ್ಕೆ ಕೈಜೋಡಿಸಿದ್ದಾರೆ. 2 ಬಾರಿ ವಿಧಾನಸಭೆ, ಒಮ್ಮೆ ಲೋಕಸಭೆ ಚುನಾವಣೆಯಲ್ಲಿ ಸೋತು ನಿರುದ್ಯೋಗಿಯಾಗಿರುವ ಶಿವರಾಮೇಗೌಡರಿಗೆ ಅರ್ಜೆಂಟಾಗಿ ಅಧಿಕಾರ ಬೇಕಿದೆ.

ಏಟು-ಎದಿರೇಟು

ಅಂಬಿ ಟೀಮು ಇಷ್ಟೆಲ್ಲಾ ಪೊಲಿಟಿಕಲ್ ಪ್ಲ್ಯಾನಿಂಗ್‌ನೊಂದಿಗೆ ಹೂಂಕರಿಸುತ್ತಿದ್ದರೆ ಕೃಷ್ಣ ಬಣವೇನು ಸುಮ್ಮನೇ ಕುಳಿತಿಲ್ಲ. ಎದಿರೇಟು ಮಡಗಲು ಸಿದ್ಧವಾಗೇ ನಿಂತಿದೆ. ಪಾಂಡವಪುರದ ಕಾಂಗ್ರೆಸ್ ಕಾರ್ಯಕರ್ತ ಕೋ.ಪು.ಗುಣಶೇಖರ್ ಎಂಬಾತ ರಮ್ಯಾ ವಿರುದ್ಧ ಮಾತನಾಡಿರುವ ಎಲ್.ಡಿ.ರವಿ, ಪಾಂಡವಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಮಕೃಷ್ಣ ಹಾಗೂ ಮಾಜಿ ಶಾಸಕ ಶಿವರಾಮೇಗೌಡ ವಿರುದ್ಧ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್‌ಗೆ ದೂರು ನೀಡಿ 'ಎಲ್.ಆರ್.ಶಿವರಾಮೇಗೌಡ ಕಾಂಗ್ರೆಸ್‌ಗೆ ಅಧಿಕೃತವಾಗಿ ಸೇರ್ಪಡೆಯಾಗಿರುವುದೇ ಗೊತ್ತಿಲ್ಲ. ಇನ್ನು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮೇಲುಕೋಟೆ ಕ್ಷೇತ್ರದಲ್ಲಿ 2314 ಮತ ಪಡೆದು ಕಾಂಗ್ರೆಸ್ ಪಕ್ಷದ ಮಾನವನ್ನು ಹರಾಜು ಹಾಕಿದ ಎಲ್.ಡಿ.ರವಿಗೆ ಸಂಸದೆ ರಮ್ಯಾ ವಿರುದ್ಧ ಮಾತನಾಡಲು ನೈತಿಕತೆಯೇ ಇಲ್ಲ' ಎಂದು ಅಂಬಿ ಶಿಷ್ಯರಿಗೆ ಟಾಂಗ್ ನೀಡಿದ್ದಾರೆ. ಈ ಮಧ್ಯೆ ರಮ್ಯಾ ಕೂಡ ಅಂಬಿ ವಿರುದ್ಧ ತಿರುಗೇಟು ನೀಡಿದ್ದಾರೆ. ಇತ್ತೀಚೆಗೆ ಕೆ.ಆರ್.ಪೇಟೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ 'ಮಂಡ್ಯ ಜಿಲ್ಲೆಗೆ ಕೇಂದ್ರೀಯ ವಿದ್ಯಾಲಯ ಹಾಗೂ ಕ್ಯಾನ್ಸರ್ ಆಸ್ಪತ್ರೆ ಮಂಜೂರು ಆಗುವಂತೆ ಮಾಡಿದ್ದೇನೆ. ಹಿಂದಿನ ಸಂಸದರು ಮನಸ್ಸು ಮಾಡಿದ್ದರೆ ಈ ಎರಡೂ ಸಂಸ್ಥೆಗಳು 10 ವರ್ಷಗಳ ಹಿಂದೆಯೇ ಜಿಲ್ಲೆಗೆ ಬರುವಂತೆ ಮಾಡಬಹುದಿತ್ತು' ಎಂದು ಭಾಷಣ ಬಿಗಿಯುವ ಮೂಲಕ ಹೆಸರೇಳದೆ ಅಂಬಿಗೆ ಬಿಸಿ ತಗುಲಿಸಿದ್ದಾರೆ. ಇತ್ತ ಎಸ್.ಎಂ.ಕೃಷ್ಣ ಬಣದ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಆತ್ಮಾನಂದ ಕೂಡ ಅಂಬಿ ಬಣದ ವಿರುದ್ಧ ಗರಂ ಆಗಿದ್ದಾರೆ.

ವೈಯಕ್ತಿಕವಾಗಿ ಅಂಬಿ ಹಾಗೂ ಆತ್ಮಾನಂದರ ನಡುವಿನ ಕಂದಕ ತಿಳಿದಿರುವಂತದ್ದೆ. ಮಂಡ್ಯ ವಿಧಾನಸಭೆ ಟಿಕೆಟ್ ಹಂಚಿಕೆಯಿಂದ ಶುರುವಾದ ಇವರಿಬ್ಬರ ಮುನಿಸು ಜಿಲ್ಲಾಧ್ಯಕ್ಷ ಸ್ಥಾನದಿಂದ ಆತ್ಮಾನಂದರನ್ನು ಕಿತ್ತೆಸೆದು ಆ ಜಾಗಕ್ಕೆ ತನ್ನ ಬಣದ ಬಿ.ಸಿ.ಶಿವಾನಂದರನ್ನು ನೇಮಕ ಮಾಡುವಂತೆ ಸಚಿವ ಅಂಬಿ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಹಾಗೂ ರಾಜ್ಯ ಕಾಂಗ್ರೆಸ್ ನಾಯಕರನ್ನು ಒತ್ತಾಯಿಸುವ ಮಟ್ಟಕ್ಕೂ ಬಂದಿತ್ತು. ಇದಕ್ಕೆ ಪೂರಕವಾಗಿ ಅಂಬಿ ಶಿಷ್ಯ ಅಮರಾವತಿ ಚಂದ್ರಶೇಖರ್ ನೇತೃತ್ವದಲ್ಲಿ ಹಲವಾರು ಸಭೆ ನಡೆದು ಆತ್ಮಾನಂದನನ್ನು ಕಿತ್ತೆಸೆಯುವಂತೆ ಎಚ್ಚರಿಕೆಯನ್ನೂ ರವಾನಿಸಲಾಗಿತ್ತು.

ಆತ್ಮಾನಂದನ ಉಚ್ಚಾಟನೆಯ ಕಾರ್ಯಕ್ಕೆ ಬೆಂಬಲಿಸುವಂತೆ ಅಂಬಿ ಶಿಷ್ಯರು ಸಂಸದೆ ರಮ್ಯಾರನ್ನು ಒತ್ತಾಯಿಸಿದಾಗ 'ತೆರವಾಗುವ ಆ ಸ್ಥಾನಕ್ಕೆ ಮಾಜಿ ಅಧ್ಯಕ್ಷ ಹಳುವಾಡಿ ನಾಗರಾಜುರನ್ನು ಕೂರಿಸುವುದಾದರೆ ಬೆಂಬಲ ಕೊಡುತ್ತೇನೆ. ಇಲ್ಲವಾದರೆ ಆತ್ಮಾನಂದರೇ ಇರಲಿ' ಎಂದು ಹೇಳಿದ್ದರು. ರಮ್ಯಾ ಮೇಲಿದ್ದ ಅಂಬಿ ಬೆಂಬಲಿಗರ ಅಸಮಾಧಾನ ಸಿಟ್ಟಾಗಿ ಬದಲಾಗಿದ್ದೇ ಆಗ.




ಪಾಂಡವಪುರದಲ್ಲಿ ಅಂಬಿ ಬೆಂಬಲಿಗರ ಸಭೆ

ಅಂದಿನಿಂದ ಶುರುವಾದ ರಮ್ಯಾ ಹಟಾವೋ ಹೋರಾಟ ದಿನೇದಿನೇ ಹೆಚ್ಚಾಗುತ್ತಿದೆ. ಮಂಡ್ಯ ಜಿಲ್ಲಾ ಕಾಂಗ್ರೆಸ್‌ನಲ್ಲಿ ನಡೆದಿರುವ ಬಣಗಳ ನಡುವಿನ ಭಿನ್ನಮತ ಕಂಡು ಕಾರ್ಯಕರ್ತರು ಹಾಗೂ ಸಾರ್ವಜನಿಕರು ಕ್ಯಾಕರಿಸಿ ಉಗಿಯುತ್ತಿರೋದು ನಾಯಕರಿಗೆ ಇನ್ನೂ ಅರ್ಥವಾದಂತೆ ಕಾಣುತ್ತಿಲ್ಲ.

ರಮ್ಯಾ ದಾರಿ ಸಲೀಸಾಗಿಲ್ಲ

ಉಪಚುನಾವಣೆಯಲ್ಲಿ ಗೆದ್ದಿದ್ದ ರಮ್ಯಾಗೆ ಈ ಬಾರಿ ಹಾದಿ ಅಷ್ಟು ಸಲೀಸಾಗಿಲ್ಲ. ಆಗತಾನೆ ರಾಜ್ಯದ ಗದ್ದುಗೆ ಏರಿದ್ದ ಕಾಂಗ್ರೆಸ್‌ಗೆ ಗೆಲುವಿನ ಅಲೆ ಕಾಯ್ದುಕೊಳ್ಳುವ ಅನಿವಾರ್ಯತೆ ಇತ್ತು. ಜೊತೆಗೆ ಕೆಲವರ ಕುರ್ಚಿಗೆ ವೈಯಕ್ತಿಕವಾಗಿಯೂ ಆ ಚುನಾವಣೆ ಸವಾಲೆನಿಸಿತ್ತು. ಹಾಗಾಗಿ ಭಿನ್ನಮತ ಮರೆತು ಒಂದಾಗಿ ಕೆಲಸಮಾಡಿ ಜೆಡಿಎಸ್ ಭದ್ರಕೋಟೆಯನ್ನು ರಮ್ಯಾ ಮೂಲಕ ಭೇದಿಸಿದ್ದರು. ಸಿಎಂ ಸಿದ್ದರಾಮಯ್ಯ ತನ್ನ ಪರಮಾಪ್ತ ಸಚಿವ ಮಹದೇವಪ್ಪನವರನ್ನು ಮಂಡ್ಯ ಜಿಲ್ಲೆಗೆ ಕಳುಹಿಸಿ ಚುನಾವಣಾ ದೇಖಾರೇಖಿ ವಹಿಸಿದ್ದಲ್ಲದೆ ರಮ್ಯಾ ಗೆಲ್ಲಿಸುವ ಹೊಣೆಯನ್ನು ಅಂಬಿ ಹೆಗಲಿಗೇ ಏರಿಸಿದ್ದರು. ತನ್ನ ಸಚಿವ ಸ್ಥಾನದ ಅಳಿವು-ಉಳಿವಿನ ಪ್ರಶ್ನೆಗೆ ಬೆಚ್ಚಿಬಿದ್ದ ಅಂಬಿ ಕ್ಷೇತ್ರದಲ್ಲೇ ಠಿಕಾಣಿ ಹೂಡಿ ರಮ್ಯಾರನ್ನು ಗೆಲ್ಲಿಸಿಕೊಂಡಿದ್ದರು. ಸಿದ್ದರಾಮಯ್ಯನ ಮತ್ತೊಬ್ಬ ಶಿಷ್ಯ ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ತನ್ನ ಕ್ಷೇತ್ರದಲ್ಲಿ ಕೊಟ್ಟ ಭರ್ಜರಿ 24 ಸಾವಿರ ಮತಗಳ ಲೀಡ್ ರಮ್ಯಾ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು.



ಆದರೆ ಈಗ ಪರಿಸ್ಥಿತಿ ಸಂಪೂರ್ಣವಾಗಿ ಬದಲಾಗಿದೆ. ರಮ್ಯಾ ಪರ ಕೆಲಸ ಮಾಡಿದವರೇ ಈಗ ಆಕೆಯ ವಿರುದ್ಧ ಕುದಿಯುತ್ತಿದ್ದಾರೆ. ಮಂಡ್ಯ, ಪಾಂಡವಪುರ ಹಾಗೂ ಶ್ರೀರಂಗಪಟ್ಟಣದಲ್ಲಿ ನಡೆದ ಬ್ಲಾಕ್ ಕಾಂಗ್ರೆಸ್ ಸಭೆಯಲ್ಲಿ ಅಂಬಿ ಬೆಂಬಲಿಗರೇ ರಮ್ಯಾಗೆ ಮಂಡ್ಯದಿಂದ ಟಿಕೆಟ್ ಕೊಡುವುದು ಬೇಡ ಎಂಬ ನಿರ್ಣಯಕ್ಕೂ ಬಂದಿದ್ದಾರೆ.

ರಮ್ಯಾಳ ಕೆಲ ನಿಷ್ಠುರ ನಡವಳಿಕೆಗಳೂ ಆಕೆಗೆ ಕಂಟಕವಾಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ತನ್ನ ಗೆಲುವಿಗೆ ಕಾರಣರಾದ ಶಾಸಕರುಗಳನ್ನು ಸೌಜನ್ಯಕ್ಕೂ ಕರೆಯದೆ ಅವರದೇ ಕ್ಷೇತ್ರದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಅವರ ಅಸಮಾಧಾನಕ್ಕೂ ಕಾರಣರಾಗಿದ್ದಾರೆ. ತನ್ನ ಚಿತ್ರರಂಗದ ಇತಿಹಾಸದಲ್ಲಿ ಸದಾ ವಿವಾದದ ಮೂಲಕ ಸುದ್ದಿಯಾಗುತ್ತಿದ್ದ ರಮ್ಯಾ ರಾಜಕೀಯ ವಲಯದಲ್ಲೂ ವಿವಾದದ ಮೂಲಕವೇ ಸುದ್ದಿಯಲ್ಲಿದ್ದಾರೆ. ಅಂಬಿ ಹಾಗೂ ಎಸ್.ಎಂ.ಕೃಷ್ಣ ಬಣಗಳ ಜಟಾಪಟಿಯಲ್ಲಿ ಅನಗತ್ಯ ಟಾರ್ಗೆಟ್ ಆಗುತ್ತಿರುವ ರಮ್ಯಾಳ ಸ್ಥಿತಿ ಮುಂದೆ ಏನಾಗುವುದೋ ಎಂಬ ಕುತೂಹಲ ಜನರಲ್ಲಿದೆ. ಒಟ್ಟಿನಲ್ಲಿ ಮುಂದಿನ ದಿನಗಳು ರಮ್ಯಾ ಪಾಲಿಗೆ ಅಷ್ಟು ಸಲೀಸಾಗಿರುವುದಿಲ್ಲ ಎಂಬುದಂತೂ ಸತ್ಯ.

● ಮಂಡ್ಯ ನಾಗೇಶ್


ಐಟಿ ದಾಳಿಯ ಭೀತಿಯಲ್ಲಿ...

(10ನೇ ಪುಟದಿಂದ)

ಅಪ್ಪಟ ರಂಗಭೂಮಿ ಕಲಾವಿದರಾದ ಲೋಕಿ, ಚೇತನ್ ಮತ್ತು ಮಧು ಮಾಂತ್ರಿಕರಾಗಿ, ಕಿರಾತಕರಾಗಿ ಅದ್ಭುತವಾಗಿ ನಟಿಸಿರುವುದೇ ಸಿನಿಮಾದ ಹೈಲೈಟು.

ಖಳನಾಯಕ ಎಷ್ಟು ಕ್ರೂರವಾಗಿ, ಕೆಟ್ಟದಾಗಿ, ದುಷ್ಟನಾಗಿ ಕಾಣಿಸುತ್ತಾನೋ ಅಂಥವನನ್ನು ಸಂಹರಿಸುವ ಹೀರೋ ಸಹಜವಾಗೇ ಮಿಂಚುತ್ತಾನೆಂಬ ಸಿನಿಮಾ ಸೂತ್ರವೇ 'ಭಜರಂಗಿ'ಯನ್ನು ಗೆಲ್ಲಿಸುತ್ತದೆ. ಇನ್ನೊಂದರ್ಥದಲ್ಲಿ ಇದು ವಿಲನ್ನುಗಳು ಗೆಲ್ಲಿಸಿಕೊಟ್ಟ ಸಿನಿಮಾ ಕೂಡ. ಹೀಗಾಗಿ ಶಿವಣ್ಣನ ಈ ಹಿಂದಿನ ಎಲ್ಲಾ ಚಿತ್ರಗಳಿಗಿಂತಲೂ 'ಭಜರಂಗಿ' ಅದರ ಕತೆ ಮತ್ತು ಪಾತ್ರಗಳ ದೃಷ್ಟಿಯಿಂದ ವಿಭಿನ್ನ ಎನ್ನಿಸಿದೆ. ಕಳೆದ ವರ್ಷ ಇಡೀ ಭಾರತದಲ್ಲಿ ತೆರೆಕಂಡ ಬೇರೆ ಬೇರೆ ಭಾಷೆಗಳ ಹತ್ತು ವಿಶಿಷ್ಟ ಚಿತ್ರಗಳ ಪಟ್ಟಿಯಲ್ಲಿ ಕನ್ನಡದ 'ಭಜರಂಗಿ' ಕೂಡ ಇದೇ ಕಾರಣದಿಂದಾಗಿ ಸ್ಥಾನ ಗಿಟ್ಟಿಸಿದೆ.

ಇಡೀ ಚಿತ್ರದ ವೈಶಿಷ್ಟ್ಯವಿರುವುದು ಅದರ ಕೋರಿಯೋಗ್ರಫಿ ಮತ್ತು ಹಿನ್ನೆಲೆ ಸಂಗೀತದಿಂದಾಗಿ. ಆಜಾನುಬಾಹು ಖಳನಾಯಕರನ್ನು ಕ್ಯಾಮೆರಾಮನ್ ಜೈ ಆನಂದ್ ಚಿತ್ರವಿಚಿತ್ರ ಆ್ಯಂಗಲ್ಲುಗಳಿಂದ ತೋರಿಸುತ್ತಾರೆ. ಇದಕ್ಕೆ ತಕ್ಕಂತೆ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಭಯಾನಕ ಸನ್ನಿವೇಶಗಳನ್ನು ಹಾರರ್ ಸಿನಿಮಾಗಳಂತೆ ಥವಗುಟ್ಟಿಸುವ ಶಬ್ಧಗಳನ್ನು ಸೃಷ್ಟಿಸುತ್ತಾರೆ. ಪೈಶಾಚಿಕ ಶಕ್ತಿಗಳ ಪಾಲಿಗೆ ಮಾರಕ ದೈವವಾದ ಆಂಜನೇಯನ ಭಕ್ತಿಧಾರೆಯೂ ಇಲ್ಲಿದೆ. ಹೀಗಾಗಿ ದೇವರ ಚಿತ್ರವೆಂದು ಭಾವಿಸಿ ಮಹಿಳೆಯರು ಮಕ್ಕಳಾದಿಯಾಗಿ ಥೇಟರುಗಳಿಗೆ ನುಗ್ಗುತ್ತಿದ್ದಾರೆ. ಅಬ್ಬರದ ಪ್ರಚಾರ ಒಂದೆಡೆಯಾದರೆ ಏಕಕಾಲಕ್ಕೆ ಕರ್ನಾಟಕದ ಇನ್ನೂರ ಮೂವತ್ತೈದು ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡಿದ್ದರಿಂದಾಗಿ ಬಿಡುಗಡೆಯಾದ ಮೊದಲ ದಿನಕ್ಕೇ ಸಿನಿಮಾದ ಗಳಿಕೆ ಒಂದೂವರೆ ಕೋಟಿಯನ್ನು ದಾಟಿತ್ತು. ವಿಶೇಷವೆಂದರೆ ಬೇರಾವುದೇ ಕನ್ನಡ ಚಿತ್ರಕ್ಕಿಲ್ಲದಂತೆ ಮೊದಲ ದಿನದ ಟಿಕೆಟ್ ದರವನ್ನು ಹೆಚ್ಚಿಸಿದ್ದು. ಅಂದರೆ ಮೊದಲ ದಿನ ನೋಡಿದ ಪ್ರತಿಯೊಬ್ಬರೂ ದುಪ್ಪಟ್ಟು ರೇಟು ಕೊಟ್ಟಿದ್ದರಿಂದಾಗಿ 'ಭಜರಂಗಿ'ಯ ಮೊದಲ ವಾರದ ಗಳಿಕೆಯೇ ಹತ್ತು ಕೋಟಿಯನ್ನು ಮುಟ್ಟಿತ್ತು!



ಕೇವಲ ನಾಲ್ಕು ವಾರದಲ್ಲಿ ಭಜರಂಗಿ 25 ಕೋಟಿ ರೂಪಾಯಿಗಳಷ್ಟನ್ನು ಬಾಚಿದ್ದು ಇತ್ತೀಚಿನ ದಿನಗಳ ಮಟ್ಟಿಗೆ ದಾಖಲೆಯೆ. ವಿಶೇಷವೆಂದರೆ ಭಜರಂಗಿಯನ್ನು ಕರ್ನಾಟಕವಷ್ಟೇ ಅಲ್ಲದೆ ತಮಿಳುನಾಡು, ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲೂ ಏಕಕಾಲಕ್ಕೆ ಬಿಡುಗಡೆ ಮಾಡಲಾಗಿತ್ತು. ದೂರದ ಆಸ್ಟ್ರೇಲಿಯಾದಲ್ಲಿ ನೇರವಾಗಿ ಥೇಟರುಗಳಿಗೆ ಬಿಡುಗಡೆಗೊಳಿಸಿದ್ದರೆ ಅಮೆರಿಕದ ಮಟ್ಟಿಗೆ ಇಂಟರ್ನೆಟ್ ಮೂಲಕ ಬಿಡುಗಡೆಗೊಳಿಸಿದ್ದು ಇದಕ್ಕೊಂದು ಅಂತಾರಾಷ್ಟ್ರೀಯ ವ್ಯಾಪ್ತಿಯನ್ನು ಕಲ್ಪಿಸಿದಂತಾಗಿತ್ತು.

ಇಷ್ಟೊಂದು ವ್ಯಾಪಕವಾಗಿ ಮತ್ತು ವ್ಯವಸ್ಥಿತವಾಗಿ 'ಭಜರಂಗಿ'ಯನ್ನು ಪ್ರೊಮೋಟ್ ಮಾಡಿದ್ದು ಅದರ ನಿರ್ಮಾಪಕ ಮಂಜುನಾಥ್ ಅರ್ಥಾತ್ ಜಾಕ್ ಮಂಜು. ಯಡಿಯೂರು ವಾರ್ಡಿನ ಬಿಜೆಪಿ ನಾಯಕ ನಟರಾಜ್‌ಗೌಡ ಕೂಡ ಇದರ ಮತ್ತೊಬ್ಬ ಪಾಲುದಾರ. ಇವರಿಬ್ಬರ ಪ್ರಯತ್ನದ ಫಲವಾಗೇ ಸರಿಸುಮಾರು ಎಂಟು ಕೋಟಿಯ ವೆಚ್ಚದಲ್ಲಿ ಭಜರಂಗಿ ಸೃಷ್ಟಿಯಾದದ್ದು. ಅದೆಂಥಾ ಮಹತ್ವಾಕಾಂಕ್ಷೆಯಿಂದ ಇಡೀ ಚಿತ್ರ ನಿರ್ಮಿಸಲಾಗಿತ್ತೆಂದರೆ ದುರುಳ ಮಾಂತ್ರಿಕರ ಪಾಳೇಪಟ್ಟನಂತಿದ್ದ ರಾಮದುರ್ಗ ಎಂಬ ಕಾಲ್ಪನಿಕ ಗ್ರಾಮವೊಂದನ್ನು ಪೂರ್ತಿ ಸೆಟ್ ಹಾಕಿಯೇ ಸೃಷ್ಟಿಸಲಾಗಿತ್ತು. ಕನ್ನಡದ ಮಾರುಕಟ್ಟೆ ಮತ್ತು ಸಿನಿಮಾ ಉತ್ಪತ್ತಿಗೆ ಹೋಲಿಸಿದರೆ ನಿರ್ಮಾಪಕದ್ವಯರಾದ ಮಂಜು ಮತ್ತು ನಟರಾಜ್‌ಗೌಡ ದೊಡ್ಡದೊಂದು ರಿಸ್ಕನ್ನೇ ಮೇಲೆಳೆದುಕೊಂಡಿದ್ದಂತೂ ಸತ್ಯ.

ಹಾಲಿವುಡ್ ಸಿನಿಮಾಗಳಿಗೆ ಸಮನಾಗಿ ಗ್ರಾಫಿಕ್ಸ್ ಸಂಯೋಜಿಸಿದ್ದೇ ಸಿನಿಮಾದ ನಿರ್ಮಾಣ ವೆಚ್ಚವನ್ನು ದುಪ್ಪಟ್ಟಾಗಿಸಿತ್ತು. ಕತೆ, ನಿರೂಪಣೆ, ಪಾತ್ರಗಳಿಂದಾಗಿಯೇ ಸಿನಿಮಾ ಗೆದ್ದೇ ಗೆಲ್ಲುತ್ತದೆಯೆಂಬ ಗ್ಯಾರಂಟಿ ನಿರ್ಮಾಪಕರಿಗಿತ್ತೇನೊ, ಹೀಗಾಗಿ ಮೊದಲ ದಿನ ನಾಲ್ಕು ಷೋಗಳಿಗೆ ಬದಲಾಗಿ ಕೆಲವೆಡೆ ಐದು ಷೋಗಳನ್ನು ದುಪ್ಪಟ್ಟು ಟಿಕೆಟ್ ಬೆಲೆಯಿಟ್ಟು ಪ್ರದರ್ಶಿಸಿದರೂ ಜನಕ್ಕೆ ಟಿಕೆಟ್ ಸಿಗಲಿಲ್ಲ. ಅದೇನು ನಿರೀಕ್ಷೆಯಿತ್ತೋ ಈ ಪಾತ್ರಕ್ಕೆಂದೇ ಶಿವಣ್ಣ ಸತತ ಒಂದು ವರ್ಷ ಶ್ರಮಪಟ್ಟು ಸಿಕ್ಸ್‌ಪ್ಯಾಕ್ ದೇಹದಾರ್ಢ್ಯ ರೂಪಿಸಿಕೊಂಡರು. ಈ ಇಳಿವಯಸ್ಸಿನಲ್ಲಿ ನಟನೊಬ್ಬ ಸಿಕ್ಸ್‌ಪ್ಯಾಕ್ ಬೆಳೆಸುವುದು ಸಾಮಾನ್ಯ ಸಂಗತಿಯೇನಲ್ಲ. ವಿಶೇಷವೆಂದರೆ ಶಿವಣ್ಣನ ಸಿಕ್ಸ್‌ಪ್ಯಾಕ್ ಅನ್ನು ವಿನಾಕಾರಣ ಎಲ್ಲೂ ವಿಜೃಂಭಿಸದೆ ಕ್ಲೈಮಾಕ್ಸಿಗೆ ತಕ್ಕಂತೆ ಮಾತ್ರವೇ ಬಳಸಿದ್ದು!

ಇಂಥಾದ್ದೊಂದು ಹಿನ್ನೆಲೆ ಮತ್ತು ಆರ್ಭಟವನ್ನು ಕಂಡೇ ಇರಬೇಕು ಭಜರಂಗಿ ಕುರಿತಂತೆ ಚಿತ್ರವಿಚಿತ್ರ ವದಂತಿಗಳ ಪುಕಾರೆದ್ದಿದೆ. ಮೊದಲ ವಾರಕ್ಕೆ 10 ಕೋಟಿ ದುಡಿಯಿತು, ಪ್ರಾರಂಭದ ದಿನವೇ ಒಂದೂವರೆ ಕೋಟಿ ಗಳಿಸಿತು, ನಾಲ್ಕೇ ವಾರದಲ್ಲಿ 25 ಕೋಟಿ ಬಾಚಿತ್ತು ಇತ್ಯಾದಿಯಾಗಿ ದಿನಕ್ಕೊಂದು ಸುದ್ದಿ ಹಬ್ಬುತ್ತಲೇ ಇದೆ. ಆದರೆ ಈ ಮಾತನ್ನು ಅದರ ನಿರ್ಮಾಪಕ ಮಂಜು ಮಾತ್ರ ಬಿಲ್‌ಕುಲ್ ನಿರಾಕರಿಸುತ್ತಾರೆ. 'ನೋಡಿ ಸಾರ್, ಪಾಲಿಟಿಕ್ಸ್‌ಗೋಸ್ಕರ ಏನೇನೋ ಪುಕಾರೆಬ್ಬಿಸಿದರೆ ತಪ್ಪಾಗುತ್ತದೆ. ಮೊದಲ ವಾರಕ್ಕೆ ಥೇಟರ್ ಬಾಡಿಗೆ ಕಳೆದು 4.70 ಕೋಟಿ ಸಂಗ್ರಹವಾಗಿದ್ದಂತೂ ಸತ್ಯ. ಏಕೆಂದರೆ ರಿಲೀಜ್ ಮಾಡಿದ್ದೇ 230 ಕ್ಕೂ ಹೆಚ್ಚು ಥೇಟರುಗಳಲ್ಲಿ. ಶಿವಣ್ಣನವರ ಈ ಹಿಂದಿನ ಯಾವ ಚಿತ್ರಕ್ಕೂ ಇಂಥಾದ್ದೊಂದು ಓಪನಿಂಗ್ ಸಿಕ್ಕಿರಲಿಲ್ಲ ಅನ್ನೋದು ಬಿಟ್ಟರೆ 'ಭಜರಂಗಿ' ಸಾರ್ವಕಾಲಿಕ ದಾಖಲೆಯನ್ನೇನು ಮಾಡಿಲ್ಲ. ಸಿನಿಮಾ ಅದ್ಭುತವಾಗಿ ಬಂದಿದೆ ನಿಜ. ನೋಡಿದ ನೂರು ಮಂದಿಯ ಪೈಕಿ 95 ಮಂದಿಗೆ ಸಿನಿಮಾ ಖುಷಿ ಕೊಡುತ್ತದೆಯೆಂದರೆ ಯಶಸ್ಸು ಅದಕ್ಕಿಂತ ದೊಡ್ಡದಿಲ್ಲ. ಹಾಗಂತ ಅಷ್ಟು ಕೋಟಿ ಬಂತು ಇಷ್ಟು ಕೋಟಿ ಬಂತು ಅಂತ ಬಡಾಯಿ ಕೊಚ್ಚಿದರೆ ಅದು ವಾಸ್ತವ ಅನ್ನಿಸಿಕೊಳ್ಳುವುದಿಲ್ಲ. ನನ್ನ ಸಿನಿಮಾ ಅಂತ ಇಲ್ಲಸಲ್ಲದ ಗಿಮಿಕ್ ಮಾಡುವುದು ನನಗಿಷ್ಟವಿಲ್ಲ. ಇತ್ತೀಚೆಗೆ ಶಿವಣ್ಣನವರ ಬೇರಾವುದೇ ಚಿತ್ರ ಮಾಡದಷ್ಟು ಕಲೆಕ್ಷನ್ನಿಗೆ 'ಭಜರಂಗಿ' ಕಾರಣವಾಗಿರಬಹುದು. ಅತೀ ಹೆಚ್ಚು ಥೇಟರುಗಳಲ್ಲಿ ತೆರೆಕಂಡ ಶಿವಣ್ಣ ಚಿತ್ರವೆಂಬುದೂ ನಿಜ. 22 ಚಿತ್ರಮಂದಿರಗಳಲ್ಲಿ 50ನೇ ದಿನೋತ್ಸವ ಕಂಡ ಶಿವಣ್ಣನ ಪ್ರಥಮ ಚಿತ್ರ ಕೂಡ ಇದೇ ಆಗಬಹುದು. ಹಾಗಂತ ಕನ್ನಡದ ಬೇರೆಲ್ಲ ದಾಖಲೆಗಳನ್ನು ಮುರಿದಿದೆ ಎಂದೇನಲ್ಲ...!

ಇದು 'ಭಜರಂಗಿ' ನಿರ್ಮಾಪಕ ಮಂಜುನಾಥ್ ಹಿಂಜರಿಕೆಯಿಂದಲೇ ಆಡುವ ಮಾತುಗಳು. ಬಹುಶಃ ಎಲ್ಲಿ ಐಟಿ ರೇಡಾಗುತ್ತೋ ಎಂಬ ಭೀತಿಯಿಂದ ಈ ರೀತಿ ತಗ್ಗಿಬಗ್ಗಿಸಿದ ವರದಿಯೊಪ್ಪಿಸುತ್ತಿದ್ದಾರಾ?

ಸದ್ಯ ಗಾಂಧಿನಗರದಲ್ಲಿ 'ಭಜರಂಗಿ' ಗಳಿಕೆಯ ಮೇಲೆ ಇನ್‌ಕಮ್‌ಟ್ಯಾಕ್ಸ್ ಅಧಿಕಾರಿಗಳು ಕಣ್ಣಿಟ್ಟಿದ್ದಾರೆಂಬ ಗುಲ್ಲೆದ್ದಿರುವದಂತೂ ಸತ್ಯವೆ.

● ರಾ. ಸೋಮನಾಥ್

ನನ್ನ ಮಗನಿಗೆ ನ್ಯಾಯ ಕೊಡುವಿರಾ?

ಶ್ರೀ ವೀರೇಂದ್ರ ಹೆಗ್ಗಡೆಯವರೇ,

[illegible]ಮಸ್ಕಾರ. ಹೇಗಿದ್ದೀರಿ? ನೀವು ಚೆನ್ನಾಗಿಯೇ ಇದ್ದೀರಿ ನನ್ನ ತಿಳುವಳಿಕೆ. ಏಕೆಂದರೆ, ಆಗಿಂದಾಗ್ಗೆ ನೀವು [illegible]ಸುವ ಕೆಲವು ಪ್ರತಿಭಟನೆಗಳನ್ನು ಬಿಟ್ಟರೆ ಉಳಿದೆಲ್ಲಾ ನೆಮ್ಮದಿಯೇ. ಆದರೆ ನನಗೆ ಮಾತ್ರ ನೀವು ಈ [illegible]ನ್ನು ಕೇಳಿದರೆ ಇದೋ ಈ ಕೆಳಗಿನದೆಲ್ಲಾ ನನ್ನ [illegible]ವೇ. ಮೊದಲನೆಯದಾಗಿ, ನಾನು ನನ್ನ ಎರಡೂ [illegible]ಗಳ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದೇನೆ. ಅಪಾರ ನೋವು ಅಸಹಾಯಕತೆಯ ವಿವಿಧ ಘಟ್ಟಗಳನ್ನು ಹಾದು ಈಗ ಖಿನ್ನತೆಯೊಂದಿಗೆ ಹೋರಾಟ ನಡೆಸುವ [illegible]ಲ್ಲಿದ್ದೇನೆ. ಇದು ದೈಹಿಕವಾದ ನನ್ನ ಪರಿಸ್ಥಿತಿಯಾದರೆ ಮಾನಸಿಕ ನೋವು, ಯಾತನೆ ಹಾಗೂ ಅತೀವ [illegible]ಕ್ಕೆ ನೀವು ಕಾರಣಕರ್ತರಾಗಿದ್ದೀರಿ ಎಂಬ ಅಂಶವನ್ನು [illegible] ಗಮನಕ್ಕೆ ತರಲು ಇಚ್ಛಿಸುತ್ತೇನೆ.

[illegible]ಸರಿನಿಂದ ಮಾತ್ರ ಪರಿಚಿತಳಾಗಿದ್ದ ನನ್ನನ್ನು ನೀವು [illegible]ಸ್ಥಳದಲ್ಲಿ ನಡೆದ ಸರ್ವಧರ್ಮ ಸಮ್ಮೇಳನಕ್ಕೆ ಬಹುಶಃ [illegible]ನಲ್ಲಿ ಆಹ್ವಾನಿಸಿದಿರಿ. ನಿಮ್ಮ ಕಾರ್ಯಕ್ರಮದಲ್ಲಿ ನಾನು [illegible]ಹಿಸಿದೆ. ನಂತರ ನಿಮ್ಮೊಂದಿಗೆ ನನಗೆ ಯಾವ [illegible]ವೂ ಇರಲಿಲ್ಲ. ಆದರೆ, ನಮ್ಮ ಮಗ ತಾಹಿರ್ [illegible]ಕ್ ಹಾಸನದಲ್ಲಿ ಇಂಜಿನಿಯರಿಂಗ್ ವಿದ್ಯಾಭ್ಯಾಸವನ್ನು [illegible] ಮ್ಯಾನೇಜ್‌ಮೆಂಟ್ ಡಿಗ್ರಿಯನ್ನು ಪಡೆಯಲು [illegible]ತ್ನ ಆರಂಭಿಸಿದಾಗಲೇ ನನಗೆ ಸವಾಲುಗಳು [illegible]ವಾಗಿದ್ದು ಹಾಗೂ ಜಾತ್ಯತೀತ ನಿಲುವಿನ ಮುಸ್ಲಿಮ್ [illegible]ಬಕ್ಕೆ ಜಗತ್ತು ಎಷ್ಟೊಂದು ಸಂಕೀರ್ಣ ಎಂದು [illegible]ಗಿದ್ದು.

[illegible]ಹಿರ್‌ಗೆ ತನ್ನಿಷ್ಟದ ಆಯ್ಕೆಗಳಿರಲಿಲ್ಲ; ಆದರೆ ಅವನ [illegible]ಯ ಎಲ್ಲಾ ಭಯ ಮತ್ತು ಆತಂಕಗಳನ್ನು ಅವನು [illegible]ಗೆ ತೆಗೆದುಕೊಳ್ಳಬೇಕಿತ್ತು. ಆಸ್ಟ್ರೇಲಿಯಾದಲ್ಲಿ ಉನ್ನತ [illegible]ಗವೆಂದರೆ ಜನಾಂಗ ದ್ವೇಷದ ಹಲ್ಲೆಗಳ ಭಯ! [illegible]ಕಾ-ಬ್ರಿಟನ್ ಎಂದರೆ ಮುಸ್ಲಿಮರ ದ್ವೇಷ [illegible]ಟೆಯಾದಲ್ಲಿ ಅಲ್ಲಿ ಯಾರಾದರೂ ಅವನ ಮನದಲ್ಲಿ [illegible]ತ್ಪಾದನೆಯ ವಿಷ ಬೀಜವನ್ನು [illegible]ರು ಎಂಬ ಕಳವಳ... ಹೀಗಾಗಿ [illegible] ಸುರಿದೂ ಮನೆಯಲ್ಲಿ-ಮನ [illegible]ಸಾಕಷ್ಟು ಸೂಕ್ಷ್ಮ ಸನ್ನಿವೇಶಗಳು [illegible]ಸಿ ಜಗಳ ಪಗಳ ಎಲ್ಲಾ ನಡೆದು [illegible]ೂ ಆಯ್ಕೆ ಮಾಡಿದ್ದು ತಮ್ಮ [illegible]ನದ ಮೈಸೂರಿನ ಮ್ಯಾನೇಜ್ [illegible] ಕಾಲೇಜನ್ನು. ಅಲ್ಲಿ ನೀಡುವ [illegible]ಸ್ಟ್‌ಗ್ರಾಜುಯೇಟ್ ಡಿಪ್ಲೊಮಾ [illegible] ಮ್ಯಾನೇಜ್‌ಮೆಂಟ್ ಪದವಿಯ [illegible] ವರ್ಷದ ವ್ಯಾಸಂಗಕ್ಕೆ ಫೀ ಎಂಟು [illegible] ನಲವತ್ತು ಸಾವಿರ ರೂಪಾಯಿ [illegible]ಬ್ಯಾಂಕುಗಳ ಕದ ತಟ್ಟಿದಾಯಿತು. [illegible]ೊಂದಿಷ್ಟು ಸಾಲ ಕೊಟ್ಟರು. [illegible]ದನ್ನು ನಾವೇ ಹೊಂಚಿದೆವು. ಮೊದಲನೇ ವರ್ಷ [illegible] ಲಕ್ಷ ಚಿಲ್ಲರೆ ಹಣವನ್ನು ಪಾವತಿ ಮಾಡಿದ್ದಾಯಿತು. [illegible]ನೇ ವರ್ಷದ ಹಣದ ಪೈಕಿ ಒಂದು ಲಕ್ಷದ ಇಪ್ಪತ್ತು [illegible] ರೂಪಾಯಿ ಹಣ ಮಾತ್ರ ಬಾಕಿ ಇತ್ತು. ಉಳಿದ [illegible]ಲ್ಲಾ ಪಾವತಿಯಾಗಿತ್ತು. ಸದ್ಯ ಪಕ್ಕದ ಮೈಸೂರಿನಲ್ಲಿಯೇ [illegible]ಲ್ಲ ಎಂದು ನಾನೊಂತರ ನಿರಾಳವಾಗಿ ಇದ್ದೆ.

ಈಗ ಅವನದು ಅಂತಿಮ ವರ್ಷ. 22-1-2014 [illegible] ಅವನ ಅಂತಿಮ ವರ್ಷದ ಕೊನೆಯ ಪರೀಕ್ಷೆಯನ್ನು [illegible] ಬರೆಯಬೇಕಾಗಿತ್ತು. ಈ ನಡುವೆ ನನ್ನ ಆರೋಗ್ಯ [illegible]ಯೂ ತೀವ್ರವಾಗಿತ್ತು. ಕಳೆದ ಸುಮಾರು ಹತ್ತು [illegible]ಗಳಿಂದ ನನ್ನನ್ನು ತೀವ್ರವಾಗಿ ಬಾಧಿಸುತ್ತಿದ್ದ ಮಂಡಿ [illegible] ಯಾವುದೇ ಆಯುರ್ವೇದ, ಹೋಮಿಯೋಪತಿ, [illegible]ನಾವಿ, ಅಲೋಪತಿ ಚಿಕಿತ್ಸೆಗೂ ಬಗ್ಗದೆ ನೀ[illegible]ಮೆಂಟ್ ಒಂದೇ ದಾರಿ ಎಂದು ಎಲ್ಲಾ ವೈದ್ಯರ [illegible]ರಲಿನ ಅಭಿಪ್ರಾಯ ಮೂಡಿದಾಗ ಡಿಸೆಂಬರ್ [illegible]ಯ ವಾರದಲ್ಲಿ ನಾನು ಬೆಂಗಳೂರಿನ ಆಸ್ಪತ್ರೆಯಲ್ಲಿ [illegible]ಕಿತ್ಸೆಗೊಳಗಾದೆ. 2014ರ ಹೊಸ ವರ್ಷವು ನನಗೆ [illegible]ವಾದದ್ದು ಫೋರ್ಟಿಸ್ ಆಸ್ಪತ್ರೆಯಲ್ಲಿ ನಗುಮುಖದ [illegible]ಚಂದ್ರಶೇಖರ್‌ರವರ ಶುಭಾಶಯದ ಮೂಲಕ. ಒಂದು [illegible] ಕಾಲ ನನ್ನೊಡನೆ ಆಸ್ಪತ್ರೆಯಲ್ಲಿದ್ದು, ನನಗೆ ರಕ್ತ [illegible] ನನ್ನನ್ನು ಮಗುವಿನಂತೆ ಆರೈಕೆ ಮಾಡಿದ ತಾಹಿರ್, [illegible] ಮಗಳು ಆಯಿಶಾಳ ಮನೆಯಲ್ಲಿ ಬಿಟ್ಟುಹೋಗುವಾಗ [illegible]ಗ್ಗೆ ಹೇಳಿದ ಎಂದು ನನ್ನ ನೆನಪು. ಆದರೆ ಅವನೂ ಒತ್ತಿ ಹೇಳಲಿಲ್ಲ. ನನ್ನ ಪರಿಸ್ಥಿತಿಯನ್ನು ನೋಡಿ [illegible] ಹೇಳುವುದು ಎಂದು ಅವನಿಗೂ ಆತಂಕವಾಗಿರಬೇಕು. [illegible] ನೋಡುವುದಾದಲ್ಲಿ ಲಕ್ಷಾಂತರ ರೂಪಾಯಿಗಳ [illegible] ಬಾಬ್ತು ಆದ ಶಸ್ತ್ರ ಚಿಕಿತ್ಸೆಯು ನಮ್ಮ ಕುಟುಂಬಕ್ಕೆ [illegible]ವಾಗಿ ಬಂದು ಎರಗಿತ್ತು. ಯಾವುದೇ ಆರೋಗ್ಯ [illegible]ಯ ರಕ್ಷಣೆಯೂ ನಮಗಿರಲಿಲ್ಲ. ನನ್ನ ನೋವು ಮತ್ತು [illegible]ಷಧಿಗಳ ಗುಂಗಿನಲ್ಲಿ ಸಿಕ್ಕಿ ಬಿದ್ದ ನನಗೆ ತಾಹಿರ್‌ನ [illegible]ಗ್ಗೆಯೂ ಚಿಂತಿಸ್ಸ ಮಾಡಬೇಕೆಂಬ ತುರ್ತು ಉಳಿಯ



ಮೈಸೂರಿನಲ್ಲಿರುವ ಎಸ್‌ಡಿಎಮ್ ಕಾಲೇಜು

22-1-2014ರಂದು ಅವನು ತನ್ನ ಪರೀಕ್ಷೆಗೆಂದು ಕಾಲೇಜಿಗೆ ಹೋದ. 21-1-2014ರ ಸಂಜೆ 6-15ಕ್ಕೆ ಆ ಸಂಸ್ಥೆಯ ನಿರ್ದೇಶಕರಾದ ಎಸ್.ಆರ್.ಪರಶುರಾಮನ್ ಅವರು ತಾಹಿರ್‌ಗೆ ಇ ಮೇಲ್ ಮೂಲಕ ಸಂದೇಶವನ್ನು ಕಳುಹಿಸಿ, ಆತನು ಫೀಯನ್ನು ಪಾವತಿ ಮಾಡದೆ ಇರುವುದರಿಂದ ಅವನು ಪರೀಕ್ಷೆಗೆ ಹಾಜರಾಗಲು ಅನರ್ಹಗೊಂಡಿರುವುದಾಗಿ ತಿಳಿಸಿದ್ದಾರೆ. ತಾಹಿರ್ ತನ್ನ ತಂದೆಗೆ ಈ ವಿಷಯವನ್ನು ತಿಳಿಸಿದ್ದರ ಮೇರೆಗೆ ಅವರು ಹಣವನ್ನು ಹೊಂದಿಸಿ ಬ್ಯಾಂಕ್ ತೆರೆದ ಕೂಡಲೇ ಪಾವತಿಸಲು ಸಿದ್ಧರಾಗಿದ್ದರು. ಆದರೆ ಪರೀಕ್ಷೆಯು ಹತ್ತು ಗಂಟೆಗೆ ನಿಗದಿಯಾಗಿದ್ದರಿಂದ, ಪರೀಕ್ಷೆಗೆ ಹೋಗದಂತೆ ಅವನನ್ನು ತಡೆಯಲಾಯಿತು. ಅವನ ಜೊತೆಯಲ್ಲಿ ಇನ್ನೂ ಆರು ಮಂದಿ ವಿದ್ಯಾರ್ಥಿಗಳಿಗೂ ಪರೀಕ್ಷೆಯನ್ನು ನಿರಾಕರಿಸಲಾಯಿತು. ಫೀ ಪಾವತಿಯ ಬಗ್ಗೆ ಅರ್ಧಗಂಟೆಯ ಕಾಲಾವಕಾಶವನ್ನು ಕೋರಿ ಪರೀಕ್ಷೆ ಬರೆಯಲು ಅನುಮತಿಯನ್ನು ಕೋರುವ ಅವನ ಪ್ರಯತ್ನವೆಲ್ಲವೂ ನಿಷ್ಫಲವಾಯಿತು. ಏಕೆಂದರೆ, ಆ ಬಗ್ಗೆ ನಿರ್ಣಯ ಕೈಗೊಳ್ಳುವ ಅಧಿಕಾರ ತಮಗೆ ಬಿಟ್ಟರೆ ಯಾರಿಗೂ ಇಲ್ಲ ಎಂದು ಅಲ್ಲಿದ್ದ ಸಿಬ್ಬಂದಿ ಮೌನವಾದರು. ಆ ಬಗ್ಗೆ ತೀರ್ಮಾನವನ್ನು ಕೈಗೊಳ್ಳಲು ಅಧಿಕಾರ ಇದ್ದ ನಿರ್ದೇಶಕರಾದ ಪರಶು ರಾಮನ್ ಮಾತ್ರ ಯಾರ ಮೊಬೈಲ್ ಕರೆಯನ್ನು ಕೂಡ ಸ್ವೀಕರಿಸುತ್ತಿರಲಿಲ್ಲ.




ನೀತು ಗಣಪತಿ

ಆ ಸಂದರ್ಭದಲ್ಲಿ ಅತ್ಯಂತ ತೀವ್ರ ರೀತಿಯಲ್ಲಿ ಕ್ಷೋಭೆಗೊಳಗಾಗಿದ್ದ ತಾಹಿರ್ ನನಗೆ ಫೋನ್ ಮಾಡಿದ. "ನನ್ನ ಎಲ್ಲ ತಾಳ್ಮೆಯನ್ನು ದುರುಪಯೋಗಪಡಿಸಿಕೊಂಡ ಕಾಲೇಜ್ ಮ್ಯಾನೇಜ್‌ಮೆಂಟಿನವರು ನನ್ನ ಭವಿಷ್ಯವನ್ನು ಹಾಳು ಮಾಡಿದರು. ಇನ್ನು ನಾನು ಇದ್ದರೂ ಒಂದೇ ಸತ್ತರೂ ಒಂದೇ. ನಾನು ಸಾಯೋಕೆ ಮುಂಚೆ ಮ್ಯಾನೇಜ್‌ಮೆಂಟಿನವರನ್ನು, ನಾಲ್ಕೈದು ಜನರನ್ನು ಒಟ್ಟಿಗೆ ತೆಗೆದುಕೊಂಡು ಸಾಯ್ತೀನಿ" ಎಂದ ತಾಹಿರ್.

ವೀರೇಂದ್ರ ಹೆಗ್ಗಡೆಯವರೇ ದಯವಿಟ್ಟು... ದಯವಿಟ್ಟು ಈ ಸ್ಥಿತಿಗೆ ಬಂದು ನೀವು ನನ್ನ ಸ್ಥಾನದಲ್ಲಿ ನಿಂತು ಆಲೋಚನೆ ಮಾಡಿ. ನಿಮ್ಮ ಸಂತತಿ ಏನಾಗಬಾರದು ಎಂದು ಇಡೀ ನಿಮ್ಮ ಬದುಕನ್ನು ಅರ್ಪಿಸುತ್ತೀರೋ ನಿಮ್ಮ ಯಾವುದೇ ತಪ್ಪಿಲ್ಲದೆ ಅಂತಹ ದುಃಸ್ಥಿತಿ ಎದುರಾದಲ್ಲಿ ನೀವು ಏನು ಮಾಡುತ್ತೀರಿ? ನಾನು ನಿಮ್ಮ ಸಂಸ್ಥೆಗೆ ಎಂಟು ಲಕ್ಷದ ನಲವತ್ತು ಸಾವಿರ ರೂಪಾಯಿಗಳನ್ನು ನೀಡಿ ನನ್ನ ಮಗನನ್ನು ಹೆಚ್ಚಿನ ವಿದ್ಯಾರ್ಹತೆ ಗಳಿಸಲು ಕಳಿಸಿರುವೆನೋ ಅಥವಾ ಅಷ್ಟು ಹಣವನ್ನು ತೆತ್ತು ಕೊಲೆಗಡುಕನನ್ನಾಗಿ, ಆತ್ಮಹತ್ಯೆ ಮಾಡಿಕೊಳ್ಳುವ ಸಲುವಾಗಿ ಕಳಿಸಿದ್ದೆನೋ? ಇದು ನಿಮ್ಮ ಸಂಸ್ಥೆಯು ನಡೆಸುತ್ತಿರುವ ಬ್ಲಾಕ್ ಮೇಲಿಂಗ್‌ನ ಒಂದು ಸ್ಯಾಂಪಲ್ ಅಷ್ಟೇ! ಈ ರೀತಿಯ ಫೀ ವಸೂಲಾತಿಗಾಗಿ ಕಾನೂನಿನ ಮಾನ್ಯತೆ ಇದೆಯೋ? ನೀವು ಪ್ರಜಾಪ್ರಭುತ್ವ ದೇಶದ ಕಾನೂನುಗಳ ಅಡಿಯಲ್ಲಿ ನಿಮ್ಮ ಸಂಸ್ಥೆಯನ್ನು ನಡೆಸುತ್ತಿದ್ದೀರೋ ಅಥವಾ ನಿಮ್ಮದೇ ಸಂಸ್ಥಾನ ನಿಮ್ಮದೇ ಕಾನೂನು ಏನಾದರೂ ಇದೆಯೋ? ಕಾನೂನಿಗೆ ವಿರೋಧವಾದ ನಿಮ್ಮ ಸಂಸ್ಥೆಯ ನಿರ್ದೇಶಕರ ಈ ದುರ್ವರ್ತನೆಯನ್ನು ನೀವು ಸಮರ್ಥಿಸಿಕೊಳ್ಳುವಿರೋ? ಅಥವಾ ನಿಮ್ಮ ಡಿಗ್ರಿ ಬೇಡ ನನಗೆ ನನ್ನ ಎಂಟು ಲಕ್ಷದ ನಲವತ್ತು ಸಾವಿರ ರೂ.ಗಳನ್ನು ನನಗೆ ಮರಳಿಸಿ ಎಂದರೆ ಏನು ಹೇಳುವಿರಿ? ವಿದ್ಯೆಯ ವ್ಯಾಪಾರದ ಇಂತಹ ನಿರ್ದಯ, ನಿಷ್ಕರುಣ ಮೌಲ್ಯಗಳನ್ನು ಅರಗಿಸಿಕೊಳ್ಳಲು ನಮ್ಮ ಮಕ್ಕಳನ್ನು ನಿಮ್ಮ ಸಂಸ್ಥೆಗೆ ಕಳುಹಿಸಬೇಕೇ? ನಿಮ್ಮ ಸಂಸ್ಥೆಯಿಂದ ಯಾವ ಮೌಲ್ಯಗಳನ್ನು ಕಲಿತು ನಮ್ಮ ಮಕ್ಕಳು ಎಂತಹ ರಾಕ್ಷಸರಾಗಿ ಹೊರಹೊಮ್ಮಬಹುದು?

ತಾಹಿರ್‌ನ ಬಗ್ಗೆ ನೀವು ಹಾಸನದಲ್ಲಿ ಯಾರ ಬಳಿ ಬೇಕಾದರೂ ವಿಚಾರಣೆ ಮಾಡಿ. ಅವನಂತಹ ಒಬ್ಬ ಮಗ ನಮಗೆ ಹುಟ್ಟಲಿ ಎಂದು ಅಂತರ್ಯದಲ್ಲಿ ಜನ ಕೋರುತ್ತಾರೆ. ಅಂತಹ ಉತ್ತಮ ಗುಣಗಳ ಉದಾತ್ತ ಯುವಕ ನಿಮ್ಮ ಸಂಸ್ಥೆಗೆ ಸೇರಿದ ಮೇಲೆ 'ಸಾಯುವ - ಸಾಯಿಸುವ' ಮಾತನಾಡುತ್ತಾನೆ ಅಂದರೆ ಅಲ್ಲಿ ಎಂತಹ ಮೌಲ್ಯಯುತ ಶಿಕ್ಷಣ ದೊರಕಿರಬೇಕು? ಇಂತಹ ವ್ಯವಸ್ಥೆಯನ್ನು ಹುಟ್ಟು ಹಾಕಿರುವ ನಿಮಗೆ ಒಂದಿಷ್ಟಾದರೂ ಸಾಮಾಜಿಕ ಕಾಳಜಿ ಇದ್ದರೆ, ಅಲ್ಲಿಗೆ ಬರುವ ಯುವಕರನ್ನು ಮಾನವರನ್ನಾಗಿಸುವಂತಹ ವ್ಯವಸ್ಥೆಯನ್ನು ರೂಪಿಸುತ್ತೀರಿ. "ಅದು ನಮ್ಮ ಕೆಲಸವಲ್ಲ; ನಾವು ನಿಷ್ಠುರ ಬಡ್ಡಿಕೋರ ಮನಃಸ್ಥಿತಿಯನ್ನು ನಿರ್ಮಾಣ ಮಾಡುತ್ತೇವೆ" ಎಂದರೆ... ಅದರ ಪರಿಣಾಮವು ಕೂಡ ನಿಮಗೇ ತಟ್ಟುವುದು.


ತಾಹಿರ್‌ನ ಮಾತುಗಳನ್ನು ಕೇಳಿದಕೂಡಲೇ ನಾನು ನನ್ನ ಮಂಚದಿಂದ ಕೆಳಗೆ ಬೀಳಲಿಲ್ಲ... ನನ್ನ ಪುಣ್ಯ. ನಿಮಗೆ ಫೋನ್ ಮಾಡಬೇಕೆಂದು ನೋಡಿದರೆ ನಿಮ್ಮ ನಂಬರಿಲ್ಲ. ಮಂಗಳೂರಿನ ಶೆಹನಾಜ್‌ಗೆ ಫೋನ್ ಮಾಡಿದೆ. ಅವರೂ ಕೂಡ ನಿಮ್ಮ ನಂಬರಿಲ್ಲವೆಂದು ಕೈಚೆಲ್ಲಿದರು. ಕೊನೆಗೆ ನಿಮ್ಮ ಸಂಸ್ಥೆಯ ದೀಪಕ್ ಚಂದ್ರ ಅವರಿಗೆ ಫೋನ್ ಮಾಡಿದೆ. ಅವರು ಪಾಪ! ತಾವು ಪ್ಲೇಸ್‌ಮೆಂಟ್ ಆಫೀಸರ್ ಎಂತಲೂ, ತಮಗೆ ಯಾವ ಅಧಿಕಾರವೂ ಇಲ್ಲವೆಂತಲೂ ನಿರ್ವಿಕಾರ ಧ್ವನಿಯಲ್ಲಿ ತಿಳಿಸುತ್ತಾ, ನೀತು ಗಣಪತಿ ಎಂಬುವವರಿಗೆ ಅಧಿಕಾರವಿದೆ ಎಂತಲೂ, ಅವರನ್ನು ಸಂಪರ್ಕಿಸಬೇಕೆಂತಲೂ ಒಂದು ಸಂಖ್ಯೆಯನ್ನು ನೀಡಿದರು. ಆ ಮಹಾತಾಯಿಯನ್ನು ಕೇಳಿಕೊಂಡೆ. "ಕೇವಲ ಅರ್ಧ ಗಂಟೆ ಕಾಲಾವಕಾಶ ಕೊಡಿ. ಅವನಿಗೆ ಪರೀಕ್ಷೆ ಬರೆಯುವ ಅವಕಾಶ ಕೊಡಿ" ಎಂದು. ಆಕೆ ತಮ್ಮ ನಿರ್ದೇಶಕರಾದ ಪರಶುರಾಮನ್ ಅವರನ್ನು ಸಂಪರ್ಕಿಸಬೇಕೆಂದು ಆ ಸಂಖ್ಯೆಯನ್ನು ನೀಡಿದರು. ಆ ಸಂಖ್ಯೆ ಯಾವ ಕರೆಗಳನ್ನೂ ಸ್ವೀಕರಿಸುವುದಿಲ್ಲ. ಏನು ಮಾಡಬೇಕು ಹೆಗ್ಗಡೆಯವರೇ? ನಾನು ಫೋನ್ ಮಾಡಿದ ಸುಮಾರು ಒಂದು ಗಂಟೆಯ ನಂತರ ಸದರಿ ಮಹಾನುಭಾವರು "ಯಾರಿದು? ಮಿಸ್ಡ್ ಕಾಲಿದೆ... ನಾನು ಡೆಲ್ಲಿಯಲ್ಲಿದ್ದೇನೆ" ಎಂದು ಮಾತನಾಡುವ ಕೃಪೆಯನ್ನು ತೋರಿದರು. ನಾನು ವಿಷಯವನ್ನು ಅವರಿಗೆ ತಿಳಿಸಿದ ನಂತರ "ಏನೂ ಮಾಡೋಕಾಗಲ್ಲ, ರೂಲ್ಸ್ ಈಸ್ ರೂಲ್ಸ್" ಎಂದು ಫೋನಿಟ್ಟರು. ಯಾವ ರೂಲ್ಸ್? ಯಾವ ರೂಲ್ಸ್?



ಪರಶುರಾಮನ್


ಕೊನೆಗೆ ನನ್ನ ಮಗನನ್ನು ಫೋನಿನಲ್ಲಿಯೇ ಎದೆಗವಚಿ ಅವನಿಗೆ ಧೈರ್ಯ ತುಂಬುತ್ತಾ ಮೈಸೂರಿನ ನನ್ನ ಬಂಧುಗಳನ್ನು ಅವನ ಬಳಿ ಅಟ್ಟಿದೆ. ಹಾಸನದಿಂದ ಹಣದೊಂದಿಗೆ ಒಬ್ಬರನ್ನು ಕಳುಹಿಸಿ ಮಧ್ಯದಲ್ಲಿ ಅಭಿರುಚಿ ಗಣೇಶ್‌ಗೆ ಫೋನ್ ಮಾಡಿದೆ. ನನ್ನ ಮಗನ ಮನಃಸ್ಥಿತಿಯ ಬಗ್ಗೆ ಕೇಳಿದೊಡನೆಯೇ ಗಾಬರಿಗೊಂಡ ಗಣೇಶ್ ಕೂಡಲೇ ದೇವನೂರು ಮಹದೇವ ಅವರನ್ನು ಸಂಪರ್ಕಿಸಿದರು. ದೇವನೂರರು ನಿರ್ದೇಶಕರಾದ ಪರಶುರಾಮ್ ಅವರನ್ನು ಸಂಪರ್ಕಿಸಿದರೂ ಪ್ರಯೋಜನವಾಗಲಿಲ್ಲ. ಅವರು ಕೂಡಲೇ ತಮ್ಮ ಸ್ನೇಹಿತರನ್ನು ಸಂಪರ್ಕ ಮಾಡಿ ಫೀಗೆ ಸಂಬಂಧಪಟ್ಟ ಒಂದು ಲಕ್ಷದ ಇಪ್ಪತ್ತು ಸಾವಿರ ರೂ.ಗಳನ್ನು ಕಾಲೇಜಿಗೆ ಕಳುಹಿಸುವ ವ್ಯವಸ್ಥೆ ಮಾಡಿದರು. [illegible] ಕಳುಹಿಸಿದ ಹಣವು ಕಾಲೇಜಿಗೆ ಸೇರ್ಪಡೆಯಾಯಿತು. ದೇವನೂರು ಮತ್ತು ಅಭಿರುಚಿ ಗಣೇಶ್‌ಗೆ ಆಭಾರ ವಂದನೆಗಳನ್ನು ನಾನು ಸಲ್ಲಿಸಿದೆ. ಆದರೂ ತಾಹಿರ್‌ಗೆ ಪರೀಕ್ಷೆ ತಪ್ಪಿತು. ನಿಮ್ಮ ಸಂಸ್ಥೆಯವರು ಬಡ್ಡಿ ದಂಧೆಕೋರರಂತೆ ನನ್ನ ಮಗನ ಭವಿಷ್ಯವನ್ನು ಅಡವಿಟ್ಟುಕೊಂಡು ಹಣವನ್ನು ವಸೂಲಿ ಮಾಡಿದರು. ಇಷ್ಟೆಲ್ಲವನ್ನೂ... ನಾನು ಅಸಹಾಯಕಳಾಗಿ ಮಂಚದ ಮೇಲೆ ಬಿದ್ದುಕೊಂಡು ನಿರ್ವಹಿಸಿದೆ ಸರ್.

ತಮ್ಮ ಕೃಪೆಯಿಂದ ಅವನಿಗೆ ಪರೀಕ್ಷೆ ತಪ್ಪಿತು... ನನಗೆ ಅದರ ಚಿಂತೆ ಸ್ವಲ್ಪ ಇದೆ. ಆದರೆ, ಅವನು ನಿಮ್ಮ ಸಂಸ್ಥೆಯ ಅತ್ಯಂತ ಅಮಾನವೀಯವಾದ ಪ್ರಚೋದನೆಗೊಳಗಾಗಿಯೂ ತನ್ನ ಮಾನಸಿಕ ಸಂತುಲತೆಯನ್ನು ಕಾಪಾಡಿಕೊಂಡನಲ್ಲಾ, ಅದು ಅತ್ಯಂತ ನೆಮ್ಮದಿಯನ್ನು ಕೊಡುವ ಪ್ರಸಂಗ. ಕ್ಷಣಕಾಲದ ಮಾನಸಿಕ ಅಸ್ಥಿರತೆಯನ್ನು ಬದಿಗೊತ್ತಿ ಮತ್ತೆ ತನ್ನ ಎಂದಿನ ವಿವೇಕಶಾಲಿ ವ್ಯಕ್ತಿತ್ವವನ್ನು ಮರುಸ್ಥಾಪನೆ ಮಾಡಿಕೊಂಡು ಬದುಕಿನ ಸತ್ವಪರೀಕ್ಷೆಯಲ್ಲಿ ಉತ್ತೀರ್ಣನಾದುದು ನಿಮ್ಮ ಎಂಟು ಲಕ್ಷ ನಲವತ್ತು ಸಾವಿರದ ಪರೀಕ್ಷೆಗಿಂತಲೂ ಅಮೂಲ್ಯವಾದುದು. ನಾನು ಹಣವನ್ನು ತುಂಬಿಸಿ ಹಲ್ಲು ಗಿಂಜುತ್ತಾ... ಹೇಗಾದರೂ ತಾಹಿರ್‌ಗೆ ಡಿಗ್ರಿಯನ್ನು ಕೊಡಿ ಎಂದು ನಿಮ್ಮ ಸಂಸ್ಥೆಯ ಮರ್ಜಿಯನ್ನು ಕಾಯಬಹುದಿತ್ತು, ಆದರೆ ನನಗೆ ಬಂದಿರುವ ಈ ವೈಯಕ್ತಿಕ ಸವಾಲಿನ ಸಂದರ್ಭದಲ್ಲಿಯೂ ನನಗೆ ಸಾರ್ವತ್ರಿಕತೆಯ ಅಂಶವು ವ್ಯಕ್ತವಾಗುತ್ತಿದೆ. ಈ ಅಕ್ರಮ ವಸೂಲಾತಿಯು ತಮ್ಮ ಆದೇಶದ ಮೇರೆಗೆ ನಡೆದಿದೆಯೇ ಅಥವಾ ಸಂಸ್ಥೆಯವರು ತಾವೇ ಖುದ್ದಾಗಿ ನಡೆಸಿರುವ ಬ್ಲಾಕ್‌ಮೇಲಿಂಗ್ ತಂತ್ರವೇ... ಈ ಬಗ್ಗೆ ತಾವು ಸೂಕ್ತ ವಿಚಾರಣೆಯನ್ನು ನಡೆಸಿ ತಾವು ನನಗೆ ಸೂಕ್ತ ಮರುತ್ತರವನ್ನು ನೀಡುವುದು ಅಗತ್ಯವಾಗಿದೆ. ಹಾಗೂ ಇನ್ನು ಮುಂದೆ ತಾವು ಇಂತಹ ಅತ್ಯಂತ ಅಮಾನವೀಯ, ಹೇಯ ಮತ್ತು ಕಾನೂನಿಗೆ ವಿರೋಧವಾದ ವಸೂಲಾತಿಯ ತಂತ್ರಗಾರಿಕೆಗೆ ಕಡಿವಾಣವನ್ನು ಹಾಕುವಿರೆಂದು ಆಶಿಸುತ್ತೇನೆ. ಅಷ್ಟೇ ಅಲ್ಲದೆ, ತಾಹಿರ್ ಇನ್ನೂ ಕೂಡ ನಿಮ್ಮ ಕ್ಯಾಂಪಸ್‌ನಲ್ಲಿಯೇ ವಾಸವಾಗಿರುವುದರಿಂದ ಅವನ ಸಂಪೂರ್ಣ ಸಂರಕ್ಷಣೆಯ ಹೊಣೆ ವೈಯಕ್ತಿಕವಾಗಿ ನಿಮ್ಮ ಮೇಲೆ ಮತ್ತು ನಿಮ್ಮ ಸಂಸ್ಥೆಯ ಮೇಲೆ ಇರುತ್ತದೆ ಎಂಬ ಅಂಶವನ್ನು ನೇರವಾಗಿ ಹೇಳಲು ಇಚ್ಛಿಸುತ್ತೇನೆ. ಅವನ ಪ್ರಾಣಕ್ಕೇನಾದರೂ ಅಪಾಯವಾದರೆ, ನೀವು ಮತ್ತು ನಿಮ್ಮ ಸಂಸ್ಥೆಯವರೇ ಸಂಪೂರ್ಣ ಹೊಣೆಗಾರರು ಎಂದು ಹೇಳುತ್ತಾ, ಪರೀಕ್ಷೆಯ ಹಿಂದಿನ ದಿನ ಇಳಿಸಂಜೆಯಲ್ಲಿ ಇ-ಮೇಲನ್ನು ಕಳುಹಿಸಿ, ಬೆಳಗಾಗುವ ವೇಳೆಗೆ ದೆಹಲಿಗೆ ದೌಡಾಯಿಸಿ, ತಮ್ಮ ಹಿಂದೆ ಯಾರೂ ಕೂಡಾ ನಿರ್ಣಯ ಕೈಗೊಳ್ಳದಂತಹ ಸಂದರ್ಭವನ್ನು ನಿರ್ಮಾಣ ಮಾಡಿ, ತಮ್ಮ ದುರುದ್ದೇಶವನ್ನು ಸಾಧನೆ ಮಾಡಿಕೊಂಡ ನಿಮ್ಮ ನಿರ್ದೇಶಕರ ಬಗ್ಗೆ ನನಗೆ ಕಿಂಚಿತ್ತೂ ಗೌರವವಿಲ್ಲ. ಆ ಆಕ್ರಮಣಕಾರೀ ಕಾರ್ಯತಂತ್ರವು ಕಾರ್ಯಸಾಧುವೆಂದು ತೋರಿಸಿಕೊಟ್ಟಿರುವ ನಿಮ್ಮ ನಿರ್ದೇಶಕರಾದ ಪರಶುರಾಮನ್ ಅವರು, ನಿಮ್ಮ ಆದೇಶದ ಅನ್ವಯ ನಡೆದುಕೊಂಡಿರುವ ಸಾಧ್ಯತೆಗಳು ಇವೆ. ಅವರು ಪಲಾಯನವಾದಿ ತಂತ್ರವನ್ನು ಅನುಸರಿಸಿದ್ದಾರೆ. ಆದರೆ ನಿಮ್ಮ ಸಂಸ್ಥೆಯ ಪ್ರತಿ ನಿಮ್ಮ ಉತ್ತರದಾಯಿತ್ವವು ಕೊನೆಗೊಳ್ಳುವುದಿಲ್ಲ. ಹಣವಿಲ್ಲದವರು ಪರೀಕ್ಷೆಗೆ ಹಾಜರಾಗಲು ಅನರ್ಹರಾಗುತ್ತಾರೆಯೇ ಎಂಬ ಪ್ರಶ್ನೆಗೆ ಉತ್ತರಿಸಬೇಕಾದವರು ನೀವು. ಸಹಜ ನ್ಯಾಯ ಮತ್ತು ಸಾಮಾಜಿಕ ನ್ಯಾಯದ ಚರಮಗೀತೆಯನ್ನು ಹಾಡುತ್ತಿರುವ ನಿಮ್ಮ ಸಿಬ್ಬಂದಿಯು ಆ ಮೂಲಕ ನಿಮ್ಮ ವ್ಯಕ್ತಿತ್ವಕ್ಕೆ ಬಳಿಯುತ್ತಿರುವ ಮಸಿಯನ್ನು ನಿವಾರಿಸಿಕೊಳ್ಳಲು ಪಡಬೇಕಾದ ನಿಮ್ಮ ಶ್ರಮ ನಿಮ್ಮ ಬಹುಪಾಲು ವೇಳೆಯನ್ನು ಆಕ್ರಮಿಸಿಕೊಳ್ಳುತ್ತದೆ ಎಂಬುದೂ ಕೂಡ ನಿಮಗೆ ಗೊತ್ತಿರುವ ಸತ್ಯವೇ ಆಗಿದೆ. ಸಂಸ್ಥೆಯನ್ನು ನಡೆಸಬೇಕಾದ ಶಿಸ್ತು ಮತ್ತು ವಿದ್ಯಾರ್ಥಿಗಳ ಭವಿಷ್ಯತ್ತಿನ ನಡುವೆ ಸಮತೋಲನ ತಪ್ಪಿದಾಗ ಏನು ಬೇಕಾದರೂ ಆಗುವ ಸಾಧ್ಯತೆಗಳಿವೆ ಎಂಬುದನ್ನು ಹೇಳುತ್ತಾ ತಾಹಿರ್‌ನ ಜೊತೆಯಲ್ಲಿ ಪರೀಕ್ಷೆಯಿಂದ ಹೊರಗಟ್ಟಲಾಗಿರುವ ಆರು ಮಂದಿ ಅಂದರೆ ಒಟ್ಟು ಏಳು ಮಂದಿ ವಿದ್ಯಾರ್ಥಿಗಳ ಭವಿಷ್ಯತ್ತನ್ನು ಸರಿಪಡಿಸುವ ಗುರುತರ ಹೊಣೆಗಾರಿಕೆಯು ತಮ್ಮ ಮೇಲೆ ಇದೆ ಎಂಬುದನ್ನು ಕೂಡಾ ನೆನಪಿಸಲು ಇಚ್ಛಿಸುತ್ತೇನೆ. ಈ ಬಗ್ಗೆ ನಿಮ್ಮ ಸೂಕ್ತ ಕಾರ್ಯಕ್ಷಮತೆಯನ್ನು ಎದುರು ನೋಡುತ್ತಿರುವ



● ಬಾನು ಮುಷ್ತಾಕ್





ಗುರು ಹಾಕಿಕೊಟ್ಟ ಮಾರ್ಗದಲ್ಲಿ...

'ಜಾತಕಫಲ' ಹೇಳುವ, 'ಭವಿಷ್ಯವಾಣಿ' ನುಡಿಯುವ, 'ವಾಸ್ತು ದೋಷ' ನಿವಾರಿಸುವ, ಮಡೆಸ್ನಾನದಿಂದ ಚರ್ಮರೋಗ ನಿವಾರಣೆ ಆಗುತ್ತದೆ ಎಂದು ಹೇಳಿಕೊಳ್ಳುವ ಪಡಪೋಸಿ ಪುರೋಹಿತರಿಗೂ ಅಥವಾ ಢೋಂಗಿ ಬಾಬಾಗಳಿಗೂ ಅಥವಾ ಸೋಗಲಾಡಿ ಸ್ವಾಮೀಜಿಗಳಿಗೂ ಏನು ವ್ಯತ್ಯಾಸ?

ರಾಷ್ಟ್ರೀಯ ಸ್ವಯಂಸೇವಕ ಸಂಘದ ಘೋಷಿತ ಉದ್ದೇಶಗಳಿಗೂ, ಅದರ ನೈಜ ಉದ್ದೇಶಗಳಿಗೂ ಮತ್ತು ಅದರೊಂದಿಗೆ ಸಂಬಂಧ ಇಟ್ಟುಕೊಂಡಿರುವ ವ್ಯಕ್ತಿಗಳ ವಿವಿಧ ಸ್ವರೂಪದ, ವಿವಿಧ ರೀತಿಗಳ ಚಟುವಟಿಕೆಗಳಿಗೂ ತಾಳಮೇಳವಿಲ್ಲವೆಂದು ಕಂಡುಬರುತ್ತಿದೆ. ಭಾರತದ ಸಂಸತ್ತಿನ ನಿರ್ಣಯಗಳಿಗೆ ಮತ್ತು ಸಂವಿಧಾನದ ನಿಬಂಧನೆಗಳಿಗೆ ಸಂಪೂರ್ಣ ವಿರುದ್ಧವಾಗಿರುವ ಅದರ ನೈಜ ಉದ್ದೇಶಗಳು ರಾಷ್ಟ್ರ ವಿರೋಧಿಯೂ, ಹೆಚ್ಚಿನ ವೇಳೆ ಬುಡಮೇಲು ಗೊಳಿಸುವಂಥವೂ, ಹಿಂಸಾಪೂರಿತವೂ ಆಗಿರುವಂತಿದೆ -ಜವಹರ್‌ಲಾಲ್ ನೆಹರೂ.

ಇವತ್ತು ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಕೋಮು ಭಾವನೆಗಳನ್ನು ಕೆರಳಿಸುವ ಘಟನೆಗಳು ನಡೆಯುತ್ತಿವೆ. ವಾಸ್ತವದಲ್ಲಿ ಇವೆಲ್ಲವೂ ದೇಶದಾದ್ಯಂತ ಸಂಭವಿಸುತ್ತಿರುವ ವಿದ್ಯಮಾನಗಳ ಭಾಗವಾಗಿವೆ ಮತ್ತು ಅತ್ಯಂತ ವ್ಯವಸ್ಥಿತವಾಗಿ ಆಯೋಜಿಸಲ್ಪಡುತ್ತಿವೆ. ಬಿಜೆಪಿಯ ರಾಜಕೀಯ ಭವಿಷ್ಯ ಡೋಲಾಯಮಾನವಾಗಿರುವ ಸನ್ನಿವೇಶಗಳಲ್ಲೆಲ್ಲಾ ಇಂತಹ ವಿದ್ಯಮಾನಗಳು ನಿರೀಕ್ಷಿತವೆನ್ನುವಷ್ಟು ಸಾಮಾನ್ಯವಾಗಿಬಿಟ್ಟಿವೆ. ಕೋಮುಗಲಭೆಗಳೂ ಸೇರಿದಂತೆ ಸರಣಿಯೋಪಾದಿಯಲ್ಲಿ ಪ್ರಾರಂಭವಾಗಿರುವ ಇಂತಹ ಕೋಮು ಧ್ರುವೀಕರಣದ ಘಟನೆಗಳು ಬಿಜೆಪಿಯ ಚುನಾವಣಾ ಗೆಲುವಿನ ಸಾಧ್ಯತೆಗಳು ಕಡಮೆ ಇರುವಲ್ಲೇ ಹೆಚ್ಚಾಗಿ ಕಂಡುಬರುತ್ತಿರುವುದು ಕಾಕತಾಳೀಯವಲ್ಲ.

ಶೃಂಗೇರಿ, ಮೂಡಿಗೆರೆ, ಚಿಕ್ಕಮಗಳೂರು, ಶಂಕರಪುರ ಮೊದಲಾದ ಕಡೆ ಕೋಮುಗಲಭೆಗಳು ನಡೆದಿದ್ದು ಅವನ್ನು ಹುಟ್ಟುಹಾಕುತ್ತಿರುವವರು ಸಂಘ ಪರಿವಾರಿಗರು ಎಂಬುದು ಸಾಬೀತಾಗಿದೆ. ಮೂಡಿಗೆರೆಯ ಚೌಡೇಶ್ವರಿ ಮಂದಿರದ ಕಮಾನನ್ನು ಹಾನಿಗೀಡುಮಾಡಿದವರು ಸಂಘ ಪರಿವಾರದ ಕಾರ್ಯಕರ್ತರೆಂದು ತಿಳಿದುಬಂದಿದೆ. ಅದೇರೀತಿ ಚಿಕ್ಕಮಗಳೂರಿನಲ್ಲಿ ಮಸೀದಿಯೊಳಗೆ ಹಂದಿ ರುಂಡ ಎಸೆದವರೂ ಬಿಜೆಪಿ ಕಾರ್ಯಕರ್ತರು. ಅವರೀಗ ಪೊಲೀಸರ ಅತಿಥಿಗಳಾಗಿದ್ದಾರೆ. ಕರಾವಳಿ ಜಿಲ್ಲೆಗಳಲ್ಲಂತೂ ಅ'ನೈತಿಕ' ಪೊಲೀಸರ ಹಾವಳಿ, ಗೋಸಾಗಾಟದ ಬಗ್ಗೆ ಹುಯಿಲು, ಲವ್ ಜಿಹಾದ್ ಕುರಿತ ಆರೋಪಗಳು ತೀವ್ರ ಸ್ವರೂಪ ಪಡೆದುಕೊಳ್ಳುತ್ತಿವೆ. ಮುಂಬರುವ ಲೋಕಸಭಾ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಆರಂಭಿಸ ಲಾಗಿರುವ ಈ ಹತಾಶ ಕೃತ್ಯಗಳು ಬತ್ತಿದ ದನದ ಕೆಚ್ಚಲಿಂದ ಹಾಲು ಹಿಂಡಲೆತ್ನಿಸುವಂತಿದೆ. ಜನರಿಗೆ ಇವರ ಮೇಲಿದ್ದ ನಂಬಿಕೆಗಳು ಬತ್ತಿಹೋಗಿದ್ದರಿಂದಲೇ ಕಳೆದ ವಿಧಾನಸಭಾ ಚುನಾವಣೆಗಳಲ್ಲಿ ಮತದಾರರು ಇವರನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ನಂಬಿಕೆಗಳ ಬತ್ತುವಿಕೆಗೆ ಎರಡು ಮುಖ್ಯ ಕಾರಣಗಳಿವೆ. ಒಂದು ಇವರ ಭಯಂಕರ ಕೋಮುವಾದ. ಇನ್ನೊಂದು ಬ್ರಹ್ಮಾಂಡ ಭ್ರಷ್ಟಾಚಾರ. ಆದರೂ ಇವರು ಮತ್ತದೇ ಹಳೆ ಚಾಳಿಗಳಿಗೆ ಮರಳಿದ್ದಾರೆಂದರೆ ಇವರಿಗೆ ಯಾವುದೇ ಆತ್ಮಾವಲೋಕನ ಬೇಕಿಲ್ಲವೆಂದೇ ತಿಳಿಯ ಬೇಕಾಗುತ್ತದೆ. ಸಂಘ ಪರಿವಾರಿಗರಿಗೆ ಗುರು ಗೋಲ್ವಾಲ್ಕರ್ ಪ್ರತಿಪಾದಿಸಿದ ಚಿಂತನೆಗಳು ಹಾಗೂ ಅಂತಿಮ ಗುರಿ ಸಾಧನೆಗಳೇ ಮುಖ್ಯ. ಇತ್ತೀಚಿನ ಕೆಲವು ಘಟನೆಗಳು ಕೂಡ ಇದೇ ಮಾದರಿಯಲ್ಲಿದ್ದು ವಿಶ್ಲೇಷಣಾಯೋಗ್ಯವಾಗಿವೆ.

ಮೂಢನಂಬಿಕೆ ನಿಷೇಧ ಕಾಯ್ದೆ ಬೇಡ; ಬೆನ್ನಿಹಿನ್ ಪವಾಡಕ್ಕೆ ನಿಷೇಧ ಬೇಕು!


ಬೆನ್ನಿ ಹಿನ್‌ನಂಥವರು ಪವಾಡಗಳ ಮೂಲಕ ರೋಗಗಳನ್ನು ಗುಣಪಡಿಸುತ್ತೇವೆ ಎನ್ನುವುದು ಮೌಢ್ಯಾ ಚರಣೆಯ ಪರಮಾವಧಿ. ಕೆಲವೊಂದು ರೀತಿಯ ಮಾನಸಿಕ ಅಸ್ವಸ್ಥತೆಗಳನ್ನು ಹಿಪ್ನಾಟಿಸಂ ಮೂಲಕ ನಿಯಂತ್ರಣಕ್ಕೆ ತರಬಹುದೆನ್ನಲಾಗುತ್ತದೆ. ಆದರೆ ದೈಹಿಕ ಕಾಯಿಲೆಗಳನ್ನಲ್ಲ. ಹಾರ್ಮೋನ್ ಪವಾಡ ಪುರುಷ ಯಾವುದೇ ಕಾಯಿಲೆಗಳನ್ನು ವಾಸಿ ಮಾಡಬಲ್ಲೆ ಎನ್ನುವವರು ಅಮಾಯಕ ಜನರಿಗೆ ಪಂಗನಾಮ ಹಾಕುತ್ತಿದ್ದಾರೆ. ಇಂಥವರಿಗೂ 'ಜಾತಕಫಲ' ಹೇಳುವ, 'ಭವಿಷ್ಯವಾಣಿ' ನುಡಿಯುವ, 'ವಾಸ್ತು ದೋಷ' ನಿವಾರಿಸುವ, ಮಡೆಸ್ನಾನದಿಂದ ಚರ್ಮರೋಗ ನಿವಾರಣೆ ಆಗುತ್ತದೆ ಎಂದು ಹೇಳಿಕೊಳ್ಳುವ ಪಡಪೋಸಿ ಪುರೋಹಿತ ರಿಗೂ ಅಥವಾ ಢೋಂಗಿ ಬಾಬಾಗಳಿಗೂ ಅಥವಾ ಸೋಗಲಾಡಿ ಸ್ವಾಮೀಜಿಗಳಿಗೂ ಏನು ವ್ಯತ್ಯಾಸ?

ಸಂಘ ಪರಿವಾರ ಇಂದು ಬೆನ್ನಿಹಿನ್ ಕಾರ್ಯಕ್ರಮವನ್ನು ತೀವ್ರವಾಗಿ ವಿರೋಧಿಸುತ್ತಿದೆ. ತರ್ಕಬದ್ಧವಾಗಿ ಯೋಚಿಸಿದರೆ ಬೆನ್ನಿಹಿನ್‌ನನ್ನು ವಿರೋಧಿಸುವವರು ಕಂದಾಚಾರ ತಡೆ ಮಸೂದೆಯನ್ನು ಆದಷ್ಟು ಶೀಘ್ರದಲ್ಲಿ ಜಾರಿಗೊಳಿಸಲು ಉತ್ಸುಕರಾಗಿರಬೇಕಲ್ಲವೇ? ಇಲ್ಲ, ಬದಲಿಗೆ ಮಸೂದೆ ಬೇಡ, ಅದು ಹಿಂದೂ ಧರ್ಮ ವಿರೋಧಿ ಎಂದು ಕಿರುಚಾಡುತ್ತಿದ್ದಾರೆ! ಹಾಗಾಗಿ ಸಂಘ ಪರಿವಾರಿಗರು ಬೆನ್ನಿಹಿನ್‌ನನ್ನು ವಿರೋಧಿಸುವುದು ಆತ ಕ್ರೈಸ್ತ ಧರ್ಮೀಯ ಎಂಬ ಒಂದೇ ಕಾರಣಕ್ಕೆ ಹೊರತು ಮೌಢ್ಯಾಚಾರ ವಿರೋಧಿ ನಿಲುವಿನಿಂದ ಅಲ್ಲ ಎಂಬುದು ಸ್ಪಷ್ಟ.

ಇವರ ಇಬ್ಬಗೆಯ ನೀತಿಗೆ ಮತ್ತೊಂದು ಉದಾಹರಣೆಯೆಂದರೆ ದಿನಾ ಬೆಳಗಾದರೆ ಸಮಾಜದಲ್ಲಿ ಮೂಢನಂಬಿಕೆಯ ಬೇರುಗಳನ್ನು ಇನ್ನಷ್ಟು ಗಟ್ಟಿಗೊಳಿಸುತ್ತಿರುವ ಟಿವಿ ಕಾರ್ಯಕ್ರಮಗಳನ್ನು ವಿರೋಧಿಸದಿರುವುದು.

ಇಷ್ಯೂ ಅಲ್ಲದ್ದು ಭಾರಿ ದೊಡ್ಡ ಇಷ್ಯೂ ಆಯಿತು

ಕಳೆದ ಡಿಸೆಂಬರ್ 18ರಂದು ಮಂಗಳೂರಿನ ಹೊರವಲಯದ ದೇರಲಕಟ್ಟೆಯಲ್ಲಿ ದುಷ್ಕರ್ಮಿಗಳ ತಂಡವೊಂದು ವಿದ್ಯಾರ್ಥಿ ಜೋಡಿಯನ್ನು ಅಪಹರಿಸಿ, ವಿದ್ಯಾರ್ಥಿನಿ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಅದನ್ನು ಚಿತ್ರೀಕರಿಸಿ ಬ್ಲಾಕ್‌ಮೇಲ್ ಮಾಡಲು ಯತ್ನಿಸಿತು. ಇದೊಂದು ಶುದ್ಧ ಅಪರಾಧ ಪ್ರಕರಣವಾಗಿದ್ದು ದೂರು ದಾಖಲಾದ ಅತ್ಯಲ್ಪ ಕಾಲದೊಳಗಾಗಿ ಕಾನೂನು ಪ್ರಕ್ರಿಯೆ ಆರಂಭಗೊಂಡಿದೆ. ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ. ಆದರೆ ಆರೋಪಿಗಳು ಮುಸ್ಲಿಮರು, ಸಂತ್ರಸ್ತ ಯುವಕ ಮುಸ್ಲಿಂ, ಸಂತ್ರಸ್ತೆ ಯುವತಿ ಹಿಂದೂ ಎಂಬುದನ್ನು ಅರಿತೊಡನೆ ಸಂಘ ಪರಿವಾರದ ನಾಯಕರ ಮಿದುಳುಗಳು ಚುರುಕಾದವು. ಕಣ್ಣುಮುಚ್ಚಿ ತೆರೆಯುವುದರೊಳಗಾಗಿ ಇಡೀ ಪ್ರಕರಣಕ್ಕೆ ಧರ್ಮದ ಲೇಪ ನೀಡಲಾಯಿತು. ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಸ್ಥಳೀಯ ಶಾಸಕರು ಹಾಗೂ ಮಂತ್ರಿಗಳು ಆರೋಪಿಗಳ ಬೆಂಬಲಕ್ಕೆ ನಿಂತಿದ್ದಾರೆಂದು ಆರೋಪಿಸಲಾಯಿತು. ಸಂಘಪರಿವಾರದ ನೂರಾರು ಸಂಘಟನೆಗಳು ದಿನನಿತ್ಯವೆಂಬಂತೆ ಬೀದಿ ಹೋರಾಟ, ಪತ್ರಿಕಾಗೋಷ್ಠಿ ಇತ್ಯಾದಿಗಳನ್ನು ನಡೆಸುತ್ತಿವೆ. ಇಂತಹದೊಂದು ಅಪರಾಧ ಪ್ರಕರಣಕ್ಕೆ ಇಲ್ಲದ ಮತೀಯ ಬಣ್ಣ ಕೊಡುವುದರ ಏಕೈಕ ಉದ್ದೇಶವೇ ಇಡೀ ರಾಜ್ಯವನ್ನು ಧರ್ಮದ ನೆಲೆಯಲ್ಲಿ ಮತ್ತಷ್ಟು ಒಡೆಯುವುದು. ಇಲ್ಲಿರುವುದು ರಾಜಕೀಯ ಲೆಕ್ಕಾಚಾರ ಹೊರತು ಮಹಿಳೆಯರ ಬಗ್ಗೆ ನಿಜವಾದ ಮಾನವೀಯ ಕಳಕಳಿ ಅಲ್ಲ. ಇದನ್ನು ಸಾಬೀತುಪಡಿಸಲು ಹೆಚ್ಚು ಕಷ್ಟಪಡಬೇಕಾಗಿಲ್ಲ. ಸಯನೈಡ್ ಮೋಹನ್, ಸೌಜನ್ಯಾ, ಪದ್ಮಲತಾ ಮುಂತಾದ ನೂರಾರು ಮಹಿಳಾ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣಗಳು ನಮ್ಮ



ಮುಂದಿವೆ. ಅಲ್ಪಸಂಖ್ಯಾತರು ಮತ್ತು ಅವರ ಧರ್ಮಗಳ ಕುರಿತಂತೆ ಇವರ ಪೂರ್ವಗ್ರಹ ಮತ್ತು ದ್ವೇಷದ ಮಟ್ಟ ಎಷ್ಟಿದೆಯೆಂಬುದಕ್ಕೆ ಸಯನೈಡ್ ಹಂತಕ ಮೋಹನ್ ಪ್ರಕರಣ ಒಂದು ಅತ್ಯುತ್ತಮ ನಿದರ್ಶನ. ಮೋಹನ್ ಮಹಿಳೆಯರನ್ನು ಬುಟ್ಟಿಗೆ ಬೀಳಿಸುತ್ತ ಒಬ್ಬೊಬ್ಬರನ್ನಾಗಿ ಕೊಲೆ ಮಾಡತೊಡಗಿದ್ದ ಸಂದರ್ಭದಲ್ಲಿ ಇವರೇನು ಮಾಡಿದರು ಗೊತ್ತೇ? ಒಬ್ಬ ಸ್ವಾಮೀಜಿಯನ್ನು ಮುಂದಿಟ್ಟು ಕೊಂಡು ಬೀದಿಬೀದಿಗಳಲ್ಲಿ ಪ್ರತಿಭಟನೆ ನಡೆಸಿ ಅದೆಲ್ಲ ಮುಸ್ಲಿಮರ 'ಲವ್ ಜಿಹಾದ್' ಕೃತ್ಯಗಳೆಂದು ಗಂಟಲು ಹರಿಯುವಂತೆ ಬೊಬ್ಬಿಟ್ಟರು! ಆನಂತರ ಅಸಲಿ ಹಂತಕ ಯಾರೆಂದು ಬಯಲಾದಾಗ ಮುಸ್ಲಿಂ ಸಮುದಾಯದ ಕ್ಷಮೆ ಯಾಚಿಸುವಷ್ಟೂ ಸೌಜನ್ಯ ತೋರಲಿಲ್ಲ ಈ ಗುರು, ಶಿಷ್ಯ ಗಡಣ. ಇನ್ನು ಪಬ್ ದಾಳಿ, ಹೋಂ ಸ್ಟೇ ದಾಳಿ ಮುಂತಾದ ನೂರಾರು ಅ'ನೈತಿಕ' ಪೊಲೀಸ್‌ಗಿರಿ ಪ್ರಕರಣಗಳಲ್ಲಿ ಯುವತಿಯರ ಮೇಲೆ ಕೈಮಾಡಿ ಅವರ ಮಾನಹಾನಿ ಮಾಡುತ್ತಿರುವವರು ಮುಖ್ಯವಾಗಿ ಇದೇ ಸಂಘ ಪರಿವಾರದ ಗೂಂಡಾಪಡೆಗಳು. ಇಂತಹ ಪ್ರಕರಣಗಳ ಬಗ್ಗೆ ಸೊಲ್ಲೆತ್ತದವರು ಈಗ ದೇರಲಕಟ್ಟೆ ವಿಚಾರವನ್ನು ಎತ್ತಿಕೊಂಡು ಮಾಡುತ್ತಿರುವ ಪ್ರಹಸನ ಕಂಡಾಗ ಯಾರಿಗಾದರೂ ನಗು ಉಕ್ಕಿ ಬರಬೇಕು. ಅದಕ್ಕೇ ಬಲ್ಲವರು ಹೇಳುವುದು 'ಮತಬ್ಯಾಂಕ್ ನಿಮಿತ್ತಂ ಬಹುಕೃತ ವೇಷಂ'!

ಗೋಲ್ವಾಲ್ಕರ್ ಹಾಕಿಕೊಟ್ಟ ಮಾರ್ಗ

ಇತ್ತೀಚೆಗೆ ಗುರುಪುರದಲ್ಲಿ ಇದೇ ಸ್ವಾಮೀಜಿಯ ಉಪಸ್ಥಿತಿಯಲ್ಲಿ ನಡೆದ ಹಿಂದೂ ಸಂಗಮ ಕಾರ್ಯಕ್ರಮದಲ್ಲಿ ಕೇಳಿಬಂದ ಕೋಮು ಅವಹೇಳನಕಾರಿ ಮಾತುಗಳು ಸಂಘ ಪರಿವಾರಿಗರು ವಿವಿಧೆಡೆ ಮಾಡುತ್ತಾ ಬಂದಿರುವ ಪ್ರಚೋದನಕಾರಿ ಭಾಷಣಗಳ ಮಾದರಿಯಲ್ಲೇ ಇದೆ. ಇವೆಲ್ಲವಕ್ಕೂ ಮೂಲ ಒಂದೇ - ದ್ವೇಷದ ಗುರು ಗೋಲ್ವಾಲ್ಕರ್‌ರ ಚಿಂತನೆಗಳು. ಗೋಲ್ವಾಲ್ಕರ್ ಬರೆದ "ಬಂಚ್ ಆಫ್ ಥಾಟ್ಸ್" ಮತ್ತು "ವಿ ಆರ್ ಅವರ್ ನೇಷನ್‌ಹುಡ್ ಡಿಫೈನ್‌ಡ್" ಎಂಬ ಎರಡು ಪುಸ್ತಕಗಳು ಸಂಘ ಪರಿವಾರದ ಪಾಲಿಗೆ ಚತುರ್ವೇದಗಳಷ್ಟೇ ಪವಿತ್ರ. ತನ್ನ ಹಿಂದೂಗಳೇ ಶ್ರೇಷ್ಠ ಜನಾಂಗ; ಅನ್ಯ ಕೋಮುಗಳು ಕನಿಷ್ಠ ಎನ್ನುವ ವಾದಕ್ಕೆ ಗೋಲ್ವಾಲ್ಕರ್ ನೀಡುವ ಸಮರ್ಥನೆ ಇದು:

'ಹಿಂದೂ ಜನಾಂಗ, ಧರ್ಮ, ಸಂಸ್ಕೃತಿ ಹಾಗೂ ಭಾಷೆಗಳೇ ರಾಷ್ಟ್ರೀಯ ಎನಿಸಿವೆ. ಇದಕ್ಕೆ ಸೇರದವರೆಲ್ಲ ಸಹಜವಾಗಿ ನೈಜ 'ರಾಷ್ಟ್ರೀಯ' ಜೀವನದ ಪರಿಧಿಯಿಂದ ಹೊರಗಿರುತ್ತಾರೆ.... ವ್ಯಕ್ತಿಯೊಬ್ಬ ಹಿಂದೂ ಅಥವಾ ಮುಸ್ಲಿಂ ಅಥವಾ ಕ್ರೈಸ್ತನಾಗಿ ಜನಿಸುವುದಿಲ್ಲ, ಆತ ಹುಟ್ಟುವುದು ಓರ್ವ ಸರಳ ಮಾನವನಾಗಿ ಎಂದು ಇಂದಿನ ಕೆಲವು ಬುದ್ಧಿವಂತ ಜನ ನಮಗೆ ತಿಳಿಸುತ್ತಾರೆ. ಇತರರ ಮಟ್ಟಿಗೆ ಇದು ನಿಜವಿರಬಹುದು. ಆದರೆ ಓರ್ವ ಹಿಂದೂವೆನ್ನು ತೆಗೆದುಕೊಂಡರೆ, ಆತ ತಾಯಿಯ ಗರ್ಭದಲ್ಲಿರುವಾಗಲೇ ತನ್ನ ಪ್ರಥಮ ಸಂಸ್ಕಾರವನ್ನು ಪಡೆದುಕೊಳ್ಳುತ್ತಾನೆ. ಅಂತಿಮವಾಗಿ ಶರೀರ ಅಗ್ನಿಗಾಹುತಿಯಾಗುವಾಗ ಕೊನೆಯ ಸಂಸ್ಕಾರ ಪಡೆಯುತ್ತಾನೆ. ಹೀಗೆ ಓರ್ವ ಹಿಂದೂವನ್ನು ಹಿಂದೂವಾಗಿಸುವುದು ಹದಿನಾರು ಸಂಸ್ಕಾರಗಳು. ವಾಸ್ತವದಲ್ಲಿ ನಾವು ನಮ್ಮ ತಾಯಂದಿರ ಹೊಟ್ಟೆಯಿಂದ ಹೊರಬೀಳುವ ಮುನ್ನವೇ ಹಿಂದೂಗಳು. ಆದುದರಿಂದಲೆ ನಾವು ಹಿಂದೂಗಳಾಗಿ ಜನ್ಮ ತಾಳುತ್ತೇವೆ. ಇನ್ನು ಇತರರ ಬಗ್ಗೆ ಹೇಳುವುದಾದರೆ, ಈ ಪ್ರಪಂಚದಲ್ಲಿ ಅವರು ಸರಳ ಅಜ್ಞಾತಮಾನವರಾಗಿ ಹುಟ್ಟುತ್ತಾರೆ. ಸುನ್ನತ್ ಅಥವಾ ಶುದ್ಧಸ್ನಾನದ ಬಳಿಕ ಮುಸ್ಲಿಮರು ಅಥವಾ ಕ್ರೈಸ್ತರು ಎಂದಾಗುತ್ತಾರೆ.

ಗೋಲ್ವಾಲ್ಕರ್ ಪ್ರಕಾರ "... ಹಿಂದೂಸ್ತಾನದಲ್ಲಿರುವ ವಿದೇಶೀ ಜನಾಂಗಗಳು ಒಂದೋ ಹಿಂದೂ ಸಂಸ್ಕೃತಿಯನ್ನು ಅಳವಡಿಸಿಕೊಳ್ಳಬೇಕು, ಹಿಂದೂ ಧರ್ಮಕ್ಕೆ ಗೌರವ ಸಲ್ಲಿಸಲು ಹಾಗೂ ಅದನ್ನು ಪೂಜ್ಯಭಾವನೆಯಿಂದ ನೋಡಲು ಕಲಿಯಬೇಕು, ಹಿಂದೂ ಜನಾಂಗ ಮತ್ತು ಹಿಂದೂ ಸಂಸ್ಕೃತಿಗಳ ಅಂದರೆ ಹಿಂದೂ ರಾಷ್ಟ್ರದ ವೈಭವೀಕರಣ ಬಿಟ್ಟು ಬೇರೆ ಯಾವ ಆಲೋಚನೆಗಳನ್ನೂ ಇಟ್ಟುಕೊಳ್ಳಬಾರದು, ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಳೆದು ಕೊಂಡು ಹಿಂದೂ ಜನಾಂಗದೊಳಗೆ ಸೇರಿಕೊಳ್ಳಬೇಕು ಅಥವಾ ಹಿಂದೂ ರಾಷ್ಟ್ರಕ್ಕೆ ಸಂಪೂರ್ಣ ಅಧೀನರಾಗಿ, ಯಾವುದನ್ನೂ ಕೇಳದೆ, ಯಾವ ವಿಶೇಷಾಧಿಕಾರಗಳಿಗೂ ಅನರ್ಹರಾಗಿ, ವಿಶೇಷ ಸೌಕರ್ಯದ ಉಪಚಾರವಿಲ್ಲದೆ, ನಾಗರಿಕರ ಹಕ್ಕುಗಳು ಕೂಡ ಇಲ್ಲದೆ ದೇಶದಲ್ಲಿರಬಹುದು. ಅವರಿಗೆ ಬೇರಾವ ದಾರಿಯೂ ಇಲ್ಲ ಅಥವಾ ಕನಿಷ್ಠ ಇರಬಾರದು. ನಮ್ಮದು ಪ್ರಾಚೀನ ದೇಶ: ನಾವು ನಮ್ಮ ದೇಶದಲ್ಲಿ ಬದುಕಲು ಆಯ್ಕೆ ಮಾಡಿಕೊಂಡ ವಿದೇಶೀ ಜನಾಂಗಗಳೊಂದಿಗೆ ಪ್ರಾಚೀನ ರಾಷ್ಟ್ರಗಳು ವ್ಯವಹರಿಸ ಬೇಕಾಗಿರುವ ಮತ್ತು ವ್ಯವಹರಿಸುವ ರೀತಿಯಲ್ಲಿ ವ್ಯವಹರಿ ಸೋಣ."

"ಬಂಚ್ ಆಫ್ ಥಾಟ್ಸ್" ನ 'ಆಂತರಿಕ ಅಪಾಯಗಳು' ಎಂಬ ಅಧ್ಯಾಯ ಪೂರ್ತಿ 'ಅನ್ಯಧರ್ಮೀಯರಿಗೆ' ಮೀಸಲಾಗಿದೆ. ಅಲ್ಲಿ ಮುಸ್ಲಿಮರು ಪ್ರಥಮ ಅಪಾಯವೆಂದೂ ಕ್ರೈಸ್ತರು ದ್ವಿತೀಯ ಅಪಾಯವೆಂದೂ ಬರೆಯಲಾಗಿದೆ.


ಮುಸ್ಲಿಮರು:

"... ಪಾಕಿಸ್ತಾನ ಸೃಷ್ಟಿಯಾದ ತಕ್ಷಣ ಅವರೆಲ್ಲರೂ ದೇಶಪ್ರೇಮಿಗಳಾಗಿಬಿಟ್ಟರೆಂದು ನಂಬುವ ಭ್ರಮೆಗೊಳಗಾದರೆ ಅದು ಆತ್ಮಹತ್ಯೆಗೈದಂತಾಗುತ್ತದೆ. ತದ್ವಿರುದ್ಧವಾಗಿ, ಪಾಕಿಸ್ತಾನ ಸ್ಥಾಪನೆಯಾದ ಬಳಿಕ ಮುಸ್ಲಿಮರ ಅಪಾಯ ನೂರುಪಟ್ಟು ಹೆಚ್ಚಿದೆಯಲ್ಲದೆ ಪಾಕಿಸ್ತಾನವು ಅವರ ಭವಿಷ್ಯದ ಆಕ್ರಮಣಕಾರಿ ಉದ್ದೇಶಗಳಿಗೆ ಒಂದು ಜಿಗಿಯುವ ಫಲಕದಂತಾಗಿದೆ."

"... ದೇಶದೊಳಗೆ ಅನೇಕ ಮುಸ್ಲಿಂ ಕ್ಷೇತ್ರಗಳಿವೆ, ಅಂದರೆ ಅನೇಕ 'ಮಿನಿ ಪಾಕಿಸ್ತಾನ'ಗಳು... ಅಂದರೆ ಹೆಚ್ಚುಕಮ್ಮಿ ಪ್ರತಿಯೊಂದು ಜಾಗದಲ್ಲೂ ಪಾಕಿಸ್ತಾನದೊಂದಿಗೆ ಟ್ರಾನ್ಸ್‌ಮೀಟರ್ ಮುಖಾಂತರ ನಿರಂತರ ಸಂಪರ್ಕದಲ್ಲಿರುವ ಮುಸ್ಲಿಮರಿದ್ದಾರೆಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ..."

ನಾಡಿನಲ್ಲಿರುವ ಕ್ರೈಸ್ತ ಸಧ್ಯಹಸ್ತರ ಪಾತ್ರ ...ದರೆ ಅವರ ಉದ್ದೇಶ ನಮ್ಮ ಜೀವನದ ... ಮತ್ತು ಸಾಮಾಜಿಕ ನೆಲೆಗಳನ್ನು ನಾಶ ...ವಷ್ಟೇ ಅಲ್ಲ, ವಿವಿಧ ಕ್ಷೇತ್ರಗಳಲ್ಲಿ ಮತ್ತು ಸಾಧ್ಯ ... ದೇಶದಲ್ಲಿ ರಾಜಕೀಯ ಯಜಮಾನಿಕೆಯನ್ನು ...ವಾಗಿದೆ."

...ಲ್ವಾಲ್ಕರ್‌ರ ಈ ಪುಸ್ತಕಗಳಲ್ಲಿ ಆತ ಹಿಟ್ಲರ್‌ನ ... ರಾಷ್ಟ್ರೀಯತಾವಾದವನ್ನು ಆದರ್ಶವಾಗಿ ...ವುದನ್ನು ಗುರುತಿಸಬಹುದು. ತನ್ನ ಕಲ್ಪನೆಯ ...ಷ್ಟ್ರವನ್ನು ಹಿಟ್ಲರ್‌ನ ಸರ್ವಾಧಿಕಾರಿ, ಫ್ಯಾಸಿಸ್ಟ್ ...ಲ್ಲಿ ನಿರ್ಮಿಸಬೇಕೆಂಬುದೆ ಗೋಲ್ವಾಲ್ಕರ್‌ರ ...ಂಯಕೆಯಾಗಿದೆ. ಅಂತಹ ರಾಷ್ಟ್ರದಲ್ಲಿ ಅಲ್ಪ ... ಸ್ಥಾನಮಾನವೇನೆಂದು ಸ್ಪಷ್ಟಪಡಿಸುವ ...ರ್, ಜರ್ಮನಿ ಅಲ್ಲಿನ ಅಲ್ಪಸಂಖ್ಯಾತರ ಸಮಸ್ಯೆ ...ಗೆಹರಿಸಿದ ವಿಧಾನಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ...ರಿಂದ ಪಾಠ ಕಲಿಯಬೇಕೆಂದು ಬರೆದಿದ್ದಾರೆ. ...ಪುರಾತನ ದೇಶಗಳು ತಮ್ಮ ಅಲ್ಪಸಂಖ್ಯಾತರ



...ನ್ನು ಹೇಗೆ ಬಗೆಹರಿಸಿಕೊಳ್ಳುತ್ತವೆ ಎಂಬುದನ್ನು ...ಬಳಸಿಕೊಳ್ಳುವುದು ಪ್ರಯೋಜನಕಾರಿ. ಅವುಗಳೆಲ್ಲ ...ಜಕೀಯ ವಲಯಗಳಲ್ಲಿ ಯಾವುದೇ ಪ್ರತ್ಯೇಕ ...ಗುರುತಿಸಲು ಮುಂದಾಗುವುದಿಲ್ಲ. ಹೊರಗಿನಿಂದ ...ದವರು ಜನಸಂಖ್ಯೆಯ ಪ್ರಧಾನ ಗುಂಪಾಗಿರುವ ... ಜನಾಂಗದ ಸಂಸ್ಕೃತಿ ಹಾಗೂ ಭಾಷೆಗಳನ್ನು ...ಕೊಂಡು, ಅದರ ಹಿರಿಯಾಸೆಗಳನ್ನು ...ಡು, ತಮ್ಮ ಪ್ರತ್ಯೇಕ ಅಸ್ತಿತ್ವದ ಅಸ್ಮಿತೆಯನ್ನು ...ದೇಶೀ ಮೂಲವನ್ನು ಮರೆತು ರಾಷ್ಟ್ರೀಯ ...ಲ್ಲಿ ಸ್ವಾಭಾವಿಕವಾಗಿ ಬೆರೆತುಕೊಳ್ಳಬೇಕಿದೆ. ಅವರು ...ಮಾಡದಿದ್ದಲ್ಲಿ ರಾಷ್ಟ್ರದ ಎಲ್ಲ ನೀತಿ ನಿಯಮ ...ಸಂಹಿತೆಗಳ ಕಟ್ಟುಪಾಡಿಗೆ ಒಳಗಾಗಿ, ಅದರ ...ಯ ಕೃಪೆಯಲ್ಲಿ, ವಿಶೇಷ ಭದ್ರತೆ ಇಲ್ಲದೆ, ...ಕಾರ ಅಥವಾ ಹಕ್ಕುಗಳಿಲ್ಲದೆ ಹೊರಗಿನವರಂತೆ ...ಕಾಗುತ್ತದೆ. ವಿದೇಶೀಯರಿಗಿರುವುದು ಎರಡೇ ...ಳು, ಒಂದೋ ರಾಷ್ಟ್ರೀಯ ಜನಾಂಗದಲ್ಲಿ ತಮ್ಮನ್ನು ...ಸುವುದು ಅಥವಾ ರಾಷ್ಟ್ರೀಯ ಜನಾಂಗದ ...ದಲ್ಲಿ ಅದು ಅನುಮತಿಸುವಷ್ಟು ಕಾಲ ಇದ್ದು ...ಣ ತೊಲಗಿಹೋಗುವುದು. ಅದೊಂದೇ ಅಲ್ಪ ... ಸಮಸ್ಯೆ ಬಗೆಗಿನ ಆರೋಗ್ಯಕರ ನಿಲುವು. ... ತಾರ್ಕಿಕ ಹಾಗೂ ನೈಜ ಪರಿಹಾರ. ಕೇವಲ ...ದರಿಂದಲೆ ರಾಷ್ಟ್ರೀಯ ಜೀವನ ಆರೋಗ್ಯ ...ಕರವಾಗಿಯೂ ನಿರಾತಂಕವಾಗಿಯೂ ಇರುತ್ತದೆ. ಕೇವಲ ...ರಿಂದಲೆ ರಾಷ್ಟ್ರದೊಳಗೊಂದು ರಾಷ್ಟ್ರವಾಗುವ ... ಅಪಾಯದಿಂದ ರಾಷ್ಟ್ರ ಸುರಕ್ಷಿತವಾಗಿರುತ್ತದೆ."


...ರ್ಮನಿ ತನ್ನ ಸ್ವಂತ ಜನಾಂಗ ಹಾಗೂ ಸಂಸ್ಕೃತಿಯ ...ಯನ್ನು ಕಾಪಾಡುವುದಕ್ಕೋಸ್ಕರ ದೇಶದೊಳಗಿದ್ದ ... ಜನಾಂಗಗಳಾದ ಯಹೂದಿಗಳನ್ನು ಖಾಲಿ ಮಾಡಿ ...ತ್ತಕ್ಕೆ ಆಘಾತ ನೀಡಿತು. ಇಲ್ಲಿ ವ್ಯಕ್ತವಾಗಿರುವುದು ... ಮಟ್ಟದ ಜನಾಂಗ ಗರ್ವ. ಮೂಲಭೂತ ...ಗಳನ್ನು ಹೊಂದಿರುವ ಜನಾಂಗಗಳನ್ನೂ ಸಂಸ್ಕೃತಿ ...ಒಂದು ಏಕೀಕೃತ ಸಮಗ್ರವಾಗಿಸುವುದು ಹೆಚ್ಚುಕಮ್ಮಿ ...ನ್ನುವುದನ್ನೂ ಜರ್ಮನಿ ತೋರಿಸಿಕೊಟ್ಟಿದೆ. ...ಸ್ತಾನದಲ್ಲಿರುವ ನಮಗೆ ಇದೊಂದು ಒಳ್ಳೆಯ ಪಾಠ. ...ದನ್ನು ಕಲಿತು ಅದರ ಲಾಭ ಪಡೆದುಕೊಳ್ಳಬೇಕು."

...ಂದ್ರ ಮೋದಿಯೂ ಸೇರಿದಂತೆ ಸಂಘ ಪರಿವಾರದ ...ಮುಖಂಡರ ಭಾಷಣಗಳನ್ನು ಹಾಗೂ ಅದರ ...ಸಂಘಟನೆಗಳ (ಕು)ಕೃತ್ಯಗಳನ್ನು ಸೂಕ್ಷ್ಮವಾಗಿ ...ಸಿದಾಗ ಸಂಘ ಪರಿವಾರ ಲಾಗಾಯ್ತಿನಿಂದಲೂ ...ಗೋಲ್ವಾಲ್ಕರ್ ಹಾಕಿಕೊಟ್ಟ ಮಾರ್ಗವನ್ನು ...ಷ್ಠೆ ಅನುಸರಿಸುತ್ತಿದೆ ಮತ್ತು ಗುರುವಿನ ...ಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕಂಕಣಬದ್ಧವಾಗಿ ...ತ್ತಿದೆ ಎಂಬುದು ಸ್ಪಷ್ಟವಾಗುವುದಿಲ್ಲವೇ?

• ಸುರೇಶ್ ಭಟ್ ಬಾಕ್ರಬೈಲು

(ಆಧಾರ: The RSS and the BJP -ಎ.ಜಿ. ನೂರಾನಿ)

"ಆರೆಸ್ಸೆಸ್ ಒಂದು ರೋಗವೇ ವಿನಃ ಅದೇ ಹಿಂದೂ ಧರ್ಮವಲ್ಲ"



ಆರೆಸ್ಸೆಸ್ ಅಂತರಂಗ

ಲೇಖಕ: ಎ.ಕೆ. ಸುಬ್ಬಯ್ಯ

ಪುಟಗಳು: 112+6

ಬೆಲೆ: 80 ರೂ

ಪ್ರಕಾಶಕರು: ಲಂಕೇಶ್ ಪ್ರಕಾಶನ

ನಂ. 9, ಇ.ಎ.ಟಿ. ರಸ್ತೆ, ಬಸವನಗುಡಿ


ಬೆಂಗಳೂರು-560004

ಎ.ಕೆ. ಸುಬ್ಬಯ್ಯನವರು ಕರ್ನಾಟಕದ ಅತ್ಯಂತ ಪ್ರಾಮಾಣಿಕ ರಾಜಕಾರಣಿಗಳಲ್ಲಿ ಒಬ್ಬರು ಎಂದು ಹೇಳಿದರೆ ಏನೂ ಹೇಳಿದಂತಾಗುವುದಿಲ್ಲ. ಸಾಕಷ್ಟು ಬಾರಿ ತಾವು ಖುದ್ದು ಭ್ರಷ್ಟ ಮತ್ತು ದುಷ್ಟರಾಗಿರದಿದ್ದರೂ ಕಣ್ಣೆದುರಿಗಿನ ಅನ್ಯಾಯಗಳನ್ನು ತೆಪ್ಪಗೆ ನೋಡಿಕೊಂಡು ಪರೋಕ್ಷ ಸಮ್ಮತಿ ಒದಗಿಸುವ ನಿಷ್ಕ್ರಿಯ ನಿವೃತ್ತರನ್ನು ಇದೇ ವಿಶೇಷಣಗಳಿಂದ ಕರೆಯುವುದುಂಟು. ಆದರೆ ಸುಬ್ಬಯ್ಯನವರು ನೇರ ಮತ್ತು ನಿಷ್ಠೂರರು, ತಾವು ನಿಜ ಎಂದು ನಂಬಿಕೊಂಡ ವಿಷಯಗಳಿಗಾಗಿ ಸ್ವಾರ್ಥ ರಾಜಿಯಿಲ್ಲದೆ ಹೋರಾಡಿದವರು.

ಅದೆಲ್ಲಕ್ಕಿಂತ ಅತಿಮುಖ್ಯವಾದ ಗುಣವೆಂದರೆ ತಾವು ನಂಬಿಕೊಂಡಿದ್ದು ತಪ್ಪು ಎಂದು ಬುದ್ಧಿ ಮತ್ತು ಹೃದಯಕ್ಕೆ ಅರಿವಾದರೆ ಅತ್ಯಂತ ಪ್ರಾಂಜಲ ಮನಸ್ಸಿನಿಂದ ಅದರ ಬಗ್ಗೆ ಆತ್ಮವಿಮರ್ಶೆ ಮಾಡಿಕೊಂಡು ತಿದ್ದಿಕೊಳ್ಳುವವರು ಮಾತ್ರವಲ್ಲದೆ ಬದಲಾದ ತಮ್ಮ ನಿಲುವನ್ನು ಯಾವುದೇ ಸಂಕೋಚ ಅಥವಾ ಅಳುಕಿಲ್ಲದೆ ಪ್ರತಿಪಾದಿಸುವವರು. ಇದು ವೃತ್ತಿಪರ ರಾಜಕಾರಣದಲ್ಲಿ ಮಾತ್ರವಲ್ಲದೆ ಇತರ ಯಾವುದೇ ಕ್ಷೇತ್ರದಲ್ಲಿ ಮಾಯವಾಗುತ್ತಿರುವ ಗುಣವಾಗಿದ್ದು ಈ ಆತ್ಮ ವಿಮರ್ಶೆಯ ಗುಣದಿಂದಲೇ 'ಆರ್‌ಎಸ್‌ಎಸ್ ಅಂತರಂಗ' ಎಂಬ ಅಪರೂಪದ ಆದರೆ ಅತ್ಯಂತ ಅಗತ್ಯವಾಗಿದ್ದ ಹೊತ್ತಿಗೆ ರೂಪುಗೊಂಡಿದೆ. 1988ರಲ್ಲಿ ಇದು ಮೊದಲ ಮುದ್ರಣಗೊಂಡಿದ್ದಾಗ ಇದ್ದ ಸಂದರ್ಭಕ್ಕಿಂತ ಹಿಂದೂತ್ವವು "ಮೋದಿತ್ವ"ದ ಹಂತ ತಲುಪಿರುವ ಇಂದಿನ ಆತಂಕದ ದಿನಗಳಲ್ಲಿ ಲಂಕೇಶ್ ಪ್ರಕಾಶನ ಅದರ ನಾಲ್ಕನೇ ಮುದ್ರಣವನ್ನು ಹೊರತಂದಿರುವುದು ಅತ್ಯಂತ ಸಮಯೋಚಿತವಾಗಿದೆ.

ಹಾಗೆ ನೋಡಿದರೆ ಸುಬ್ಬಯ್ಯನವರ ಅಂತರಂಗವನ್ನು ಆರೆಸ್ಸೆಸ್ ಎಂದಿಗೂ ಪ್ರವೇಶಿಸಿಯೇ ಇರಲಿಲ್ಲ. ಸುಬ್ಬಯ್ಯನವರೂ ಆರೆಸ್ಸೆಸ್‌ನ ಅಂತರಂಗವನ್ನು ಕಂಡಿದ್ದು ಅತ್ಯಂತ ಆಕಸ್ಮಿಕವಾಗಿಯೇ. ಕಾಂಗ್ರೆಸ್‌ನ ಜಮೀನ್ದಾರಿ ರಾಜಕಾರಣಕ್ಕೆ ಪರ್ಯಾಯವನ್ನು ಹುಡುಕುತ್ತಾ ಮೊದಲು ಅವರು ಪ್ರವೇಶಿಸಿದ್ದು ಸಮಾಜವಾದಿ ಅಂತರಂಗವನ್ನು ಹೊಂದಿದ್ದ 'ಪ್ರಜಾ ಸಮಾಜವಾದಿ ಪಕ್ಷ' (ಪಿಎಸ್‌ಪಿ)ವನ್ನು. ಆದರೆ 1962ರ ಚುನಾವಣೆಯಲ್ಲಿ ಕೊಡಗಿನಲ್ಲಿ ಆ ಪಕ್ಷ ಕಣದಲ್ಲೇ ಇರದಿದ್ದರಿಂದ, ಕಾಂಗ್ರೆಸ್ ವಿರೋಧಿ ಬಣದಲ್ಲಿದ್ದ ಜನಸಂಘ ಅಥವಾ ಸ್ವತಂತ್ರ ಪಕ್ಷ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಅನಿವಾರ್ಯತೆಗೆ ಸಿಲುಕಿ ಜನಸಂಘವನ್ನು ಆಯ್ಕೆ ಮಾಡಿಕೊಂಡು ಪರೋಕ್ಷವಾಗಿ ಆರೆಸ್ಸೆಸ್ ಅಂಗಳದಲ್ಲಿ ಕಾಲಿಟ್ಟರು. ನಂತರ ಅವರನ್ನು ಇನ್ನಷ್ಟು ಒಳಗೆಳೆದುಕೊಳ್ಳುವ ಪ್ರಯತ್ನದಲ್ಲಿ ಬೆಟ್ಟಿಗಳು ಅವರನ್ನು ಆರೆಸ್ಸೆಸ್ ಶಿಬಿರಗಳಿಗೆ ಕರೆದೊಯ್ದದ್ದು. ನಿಜವಾದರೂ ಸುಬ್ಬಯ್ಯನವರು ದಾಖಲಿಸುವಂತೆ ಆರೆಸ್ಸೆಸ್ ಅಂತರಂಗದ ಪ್ರಥಮ ದರ್ಶನವೇ ಅವರಲ್ಲಿ ದಿಗ್ಭ್ರಾಂತಿ ಮತ್ತು ಜಿಗುಪ್ಸೆಯನ್ನು ಹುಟ್ಟಿಸಿಬಿಟ್ಟಿತು. ನಂತರ ಅವರು ಜನಸಂಘ ಹಾಗೂ ನಂತರದ ಬಿಜೆಪಿಯಲ್ಲಿ ಇದ್ದಷ್ಟು ದಿನಗಳು ಆರೆಸ್ಸೆಸ್ ಯಜಮಾನಿಕೆ ಮತ್ತು ಹುನ್ನಾರಗಳನ್ನು ಹತ್ತಿರದಿಂದ ನೋಡುತ್ತಾ ಅದನ್ನು ವಿರೋಧಿಸುತ್ತಲೇ ಬಂದರು. ಅಂತಿಮವಾಗಿ ಆರೆಸ್ಸೆಸ್ ಎಂಬುದು ಈ ದೇಶದ ಪ್ರಜಾತಂತ್ರ ಮತ್ತು ಐಕ್ಯತೆಗೇ ಧಕ್ಕೆ ತರುವ ವಿಷಜಂತುವಾಗಿದ್ದು ಅದರ ವಿರುದ್ಧ ಹೋರಾಡುವುದು "ಇಂದು ದೇಶದ ಸ್ವಾತಂತ್ರ್ಯಕ್ಕಿಂತಲೂ ಪ್ರಾಮುಖ್ಯವಾದದ್ದೆಂದು" ಭಾವಿಸಿ ಅದರಿಂದ ಹೊರಬಂದರು. ಮಾತ್ರವಲ್ಲದೆ ಅದರ ಅಪಾಯಗಳ ಬಗ್ಗೆ ಜನರಲ್ಲಿ ಎಚ್ಚರಿಕೆ ಮೂಡಿಸಲು ಅಂದಿನಿಂದಲೂ ಸತತವಾಗಿ ಶ್ರಮಿಸುತ್ತಿದ್ದಾರೆ. ಈ ಪುಸ್ತಕವೂ ಸಹ ಆ ರಾಜಕೀಯ ಕಾರ್ಯಕ್ರಮದ ಭಾಗ.

'ಆರೆಸ್ಸೆಸ್ ಅಂತರಂಗ'ವು, ತಮ್ಮ ನೇರ ಅನುಭವದ ಮೂಲಕ ಆರೆಸ್ಸೆಸ್‌ನ ಸಿದ್ಧಾಂತ, ಆಚರಣೆ ಮತ್ತು ಮೌಲ್ಯಗಳಲ್ಲಿರುವ ಆಷಾಢಭೂತಿತನವನ್ನು ದಾಖಲಿಸುವ ಹೊತ್ತಿಗೆಯಾಗಿರುವುದರಿಂದ ಏಕಕಾಲದಲ್ಲಿ ಅಧಿಕೃತ ಅನುಭವ ಕಥನವೂ ಮತ್ತು ನಾಡಿನ ಮುತ್ಸದ್ದಿಯೊಬ್ಬರ ಆತಂಕದ ಟಿಪ್ಪಣಿಯೂ ಆಗಿದೆ.



ಸ್ಥೂಲವಾಗಿ ಈ ಪುಸ್ತಕವನ್ನು ಆರೆಸ್ಸೆಸ್ ಸಿದ್ಧಾಂತ ಮತ್ತು ಅದರ ಆಚರಣೆ ಎಂದು ಎರಡು ಬಗೆಯ ವರ್ಗೀಕರಣ ಮಾಡಿಕೊಂಡು ಓದಬಹುದು. "ಆರೆಸ್ಸೆಸ್ ಹಿಂದೂ ಸಮಾಜದ ಕ್ಯಾನ್ಸರ್", "ಆರೆಸ್ಸೆಸ್ ಒಂದು ವಿನಾಶಕಾರಿ ಶಕ್ತಿ", "ಆರೆಸ್ಸೆಸ್ ಚಟುವಟಿಕೆ ಸಂವಿಧಾನಾತ್ಮಕವೇ", "ಗಾಂಧಿ ಹತ್ಯೆ" ಇನ್ನಿತರ ಅಧ್ಯಾಯಗಳಲ್ಲಿ ಆರೆಸ್ಸೆಸ್ ಹೇಗೆ ಈ ದೇಶದ ಸಂವಿಧಾನಕ್ಕೆ, ಪ್ರಜಾತಂತ್ರದ ಆಶಯಗಳಿಗೆ ಮತ್ತು ಹಿಂದೂ ಧರ್ಮಕ್ಕೆ ಅಪಾಯಕಾರಿಯಾಗುವ ಕ್ಯಾನ್ಸರ್ ಎಂದು ವಿವರಿಸುತ್ತಾರೆ.

ಆದರೆ ಈ ಪುಸ್ತಕದ ವಿಶೇಷತೆ ಇರುವುದು ಆರೆಸ್ಸಿಗರ ಆಚರಣೆಯಲ್ಲಿರುವ ದ್ವಂದ್ವ, ದುಷ್ಟತನ, ಸಣ್ಣ ಬುದ್ಧಿಗಳನ್ನು ತಮ್ಮದೇ ನೇರ ಅನುಭವದ ಮೂಲಕ ಬಿಚ್ಚಿಡುವ ಕಥನಗಳಲ್ಲಿ. ಇದನ್ನು ಬರೆಯುವಾಗ ಸುಬ್ಬಯ್ಯನವರ ಅಂತಃಕರಣದಲ್ಲಿ ಕೆಲಸ ಮಾಡಿರುವುದು ವೈದಿಕಶಾಹಿಯ ಕುತಂತ್ರಕ್ಕೆ ಬಲಿಯಾಗುತ್ತಿರುವ ಅಮಾಯಕ ಶೂದ್ರ ಸಮುದಾಯದ ಬಗೆಗಿನ ಅಪಾರ ಕಾಳಜಿ ಮತ್ತು ಸಾತ್ವಿಕ ಸಿಟ್ಟು. ಹೀಗಾಗಿಯೇ "ನಿಜವಾದ ಅರ್ಥದಲ್ಲಿ ಸ್ವಯಂಸೇವಕ ಎಂದರೆ ಸ್ವತಂತ್ರ ಚಿಂತನೆ ಮಾಡುವ ಶಕ್ತಿಯನ್ನು ಕಳೆದುಕೊಂಡು ಯಾಂತ್ರಿಕವಾಗಿ ಆರೆಸ್ಸೆಸ್ ಗುಲಾಮಗಿರಿಯನ್ನು ಒಪ್ಪಿಕೊಂಡವ ಅಂಧರ್ಥ" ಎಂದು "ಸ್ವಯಂಸೇವಕ ಎಂದರೇನು" ಎಂಬ ಅಧ್ಯಾಯದಲ್ಲಿ ವ್ಯಾಕುಲದಿಂದ ಹೇಳುತ್ತಾರೆ. ಮನುಷ್ಯನಾಗಲು ಬೇಕಾದ ವಿದ್ಯಾಭ್ಯಾಸವನ್ನು ಇಲ್ಲವಾಗಿಸಿ ಮಾಲೀಕನಿಗೆ ಬೇಕಾದಂತೆ ಕೆಲಸ ಮಾಡುವಂತೆ ಆನೆಗೆ ತರಬೇತಿ ನೀಡುವಂತೆ ಆರೆಸ್ಸೆಸ್ ತನ್ನ ಕಾರ್ಯಕರ್ತರಿಗೆ "ವಿದ್ಯಾಭ್ಯಾಸ"ದ ಬದಲು "ತರಬೇತಿ"ಗೆ ಒತ್ತುಕೊಡುತ್ತದೆ ಎಂದು "ಟೊಳ್ಳು ಶಿಸ್ತು" ಎಂಬ ಲೇಖನದಲ್ಲಿ ವಿವರಿಸುತ್ತಾರೆ. ತಮಗೆ ಪರಿಚಯ ಇರುವ ಹಲವು ಪ್ರತಿಭಾವಂತ ಶೂದ್ರ ಮತ್ತು ಬಡ ಮೇಲ್ಜಾತಿ ಯುವಕರು ಈ ತರಬೇತಿಗೆ ಒಳಗಾಗಿ ಹೇಗೆ ವಿವೇಚನೆಯನ್ನು ಕಳೆದುಕೊಂಡು ಹಳಸಿದ ಪ್ರಾಣಿ ಗಳಂತಾಗಿಬಿಟ್ಟಿದ್ದಾರೆಂಬುದನ್ನು ಉದಾಹರಣೆಗಳ ಸಮೇತ ವಿವರಿಸುತ್ತಾರೆ.

ಎಲ್ಲಕ್ಕಿಂತ ಮುಖ್ಯವಾದದ್ದು ಆರೆಸ್ಸೆಸ್ ಮತ್ತು ಜನಸಂಘಿಗಳ ರಾಜಿಕೋರತನ ಮತ್ತು ಭ್ರಷ್ಟತೆಯನ್ನು ಅಧಿಕೃತ ಉದಾಹರಣೆಗಳ ಮೂಲಕ ವಿವರಿಸಿರುವ ಪ್ರಸಂಗಗಳು.

ಸುಬ್ಬಯ್ಯನವರು ಜನಸಂಘದಲ್ಲಿದ್ದಾಗ ತುರ್ತು ಸ್ಥಿತಿಯಲ್ಲಿ ಬಂಧನಕ್ಕೊಳಗಾಗಿ ಇತರ ಆರೆಸ್ಸಿಸ್ಸಿಗರೊಂದಿಗೆ ಬೆಂಗಳೂರು ಮತ್ತು ಬಳ್ಳಾರಿ ಜೈಲಿನಲ್ಲಿದ್ದಾಗ ಹೇಗೆ ಆರೆಸ್ಸೆಸ್ಸಿಗರು ಮತ್ತು ಇತರ ಜನಸಂಘಿಗಳು ಸರ್ಕಾರಕ್ಕೆ ತಪ್ಪೊಪ್ಪಿಗೆ ಬರೆದುಕೊಟ್ಟು ಬಿಡುಗಡೆಗೊಳ್ಳಲು ಕಾತುರರಾಗಿದ್ದರೆಂಬುದನ್ನು ಸುಬ್ಬಯ್ಯನವರು ಅಧಿಕಾರ ಪೂರ್ವಕವಾಗಿ ದಾಖಲಿಸುತ್ತಾರೆ. ಭ್ರಷ್ಟಾಚಾರದ ಬಗ್ಗೆ ನೈತಿಕವಾಗಿ ಮೇಲರಿಮೆಯ ಧೋರಣೆಯಲ್ಲಿ ಮಾತನಾಡುವ ಈ ಆರೆಸ್ಸೆಸ್ ಹಾಗೂ ಬಿಜೆಪಿ ನಾಯಕರು ಹೇಗೆ ಚಿಕ್ಕಮಗಳೂರು ಪಾರ್ಲಿಮೆಂಟರಿ ಚುನಾವಣೆಯಲ್ಲಿ ಜನರಿಂದ ಒಟ್ಟುಮಾಡಿದ ಹಣವನ್ನು ಸುಳ್ಳು ಲೆಕ್ಕ ತೋರಿಸಿ ದಕ್ಕಿಸಿಕೊಂಡು ಸ್ವಂತ ಆಸ್ತಿ ಮಾಡಿಕೊಳ್ಳಲು ಬಳಸಿ

ಪುಸ್ತಕ ವಿಮರ್ಶೆ

ಕೊಂಡರೆಂಬ ವಿವರಗಳು ಆರೆಸ್ಸೆಸ್ಸಿಗರ ಅನೈತಿಕತೆಯನ್ನು ಬಹಿರಂಗಗೊಳಿಸುತ್ತದೆ. ನಂತರದ ಇಟ್ಟಿಗೆ ಯಾತ್ರೆ, ಈಗಿನ ಲೋಹ ಪುರುಷ್ ಯಾತ್ರೆಗಳಲ್ಲಿ ಅವರು ಎತ್ತುತ್ತಿರುವ ಹಣ ಎತ್ತ ಹೋಗುತ್ತಿದೆ ಎಂಬ ಗುಟ್ಟನ್ನೂ ಸಹ ಬಯಲು ಮಾಡುತ್ತದೆ.

ಈ ಪುಸ್ತಕ ಬರೆದ ಕಳೆದ 26 ವರ್ಷಗಳಲ್ಲಿ ಆರೆಸ್ಸೆಸ್ ಬಗ್ಗೆ ಸುಬ್ಬಯ್ಯನವರು ಬಯಲು ಮಾಡಿರುವ ಪ್ರತಿಯೊಂದು ಸಂಗತಿಗಳಿಗೂ ಮತ್ತಷ್ಟು ಪುರಾವೆಗಳನ್ನು ಆರೆಸ್ಸೆಸ್ ಮತ್ತು ಬಿಜೆಪಿ ಒದಗಿಸಿದೆ. ಹೀಗಾಗಿ 2014ರಲ್ಲಿ ಪ್ರಕಟವಾಗುತ್ತಿರುವ ನಾಲ್ಕನೇ ಆವೃತ್ತಿಯಲ್ಲಿ ಕಳೆದ 26 ವರ್ಷಗಳಲ್ಲಿ ಹಿಂದೂತ್ವವಾದ ಬೆಳವಣಿಗೆ ಮತ್ತು ಇಂದಿನ ಅಪಾಯವನ್ನು ತೆರೆದಿಡುವ ತಾವೇ ಬರೆದ ಇನ್ನೆರಡು ಸಮಕಾಲೀನ ಲೇಖನಗಳನ್ನು ಅನುಬಂಧವಾಗಿ ಸೇರಿಸಿದ್ದಾರೆ.

ಈ ಮುದ್ರಣದಲ್ಲಿ ಸುಬ್ಬಯ್ಯನವರು ಸೇರಿಸಿರುವ ಮತ್ತೊಂದು ಓದಲೇ ಬೇಕಾದ ಅನುಬಂಧ ಹಿರಿಯ ಸಮಾಜವಾದಿ ಮಧು ಲಿಮಯೆ 1979ರಲ್ಲಿ ಆರೆಸ್ಸೆಸ್ ಬಗ್ಗೆ ಬರೆದ ಲೇಖನ. 1977ರ ಜನತಾ ಪಕ್ಷದ ಅನುಭವದ ನಂತರ ಸಂವಿಧಾನ ಮತ್ತು ಪ್ರಜಾತಂತ್ರಕ್ಕೆ ವಿರುದ್ಧವಾಗಿದ್ದ ಆರೆಸ್ಸೆಸ್ ಮತ್ತು ಜನಸಂಘದ ಜೊತೆ ಬೇರ್ಪಡೆ ಅನಿವಾರ್ಯವಾಗಿತ್ತು ಎಂಬುದನ್ನು ಈ ಲೇಖನ ವಿವರಿಸುತ್ತದೆ. ಹೇಗೆ ಆರೆಸ್ಸೆಸ್ ಪ್ರಜಾತಂತ್ರ, ಗಣರಾಜ್ಯ ವಿಕೇಂದ್ರೀಕರಣದ ಪರಿಕಲ್ಪನೆಗೆ ವಿರುದ್ಧವಾಗಿದೆ ಮತ್ತು ಜಾತಿ ಶ್ರೇಣೀಕರಣ ಸಿದ್ಧಾಂತವನ್ನು ಎತ್ತಿ ಹಿಡಿಯುತ್ತದೆ ಎಂಬುದನ್ನು ವಿವರಿಸುವ ಮೂಲಕ ಸುಬ್ಬಯ್ಯನವರ ಪುಸ್ತಕಕ್ಕೆ ಅದು ಉತ್ತಮ ಬೆನ್ನುಡಿಯಂತಾಗಿದೆ.

ಹಾಗೆಯೇ ಕ್ರಾಂತಿಕಾರಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ನೂರ್ ಶ್ರೀಧರ್ 'ಸಂವಾದ' ಪತ್ರಿಕೆಯಲ್ಲಿ ಬರೆದ "ಮೋದಿವಾದದ ಅನಾಹುತಗಳು" ಲೇಖನವನ್ನು ಅನುಬಂಧವಾಗಿ ಸೇರಿಸಿಕೊಂಡಿರುವುದು ಅತ್ಯಂತ ಸಮಂಜಸವಾಗಿದೆ. ತಮ್ಮ ಲೇಖನದಲ್ಲಿ ನೂರ್ ಶ್ರೀಧರ್ ಅವರು ಹಿಂದೂತ್ವದ ಸಮಕಾಲೀನ ಆಕ್ರಮಣಕಾರಿ ಅವತಾರವಾದ "ಮೋದಿತ್ವ" ವಿದ್ಯಮಾನದ ಒಳಹೊರಗನ್ನು ಬಿಚ್ಚಿಡುತ್ತಾರೆ. ಹಾಗೆಯೇ ಹೇಗೆ ಇಂದಿನ ಹಿಂದೂತ್ವವಾದವು ಬಂಡವಾಳವಾದ, ಫ್ಯಾಸಿವಾದ ಮತ್ತು ಬ್ರಾಹ್ಮಣವಾದವೆಂಬ ಮೂರು ಜನವಿರೋಧಿ ರಾಜಕೀಯದ ಸಮ್ಮಿಶ್ರವಾಗಿದೆ ಹಾಗೂ ಅದನ್ನು ಸೋಲಿಸಬೇಕಾದ ಜನಪರ ರಾಜಕಾರಣಕ್ಕೆ ಇರಬೇಕಾದ ಮುಂಗಾಣ್ಕೆಗಳೇನು ಎಂಬುದನ್ನು ವಿವರಿಸುತ್ತಾರೆ. ಹೀಗಾಗಿ ಈ ಅನುಬಂಧವು ಸುಬ್ಬಯ್ಯನವರು ಪುಸ್ತಕದಲ್ಲಿ ಮುಂದಿಟ್ಟಿರುವ ಪ್ರತಿಪಾದನೆಯನ್ನು ಸಮರ್ಥವಾಗಿ ಸಾರಾಂಶೀಕರಿಸುತ್ತದೆ.

112+6 ಪುಟಗಳಿರುವ ಈ ಪುಸ್ತಕಕ್ಕೆ ಲಂಕೇಶ್ ಪ್ರಕಾಶನದವರು 80 ರೂ.ಗಳನ್ನಿಟ್ಟಿದ್ದು ಅಚ್ಚುಕಟ್ಟಾಗಿ ಮುದ್ರಿಸಿದ್ದಾರೆ. ಕೋಮು ಸೌಹಾರ್ದದ ಆಶಯವುಳ್ಳ ಎಲ್ಲರೂ ಆರೆಸ್ಸೆಸ್ ಹೇಗೆ ಈ ದೇಶದ ಎಲ್ಲರ ನೆಮ್ಮದಿಗೆ ಕಂಟಕ [illegible]

• ಶಿವಸುಂದರ್

‘ಉದಯವಾಣಿ’ಗೆ ಅವಶ್ಯವಿರುವ ವಯಸ್ಕರ ಶಿಕ್ಷಣ

“ಒಂದುವೇಳೆ ಬಂಡೆ (ಇತ್ತೀಚೆಗೆ ಪಾತಕಿಯ ಗುಂಡೇಟಿಗೆ ಬಲಿಯಾದ ಪೊಲೀಸ್ ಎಸ್.ಐ. ಬದುಕುಳಿದಿದ್ದರೆ ಮೊದಲು ಮಾನವ ಹಕ್ಕಿನವರು ಅವರನ್ನು ಹುರಿದು ತಿನ್ನುತ್ತಿದ್ದರು. ಸಾಲುಸಾಲು ವಿಚಾರಣೆಗಳು, ಆ ತಂಡದ ಬೆನ್ನಟ್ಟುತ್ತಿದ್ದವು. ಕೋಮು ಸೌಹಾರ್ದ ವೇದಿಕೆಯವರು, ಬುದ್ಧಿಜೀವಿಗಳು ಕೋಮುವಾದಿ ಪಟ್ಟ ಕಟ್ಟುತ್ತಿದ್ದರು. ಆದರೆ ಆ ಎಲ್ಲರೂ ಈ ಹುತಾತ್ಮನ ಪರ ಒಂದೇ ಒಂದು ಮಾತಾಡುತ್ತಿಲ್ಲ” (ಉದಯವಾಣಿ, ಮಣಿಪಾಲ ಆವೃತ್ತಿ 18-01-14 ಪುಟ-6)

ಉದಯವಾಣಿ ಪತ್ರಿಕೆಯ ಸಂಪಾದಕೀಯ ಪುಟದಲ್ಲಿ ಗಿರೀಶ ಮಟ್ಟೆಣ್ಣವರ್ ಅವರ “ಬಂಡೆ ಸತ್ತಿದ್ದು ಮುನ್ನಾನ ಗುಂಡಿಗಲ್ಲ, ಸರಕಾರದ ‘ಗುಂಡಿಗೆ’!” ಎಂಬ ಲೇಖನದ ಜೊತೆ ಮೇಲಿನ ಸಾಲುಗಳನ್ನು ದಪ್ಪ ಅಕ್ಷರಗಳಲ್ಲಿ ಬಾಕ್ಸ್ ಮಾಡಿ ಪ್ರಕಟಿಸಲಾಗಿದೆ. ಆದರೆ ಲೇಖನದಲ್ಲಿ ಎಲ್ಲೂ ಈ ಸಾಲುಗಳು ಕಾಣುವುದಿಲ್ಲ; ಹಾಗಾಗಿ ಪ್ರಾಯಶಃ ಉದಯವಾಣಿಯ ನಿಲುವನ್ನೇ ಇಲ್ಲಿ ಹೇಳಲಾಗಿದೆ. ಮಾನವ ಹಕ್ಕು ಮತ್ತು ಬುದ್ಧಿಜೀವಿಗಳ ಕುರಿತು ಫ್ಯಾಸಿಸ್ಟರಿಗೆ ಬದ್ಧದ್ವೇಷ ಇರುವುದು ಎಲ್ಲರಿಗೂ ಗೊತ್ತಿರುವಂತಹದ್ದೆ. ಉದಯವಾಣಿಯ ಫ್ಯಾಸಿಸ್ಟ್ ಒಲವು ಕೂಡ ಹೊಸ ಸುದ್ದಿ ಏನಲ್ಲ. ಕರಾವಳಿಯ ಊರುಗಳಿಗೆ ಕೋಮುದ್ವೇಷದ ಬೆಂಕಿ ಹಚ್ಚಲು, ಸಂಘಪರಿವಾರದ ಜೊತೆ ಉದಯವಾಣಿ ಕೈಜೋಡಿಸಿರುವುದು ಕೂಡ ಒಂದು ಮಾಮೂಲು ಸುದ್ದಿಯೇ ಸರಿ. ಬರಲಿರುವ ಲೋಕಸಭಾ ಚುನಾವಣೆಗಳಿಗೆ ತಯಾರಿಯೋ ಎಂಬಂತೆ ಕಳೆದ ಕೆಲವು ದಿನಗಳಿಂದ ಈ ಪತ್ರಿಕೆ ತನ್ನ ಕೆಲಸವನ್ನು ಇನ್ನಷ್ಟು ಹುರುಪಿನಿಂದ ಮಾಡುತ್ತಿದೆ. ಆದಾಗ್ಯೂ ಮೇಲಿನ ಉದ್ಧೃತದ ಮಾತುಗಳು ಆ ಪತ್ರಿಕೆಯ ಸಿದ್ಧಾಂತದ ಬದಲು ಗಾಢ ಅಜ್ಞಾನದಿಂದಲೇ ಹುಟ್ಟಿಕೊಂಡಿರಬಹುದು ಎಂದು ಭಾವಿಸಿ, ಮಾನವಹಕ್ಕು ಇತ್ಯಾದಿಗಳ ಬಗ್ಗೆ ಕೆಲವು ಪ್ರಾಥಮಿಕ ಮಾಹಿತಿಗಳನ್ನು ಇಲ್ಲಿ ಕೊಡಲಾಗಿದೆ.

1) ಮಾನವ ಹಕ್ಕು ಎಂಬುದು ಒಂದು ವಿಧ್ವಂಸಕ ವಿಚಾರವಲ್ಲ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾನವ ಹಕ್ಕುಗಳೇ ಮೂಲಾಧಾರ. ಭಾರತದ ಸಂವಿಧಾನ, ಪ್ರಜೆಗಳಿಗೆ ಕೊಟ್ಟಿರುವ ಹಕ್ಕುಗಳಿಗೆ ಹೊರತಾದ ಯಾವ ವಿಶೇಷ ಹಕ್ಕು ಅಥವಾ ಸ್ವಾತಂತ್ರವನ್ನೂ ಮಾನವ ಹಕ್ಕು ಹೋರಾಟಗಳು ಪ್ರತಿಪಾದಿಸುವುದಿಲ್ಲ.

2) ಇದುವರೆಗಿನ ಎಲ್ಲ ಮಾನವ ಹಕ್ಕು ಹೋರಾಟಗಳೂ ಶಾಂತಿಯುತವಾಗಿ ಮತ್ತು ಪ್ರಜಾಸತ್ತಾತ್ಮಕ ವಿಧಾನಗಳಲ್ಲೇ ನಡೆದಿವೆ. ಉದಾಹರಣೆಗೆ ಸಶಸ್ತ್ರ ಸೈನಿಕಪಡೆಗಳ ವಿಶೇಷ ಅಧಿಕಾರ ಕಾಯ್ದೆ ವಿರುದ್ಧ ಮಣಿಪುರದ ತರುಣಿ


ಇರೋಮ್ ಶರ್ಮಿಳ ಕಳೆದ 11 ವರ್ಷಗಳಿಂದ ನಡೆಸುತ್ತಿರುವ ಉಪವಾಸ ಸತ್ಯಾಗ್ರಹ, ಮೇಧಾ ಪಾಟ್ಕರ್ ನೇತೃತ್ವದ ನರ್ಮದಾ ಬಚಾವೋ ಆಂದೋಲನ, ಮಾಹಿತಿ ಹಕ್ಕು ಮತ್ತು ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ಕೂಲಿ ದರಗಳಿಗಾಗಿ ಅರುಣಾ ರಾಯ್ ನಡೆಸುತ್ತಿರುವ ಚಳವಳಿ, ಕೂಡಂಕುಳಂ ಅಣುಸ್ಥಾವರದ ವಿರುದ್ಧ ನಡೆದಿರುವ ಹೋರಾಟ, ದೇಶಾದ್ಯಂತ ವಿಶೇಷ ಆರ್ಥಿಕ ವಲಯ ಮತ್ತು ಇನ್ನಿತರ ‘ಅಭಿವೃದ್ಧಿ’ ಯೋಜನೆಗಳಿಗಾಗಿ ರೈತರಿಂದ ಕೃಷಿ ಭೂಮಿ ವಶಪಡಿಸಿಕೊಳ್ಳುವುದರ ವಿರುದ್ಧ ನಡೆದಿರುವ ಹೋರಾಟಗಳು - ಈ ಉದಾಹರಣೆಗಳನ್ನು ಇನ್ನಷ್ಟು ಬೆಳೆಸಬಹುದಾದರೂ, ಆಳುವವರು ಮತ್ತು ಪಟ್ಟಭದ್ರರ ದಬ್ಬಾಳಿಕೆಗೆ ಹೋಲಿಸಿದರೆ ದೇಶದಲ್ಲಿ ಕಾರ್ಯನಿರತರಾಗಿರುವ ಮಾನವ ಹಕ್ಕು ಹೋರಾಟಗಾರರ ಸಂಖ್ಯೆ ಏನೇನೂ ಸಾಲದು.

3) ಮೇಲಿನ ಉದ್ಧೃತದಲ್ಲಿ ಕೋಮು ಸೌಹಾರ್ದ ವೇದಿಕೆಯನ್ನು ... ಹೀಗಳೆಯಲಾಗಿದೆ. ವೇದಿಕೆ ತನ್ನ 11 ವರ್ಷಗಳ ಇತಿಹಾಸದಲ್ಲಿ ... ಕ್ರಿಮಿನಲ್ ಪಾತಕಿಯ ಪರವಾಗಿಯೂ ಪ್ರತಿಭಟನೆ ನಡೆಸಿಲ್ಲ, ಎಲ್ಲ ಪ್ರಜೆಗಳ ... ಸಂವಿಧಾನಾತ್ಮಕ ಕಾನೂನಿನ ರಕ್ಷಣೆ, ಕಾನೂನಿನ ಆಳ್ವಿಕೆ ಮತ್ತು ಆರೋಪಿ... ಕಾನೂನುರೀತ್ಯಾ ನ್ಯಾಯವಿಚಾರಣೆಗಳಿಗಾಗಿ ಮಾತ್ರ ಕೋಮು ಸೌಹಾರ್ದ ವೇದಿಕೆ ಮತ್ತೆ ಮತ್ತೆ ತನ್ನ ಹಕ್ಕೊತ್ತಾಯದ ಆಗ್ರಹ, ಪ್ರತಿಭಟನೆಗಳನ್ನು ನಡೆ...


4) ಉದಯವಾಣಿಯ ಹೇಳಿಕೆಯಲ್ಲಿ ‘ಮಾನವ ಹಕ್ಕಿನವರು’ ಮ... ಕೋಮು ಸೌಹಾರ್ದ ವೇದಿಕೆಯ ಜೊತೆಗೆ ‘ಬುದ್ಧಿಜೀವಿ’ಗಳನ್ನು ... ಪ್ರಸ್ತಾಪಿಸಲಾಗಿದೆ. ಈ ‘ಬುದ್ಧಿಜೀವಿ’ಗಳು ಯಾವ ತಳಿಗೆ ಸೇರಿ... ಪ್ರಾಣಿಗಳಿರಬಹುದು? ಲೋಕಖ್ಯಾತ ಮಾರ್ಕ್ಸ್‌ವಾದಿ ಚಿಂತಕ ಆಂಟೋನಿಯೊ ಗ್ರಾಮ್ಷಿ ಹೇಳುವ ಪ್ರಕಾರ ಪ್ರತ್ಯೇಕ ಜೀವತಳಿ ಹಾಗಿರಲಿ, ಬುದ್ಧಿಜೀವಿ ಎಂ... ವಿಶೇಷ ಮನುಷ್ಯ ವರ್ಗವೂ ಇಲ್ಲ; ಆತನ ಪ್ರಕಾರ ಎಲ್ಲ ನರಮನುಷ್ಯರು ಬುದ್ಧಿಜೀವಿಗಳೇ. ಅವನು ಹೇಳುವಷ್ಟು ವಿಶಾಲ ಅರ್ಥದಲ್ಲಿ ಅಲ್ಲವಾದರೂ ಬರಹಗಾರರು, ಮಾನವ ಶಾಸ್ತ್ರಜ್ಞರು, ವಿಜ್ಞಾನಿಗಳು; ತತ್ವಜ್ಞಾನಿಗಳು, ಪತ್ರಕರ್ತರು ಇವೇ ಮುಂತಾದ ಬುದ್ಧಿ ಬಳಸಿ ಮಾಡುವ ವೃತ್ತಿಗಳಲ್ಲಿ ತೊಡಗಿಕೊಂಡವರು ‘ಬುದ್ಧಿಜೀವಿಗಳು’ ಎಂದು ಪರಿಗಣಿಸಲಾಗುತ್ತದೆ. ಈ ಅರ್ಥದಲ್ಲಿ ಉದಯವಾಣಿ ಪತ್ರಿಕೆ ಕೂಡಾ ಬುದ್ಧಿಜೀವಿಗಳಿಲ್ಲದೆ ಒಂದು ದಿನವೂ ಪ್ರಕಟವಾಗಲಾರದು. ಅದರ ರವಿವಾರದ ಸಂಚಿಕೆಯ ಕತೆ, ಕವಿತೆ, ಪ್ರಬಂಧ, ವಿಮರ್ಶೆಗಳಂತೂ ಬುದ್ಧಿಜೀವಿಗಳಿಗಲ್ಲದೆ, ಬೇರೆ ಯಾರಿಗೂ ಸಾಧ್ಯವಾಗುವಂತಹದಲ್ಲ, ಹಾಗಿ... ಬುದ್ಧಿಜೀವಿಗಳ ಬಗ್ಗೆ ಉದಯವಾಣಿಗೆ ಯಾಕೆ ಇಷ್ಟು ಅಸಹನೆ? ಅಥವಾ ಅದರ ರವಿವಾರದ ಸಂಚಿಕೆಯ ಬೌದ್ಧಿಕ ಸರಕಿಗೂ ಅದರ ಪ್ರತಿನಿತ್ಯದ ಅಸಹನೆಗ... ಯಥಾರ್ಥ ಸಂಬಂಧವೇ ಇಲ್ಲವೋ?

● ಜಿ. ರಾಜಶೇಖ...

ಆಮ್ ಆದ್ಮಿ ಅಲ್ಲದ ವಾಜಪೇಯಿ



ನವದೆಹಲಿಯ ಚುನಾವಣೆಗಳಲ್ಲಿ ಆಮ್ ಆದ್ಮಿ ಪಕ್ಷಕ್ಕೆ ಸಿಕ್ಕಿರುವ ಅಭೂತಪೂರ್ವ ಜನ ಬೆಂಬಲ ಇತರ ರಾಜಕೀಯ ಪಕ್ಷಗಳಂತೆಯೇ ಬಿಜೆಪಿಯ ನಿದ್ದೆಯನ್ನೂ ಕೆಡಿಸಿಬಿಟ್ಟಿದೆ. ಹೆಚ್ಚುತ್ತಿರುವಂತೆ ಅನಿಸುತ್ತಿರುವ ಆಪ್ ಜನಪ್ರಿಯತೆಯನ್ನು ಎದುರಿಸುವ ತಂತ್ರಗಾರಿಕೆ ಕುರಿತಂತೆ ಪಕ್ಷದ ಕೋರ್ ಸಮಿತಿಯಲ್ಲಿ ಬಿಸಿಬಿಸಿ ಚರ್ಚೆಗಳು ನಡೆಯುತ್ತಿವೆ. ಈ ಆಪ್ ಸವಾಲನ್ನು ತನ್ನ ಎಂದಿನ ಶೈಲಿಯಲ್ಲಿ ಎದುರಿಸಲು ಹೊರಟ ಸುಳ್ಳಿನ ಸರದಾರ ಮೋದಿ ಮಾತ್ರ ಮತ್ತೊಂದು ಸುಳ್ಳು ಹೇಳಿ ಜನರಿಂದ ಉಗಿಸಿಕೊಂಡಿದ್ದಾನೆ!




ಜನವರಿ 12ರ ಗೋವಾ ರ್‍ಯಾಲಿಯಲ್ಲಿ ಮಾತನಾಡಿದ ಮೋದಿ ತನ್ನ ಜೀವನದ ಬಹುಪಾಲು ಸಮಯವನ್ನು ದೇಶಕ್ಕಾಗಿ ಮುಡುಪಿಟ್ಟ ವಾಜಪೇಯಿಯನ್ನು ಹೊಗಳುತ್ತಾ ಕೆಲ ವರ್ಷಗಳ ಕಾಲ ದೇಶದ ಪ್ರಧಾನಿಯಾಗಿಯೂ ಆಗಿದ್ದ ವಾಜಪೇಯಿ ಕೂಡ ಆಪ್ ಪದಾಧಿಕಾರಿಗಳಂತೆ ಸರಳಜೀವನ ಸಾಗಿಸುತ್ತಿದ್ದವರು; ವಾಜಪೇಯಿಗೆ ಸ್ವಂತ ಮನೆಯೇ ಇಲ್ಲ ಎಂದು ಘಂಟಾಘೋಷವಾಗಿ ಸಾರಿದ. ಆದರೆ ಇದೊಂದು ಹಸಿ ಹಸಿ ಸುಳ್ಳು. ಏಕೆಂದರೆ ವಾಜಪೇಯಿ 2004ರ ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಸಂದರ್ಭದಲ್ಲಿ ಸಲ್ಲಿಸಿದ್ದ ಆಸ್ತಿ ವಿವರಗಳ ಪ್ರಕಾರ ಆತ ದೆಹಲಿಯ ಈಸ್ಟ್ ಆಫ್ ಕೈಲಾಶ್ ಎಂಬಲ್ಲಿ ಒಂದು ಬಹುಮಹಡಿ ಕಟ್ಟಡದ ಮಾಲೀಕ! ಆ ಕಾಲದಲ್ಲೇ ಈ ಕಟ್ಟಡದ ಬೆಲೆ 22 ಲಕ್ಷ ರೂಪಾಯಿಗಳು! ಇದಲ್ಲದೆ ವಾಜಪೇಯಿಗೆ ಗ್ವಾಲಿಯರ್ ನಗರದಲ್ಲಿ ಆರು ಲಕ್ಷ ಬೆಲೆ ಬಾಳುವ ಜಾಗ ಕೂಡಾ ಇದೆ.

ಸ್ಥಿರಾಸ್ತಿ ವಿವರಗಳು	ಸ್ವಂತ	ಪತ್ನಿ	ಅವಲಂಬಿತ	1	2	3
ಕೃಷಿ ಭೂಮಿ	0	0		0	0	0
ಕೃಷಿಯೇತರ ಭೂಮಿ	0	0		0	0	0
ಕಟ್ಟಡಗಳು	ಬೆಲೆ: ರೂ 22 ಲಕ್ಷ. 509, ಎಸ್‌ಎಫ್‌ಎಸ್ ಅಪಾರ್ಟ್‌ಮೆಂಟ್, ಈಸ್ಟ್ ಆಫ್ ಕೈಲಾಶ್, ನವದೆಹಲಿ. 150.32 ಚದರ ಮೀಟರ್ ಬೆಲೆ: ರೂ 6 ಲಕ್ಷ ಶಿಂದೆ ಕಿ ಛಾವಣಿ, ಕರ್ನಲ್ ಸಿಂಗ್ ಕಾ ಬಾಗ್, ಗ್ವಾಲಿಯರ್. (ಪಿತ್ರಾರ್ಜಿತ ಆಸ್ತಿಯ ಪಾಲು) 1800 ಚದರಡಿ. (www.truthofgujarat.com)	0		0	0	0

ಅಮ್ಮ ಅಳಿದ ಮೇಲೆ ಉಳಿದ ಖಯಾಲ್‌ಗಳು

1
ಇರೋಷ್ಟು ದಿವಸ-
ಅವಳು ಅವಳ ಹಾಗೆ
ನಾನು ನನ್ನ ಹಾಗೆ-ಇದ್ದೆವು.
ಹೀಗೇ ಇರಬೇಕು ಅನ್ನೋ ಯಾವ
ಆಸೆಗಳೂ ಇಲ್ಲದೆ.
ಅವಳು ಅಳಿದ ಮೇಲೆ
ಇದ್ದ ಇರುವಿಕೆಯ ಭಾವ
ಚೂರು ಚೂರೇ ತೋರೋದು
ಹೇಗೆ! ಇಲ್ಲದ್ದರ ಬಗ್ಗೆ ಇರುವ
ಪದ್ಯದ ಖಯಾಲ್‌ನ ಹಾಗೆ.

2
ಅಮ್ಮ ಇಲ್ಲ, ಅಬ್ಬಾ!
ಇನ್ನು ಮೇಲೆ, ವಾರಕ್ಕೊಮ್ಮೆ
ದೇವರ ಗುಡಿಗಳ ಮೆಟ್ಟಿಲು
ಕಾಯುವ ಕಾಯಕವಿಲ್ಲ!
ಗುಡಿಗೆ ಬರುವ ಜನಗಳ ದುಃಖ
ಅರಿಯುವ ಮಾರ್ಗವೂ ಇಲ್ಲ.



3
(ಸಲೀಂ-ಜಾವೇದರ ‘ದಿವಾರ್’ ನ ಖ್ಯಾತ
ಸಂಭಾಷಣೆ ನೆನಪಿದೆಯಾ!)
‘ನನ್ನ ಹತ್ರ ಹಣವಿದೆ,
ಕಾರಿದೆ, ಬಂಗ್ಲೆ ಇದೆ!
ನಿನ್ಹತ್ರ ಏನಿದೆ!’

‘ನನ್ನ ಹತ್ರ
ಅಮ್ಮ ಕೂಡ ಇಲ್ಲ ಕಣೋ’

4
‘ಅಮ್ಮ ಅಂದ್ರೆ ನಂಗಿಷ್ಟ’
ಅಂತ ಏನೂ ನಂಗಿರಲಿಲ್ಲ.
ಅವಳು,
ತಲೆನೇವರುವಾಗ, ಬೆನ್ನು ಸವರುವಾಗ,
‘ಬಿಡೇ. ಇದೇನು ಮಗುವಿಗೆ ಮಾಡೋ ಮುದ್ದು’
ಎಂದು ಖುಲ್ಲಂ ಖುಲ್ಲಾ ರೇಗೋನು ನಾನು.
ಆದ್ರೆ, ನನ್ನ ಹರೆಯದ
ಮಗಳನ್ನು ಅವಳು ತೊಡೆ ಮೇಲೆ
ಹಾಕಿಕೊಂಡು ಮುದ್ದಿಸೋವಾಗ
ಖುಷಿಯಾಗಿ ನೋಡುತ್ತಿದ್ದೆ.

ಇನ್ನು ನನ್ನ
ಮಗಳಿಗ್ಯಾರು ಗತಿ!

5
ಅಮ್ಮ ತೀರಿದ್ಹಾಳೆ.
ನನ್ನ ಪಾಪಗಳನ್ನು
ಹೊಟ್ಟೆಗೆ ಹಾಕಿಕೊಳ್ಳೋ ಖಾತೆ
ಮುಚ್ಚಿದೆ.
ಇನ್ನು,
ನನ್ನ ಪಾಪಗಳಿಗೆ ನಾನೇ
ಹೊಣೆ.

● ಕೆ. ಫಣಿರಾಜ್



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಗೌರಿ: ಸ್ತ್ರೀ ತತ್ತ್ವ

ವಿಶ್ವಯೋನಿ

...ಶ್ವದ ಸೃಷ್ಟಿಗೆ ಹಿರಣ್ಯ ಗರ್ಭದ ಕಲ್ಪನೆಯನ್ನು ...ವ ಒಂದು ದಾರ್ಶನಿಕ ಅಥವಾ ಅತಿಭೌತಿಕ ...ಪ್ಪೂ ಕೂಡ. ಸೃಷ್ಟಿಯಾಗುವ ಪ್ರಕ್ರಿಯೆಯಲ್ಲಿ ...ೕನಿಯ ಪರಿಕಲ್ಪನೆಯನ್ನು ಅಲ್ಲಗಳೆಯಲು ...ದ ಕಾರಣವೇನೋ; ಜಗತ್ತಿನ ಅತಿಹೆಚ್ಚು ...ಗಳಲ್ಲಿ ಸ್ತ್ರೀ ದೇವತೆಗಳೇ ವಿಜೃಂಭಿಸಿರುವುದು. ...ಲ್ಲಿ ಮಾತ್ರವಲ್ಲದೇ ವಿಶ್ವದ ಇತರ ಪ್ರಾಚೀನ ...ಗಳಲ್ಲಿ ನಾವು ಸ್ತ್ರೀ ದೇವತೆಗಳನ್ನು ಪ್ರಧಾನವಾಗಿ ...ವೆ. ಸ್ತ್ರೀ ತತ್ವವನ್ನು ಅದೆಷ್ಟೇ ಮಣಿಸಲು ಪುರುಷ ...ಗಳು ಸಾಮಾಜಿಕ ತಂತ್ರಗಳನ್ನು ಹೂಡಿದರೂ ತನ್ನ ಘನತೆಯಲ್ಲಿ ಅಚಲವಾಗಿರಲು ಕಾರಣ ...ಣ್ತಿನ ಮಾತ್ರವಲ್ಲ, ತಾಯ್ತನ!

...ನ ತಾಯ್ತನಕ್ಕೆ ಗೌರವ ಸೂಚಿಸುವ ಪ್ರಕ್ರಿಯೆಯಲ್ಲಿ ಹೆಣ್ಣಾಯಿತು. ಭೂಮಿಯ ಮಣ್ಣು ಮತ್ತು

ಸಂಕೇತವಾಗಿ, ಲೌಕಿಕ ಮತ್ತು ಸಾಮಾಜಿಕ ನೆಲೆಗಟ್ಟಿನಲ್ಲಿ ಪ್ರತಿಮೆಯಾಗಿ ನಿಲ್ಲುತ್ತದೆ. ಹಾಗಾಗಿ ಗೌರಿ ಎಂಬುದು ಸಾಧಾರಣ ವಧುವಿನಂತೆ, ತವರಿಗೆ ಬಂದುಹೋಗುವ ಹೆಣ್ಣು ಮಗಳಂತೆ, ಎಂಥದ್ದೋ ಒಬ್ಬ ಗಂಡನ ಮುಗುದ ಹೆಂಡತಿಯಂತೆ, ಯಾರೋ ಒಬ್ಬನ ವಾತ್ಸಲ್ಯದ ತಾಯಿಯಂತೆ ಕಾಣುತ್ತಾಳೆ. ಹಾಗಾಗಿಯೇ ಶಕ್ತಿ ಮತ್ತು ದೇವಿಯರಿಗಿಂತ ಜನಪದರ ನಾಲಿಗೆಯಲ್ಲಿ ಹೆಚ್ಚು ನಲಿದಾಡುವುದು ಗೌರಿ.

ಫೇರ್ ಅಂಡ್ ಲವ್ಲಿ

ನಿಮ್ಮ ಗೌರವ ವರ್ಣದ (ಗೌರವರ್ಣ ಅಲ್ಲ ಗೌರವ ವರ್ಣವಾಗಿದೆ) ಮುಖಕಾಂತಿಗೆ ಫೇರ್ ಅಂಡ್ ಲೌವ್ಲಿ ಬಳಸಿ ಎಂದು ಹೇಳುವ ಜಾಹಿರಾತು ನಿಮಗೆ ಗೊತ್ತು. ಅದಕ್ಕೆ ನಿಮ್ಮಲ್ಲಿ ಬಹು ಮಂದಿ ಮರುಳಾಗಿಯೂ ಅನೇಕ ವರ್ಷಗಳಿಂದ ಬಳಸುತ್ತಿದ್ದೀರಿ. ಜಾಹಿರಾತಿನ ಹುಡುಗಿ ತನ್ನ ಕಪ್ಪು ಬಣ್ಣದ ತ್ವಚೆಯ ಕಾರಣದಿಂದ ಕೀಳರಿಮೆ ಅನುಭವಿಸುವುದು, ತನ್ನ ಪ್ರತಿಭೆಯನ್ನು ಒಳಗಿಟ್ಟುಕೊಂಡೇ

ಅವಳು ಪಾಪದ ಗೌರಿಯಾಗಿ ಕಾಣುವುದು.

ಪುರುಷನ ನಿರೀಕ್ಷೆಗೆ ಹೆಣ್ಣಾದವಳು ತನ್ನ ಬದುಕನ್ನು ರೂಪಿಸಿಕೊಳ್ಳಬೇಕೆಂದು ಹೇಳುವ ಸಮಾಜ ಯಾವಾಗ ಪ್ರಾರಂಭವಾಯಿತೆಂದು ನಿಖರವಾಗಿ ಹೇಳಲಾಗದಿದ್ದರೂ, ಮಾತೃ ಪ್ರಧಾನವಾಗಿದ್ದ ಪುರಾತನ ಸಮಾಜವನ್ನು ಪುರುಷರು ತಮ್ಮ ಮುಷ್ಟಿಗೆ ತೆಗೆದುಕೊಳ್ಳುವ ಅನೇಕ ದೃಷ್ಟಾಂತಗಳು ಪುರಾಣಗಳಲ್ಲಿ ಕಾಣುತ್ತವೆ.


ಪ್ರಕೃತಿ ವರ್ಸಸ್ ಸಮಾಜ

ಪ್ರಕೃತಿ ವರ್ಸಸ್ ಸಮಾಜವೆಂದರೆ ಸ್ತ್ರೀ ವರ್ಸಸ್ ಪುರುಷನೆಂದೇ ಅರ್ಥ. ಪ್ರಕೃತಿಯೆಂಬುದು ಸ್ತ್ರೀ ತತ್ವದ್ದು. ಧರ್ಮ ಎಂಬುದು ಪುರುಷನ ಕೊಡುಗೆ. ಪ್ರಕೃತಿ ನೈಸರ್ಗಿಕವಾದರೆ, ಸಮಾಜ, ಅದರ ನಾಗರಿಕ ನಿಯಮ, ಅದರ ಸಂಕೀರ್ಣತೆಯಾದ ಧರ್ಮ ಕೃತಕ. ಧರ್ಮವೇನಿದ್ದರೂ ಪುರುಷನ ಅಧಿಕಾರ.

ಕೃತಕ ಧರ್ಮವು ಅಥವಾ ಮಾನವ ನಿರ್ಮಿತ

ಬರೆಯಿಸಿಕೊಂಡು ಬಾ ಎಂದು ಹೇಳುತ್ತಾನೆ. ಶೂರ್ಪನಖಿ ಮುಗ್ಧವಾಗಿ ರಾಮನಿಗೆ ತನ್ನ ಬೆನ್ನ ಹಲಗೆಯನ್ನು ತೋರಿದಾಗ, ಅದರ ಮೇಲೆ ಇವಳ ಮೂಗು ಕಿವಿಗಳನ್ನು ಕೊಯ್ದು ಕಳುಹಿಸಲು ಬರೆದು ಕಳುಹಿಸುತ್ತಾನೆ. ತನ್ನ ಬೆನ್ನ ಮೇಲೆ ಬರೆದಿರುವುದನ್ನು ಕಾಣದ ಶೂರ್ಪನಖಿಯು ಲಕ್ಷ್ಮಣನಿಗೆ ಅವನ ಅಣ್ಣನ ಅನುಮತಿ ಪತ್ರವೆಂದು ನಂಬಿ ತೋರಿಸುವಳು. ಲಕ್ಷ್ಮಣ ತನ್ನ ಅಣ್ಣನ ಅಮಾನವೀಯವಾದ, ಸ್ತ್ರೀ ವಿರೋಧವಾದ, ಪ್ರಕೃತಿಯ ನೈಸರ್ಗಿಕ ನಡವಳಿಕೆಯನ್ನು ತಿರಸ್ಕರಿಸುವ ಕ್ರೂರ ಆಜ್ಞೆಯನ್ನು ಓದಿ ಶೂರ್ಪನಖಿಯ ಮೂಗು ಮತ್ತು ಕಿವಿಗಳನ್ನು ಕೊಯ್ದು ಕಳುಹಿಸುತ್ತಾನೆ.

ರಾಮನಿಲ್ಲಿ ಧರ್ಮಪುರುಷ, ಅಪ್ಪಣೆ ಮಾಡುವ ಅಧಿಕಾರಿ. ಲಕ್ಷ್ಮಣ ಶಿಷ್ಟ ಸಮಾಜವನ್ನು ಮುನ್ನಡೆಸುವ ಆಜ್ಞಾಧಾರಕ. ಆಣತಿಯನ್ನು ವಿವೇಚಿಸದೇ ಪಾಲಿಸುವ ಸಂವೇದನಾಹೀನ. ಈತನೇ ಪ್ರಕೃತಿಯ ನೆಲೆಯಿಂದಲೇ ಬಂದಿರುವ ಸೀತೆಗೂ ತನ್ನ ಪ್ರತಿಬಂಧಕವನ್ನು ವಿಧಿಸುತ್ತಾನೆ. ಲಕ್ಷ್ಮಣರೇಖೆ ಎಳೆದು ಅದನ್ನು ದಾಟದಿರಲು ಹೇಳುತ್ತಾನೆ. ಆದರೆ ಅವಳು ಅದನ್ನು ಉಲ್ಲಂಘಿಸುತ್ತಾಳೆ. ರಾವಣನೂ ಶಿಷ್ಟಾಚಾರದ ಮಾತನ್ನೇ ಹೇಳಿ ಅವಳನ್ನು ಅಡ್ಡರೇಖೆಯನ್ನು ದಾಟಲು ಹೇಳುತ್ತಾನೆ. ಸೀತೆಗೆ ಸಂದಿಗ್ಧ ಪರಿಸ್ಥಿತಿ. ಲಕ್ಷ್ಮಣನ ಶಿಷ್ಟಾಚಾರ ವಿಧಿಸಿದ್ದು ಉಲ್ಲಂಘಿಸದಿರಲು. ರಾವಣನ ಶಿಷ್ಟಾಚಾರ ಹೇಳುತ್ತಿರುವುದು ಉಲ್ಲಂಘಿಸಲು. ಇಂತಹ ಇಕ್ಕಟ್ಟಿಗೆ ಪ್ರಕೃತಿಯ ಸ್ತ್ರೀ ತತ್ವವೂ ಸಿಕ್ಕಿಕೊಂಡಿತು.









...ಶಿಯೂ ಹೆಣ್ತನದ ಗುಣ ಪಡೆಯಿತು. ಭೂಮಿಯ ...ಬೀಜವನ್ನು ಹೊತ್ತು ಅಂಕುರಿಸುವ, ಬೆಳೆಯುವ, ...ೕಡುವ ಎಲ್ಲಾ ಕೈಂಕರ್ಯಗಳು ಬ್ರಹ್ಮಾಂಡದ ...ನ್ನೂ, ವಿಶ್ವದ ಸೃಷ್ಟಿಗೂ ಆರೋಪಿಸಲ್ಪಟ್ಟು ...ೕನಿಯೆಂದು ಸ್ತ್ರೀ ತತ್ವವನ್ನು ಗೌರವಿಸಲಾಯಿತು.

...ಮತ್ತು ಶಕ್ತಿಯರ ಸಮ್ಮಿಲನದಲ್ಲಿ, ಲಿಂಗ ಮತ್ತು ...ಯ ಸಂಯೋಗದಲ್ಲಿ ತಾಂತ್ರಿಕರು ಅದೇನೇ ತತ್ವ ...ನ್ನು, ಯೋಗಶಕ್ತಿಗಳನ್ನು ಕಂಡುಕೊಂಡರೂ, ...ಯು ಭೋಗವಸ್ತುವಲ್ಲ, ಸೃಷ್ಟಿಯ ದ್ವಾರ ಎಂದು ...ಸಲಾಯಿತು. ಈ ಪರಿಕಲ್ಪನೆಯೇ ಮುಂದೆ ವಿಕಸನ ...ಹುತ್ತಾ ವಿವಿಧ ಶಕ್ತಿ ಮುಖಗಳಲ್ಲಿ ಅಭಿವ್ಯಕ್ತವಾಗುತ್ತಾ ...ಯಿತು. ಹಾಗಾಗಿಯೇ ಭೂಮಿ, ಪ್ರಕೃತಿ, ನದಿ, ...ಪ್ರಕೃತಿ; ಈ ರೀತಿ ಜೈವಿಕವಾದ ಮತ್ತು ಪ್ರಾಕೃತಿಕ ...ಗಳೆಲ್ಲವೂ ಸ್ತ್ರೀ ತತ್ವದ ತೆಕ್ಕೆಯಲ್ಲಿ ಸೇರಿಕೊಳ್ಳುತ್ತಾ ...ವು. ಈ ಸ್ತ್ರೀ ತತ್ವಕ್ಕೆ ಸೃಷ್ಟಿಯ ಮೂಲವಿರುವಂತೆಯೇ, ಚಲನಶೀಲ ಗುಣವಿದೆ. ಪಡೆದುಕೊಳ್ಳುವ ...ರುವಂತೆ ನೀಡುವ ಔದಾರ್ಯವಿದೆ. ಪೊರೆಯುವ ...ಕ ತೋರುವಂತೆ ತೊರೆಯುವ ಮತ್ತು ಮರ್ಧಿಸುವ ...ಇದೆ.

...ಷ್ಟೆಲ್ಲಾ ತಾತ್ವಿಕವಾಗಿ ಸ್ತ್ರೀ ತತ್ವವನ್ನು ನಾನಾ ಶಾಸ್ತ್ರಗಳಲ್ಲಿ ...ಗಳನ್ನು ನೀಡಿ, ವಿಶ್ವಯೋನಿಯ ಪರಿಕಲ್ಪನೆಯನ್ನು ...ದರೂ, ಸಾಮಾಜಿಕವಾಗಿ ಅವಳನ್ನು ಗೌರವಿಸುವ ...ಬಂದಿದೆ. ಆ ಮಾನ್ಯ ಸ್ತ್ರೀ ಪರಿಕಲ್ಪನೆಯು ದಾರ್ಶನಿಕ ...ರಿಂದ ಹಿಡಿದು, ಸಾಮಾನ್ಯ ಜನಪದರವರೆಗೂ ...ಸಲು ಒಂದು ಸರಳಮೂರ್ತಿಯ ಚಿತ್ರಣವಿದೆ. ...ಗೌರಿ.

...ರಿಯ ಪುರಾಣ ಗಂಭೀರವಾಗಿಯೂ ಮತ್ತು ...ಗಿಯೂ ವಿಸ್ತಾರಗೊಳ್ಳುತ್ತಾ ಹೋಗುವಂತಹ ವಿವಿಧ ...ಮುಖಗಳಿವೆ. ಲಜ್ಜಾ ಗೌರಿ, ಸ್ವರ್ಣಗೌರಿ, ಕೇದಾರ ...ಗಜಗೌರಿಗಳ ಜೊತೆಜೊತೆಯಲ್ಲಿ, ವಿವಿಧ ದೇವಿ ...ಗಳೂ ಜೊತೆಗೂಡುತ್ತವೆ. ಸ್ತ್ರೀ ತತ್ವದಲ್ಲಿ, ಶಕ್ತಿ ...ಎಲ್ಲವೂ ತಾತ್ವಿಕ ಮತ್ತು ತಾಂತ್ರಿಕವಾಗಿ ಬೊಳಗಿದರೆ, ...ಎಂಬ ಪರಿಕಲ್ಪನೆಯು ಅದೇ ಶಕ್ತಿಯ ಸೌಮ್ಯ, ...ಆಗ್ರಹ, ರೌದ್ರ, ಕರುಣಾ, ಮಮತಾ ಇತ್ಯಾದಿ ...ಗಳ ಮೂರ್ತಿಯಾಗಿ ಪ್ರಕಟವಾಗುತ್ತದೆ. ಆದರೆ, ...ಎಂಬುದು ಜನಪದ ಸಹಜವಾಗಿ, ಸಂಬಂಧಗಳ

ಹಿಂದುಳಿಯುತ್ತಾಳೆ. ಜಾಹಿರಾತಿನಲ್ಲಿಯೇ ಇರುವವರು ಜಾಹಿರಾತನ್ನು ನೋಡಲಾಗುವುದಿಲ್ಲ! ಹಾಗಾಗಿ, ಅವಳ ಗೆಳತಿಯೊಬ್ಬಳು ನಮ್ಮ ಕಪ್ಪು ಹುಡುಗಿಗೆ ಫೇರ್ ಅಂಡ್ ಲೌವ್ಲಿ ಕೊಡುತ್ತಾಳೆ, ಈ ಹುಡುಗಿ ಬಳಸುತ್ತಾಳೆ. ಅವಳ ತ್ವಚೆಯು ಗೌರವರ್ಣ ಪಡೆಯುತ್ತಾ ಬಂದಂತೆ ಅವಳು ಆತ್ಮವಿಶ್ವಾಸದಿಂದ ತನ್ನ ಪ್ರತಿಭೆಯನ್ನು ಅತ್ಯದ್ಭುತವಾಗಿ ಪ್ರದರ್ಶಿಸುತ್ತಾಳೆ. ಜಗತ್ತೇ ಬೆರಗಾಗುತ್ತದೆ. ಈ ಲೌವ್ಲೀ ಜಾಹಿರಾತಿಗೆ ಮರಳಾದವರಿಗೆ ಫೇರ್ ಅಲ್ಲದ ವಿಷಯಗಳಿವೆ ಇಲ್ಲಿ. ಕಪ್ಪು ತ್ವಚೆಯುಳ್ಳವರ ಆತ್ಮವಿಶ್ವಾಸ ಮೊಳೆಯುವುದು ಅವರ ಬಣ್ಣದ ಬದಲಾವಣೆಯಿಂದಲೇ? ಪ್ರತಿಭೆ, ಆತ್ಮವಿಶ್ವಾಸ ಎಂಬುದು ಬಣ್ಣದ ಅಧೀನವಾದರೆ, ನಿಮ್ಮ ಆತ್ಮಾಭಿಮಾನದ ಬಗ್ಗೆ ನನ್ನ ಪ್ರಶ್ನೆ ಏಳುತ್ತದೆ! ಕಪ್ಪು ಚರ್ಮದ ಬಗ್ಗೆ ಕೀಳರಿಮೆ ಏಕೆ? ಗೌರವರ್ಣವನ್ನು ಶ್ರೇಷ್ಠವೆಂದೂ, ಲೌವ್ಲಿಯೆಂದೂ ಅನುಮೋದಿಸುವುದೇಕೆ?

ಅಮೆರಿಕಾ, ಇಂಗ್ಲಿಷ್ ರಾಷ್ಟ್ರಗಳಲ್ಲಿ ಇದ್ದಂತಹ ವರ್ಣಭೇದ ನೀತಿ ನಮ್ಮ ಭಾರತದಲ್ಲಿ ಬೇರೆ ರೀತಿಯೇ ವ್ಯಕ್ತವಾಗುತ್ತದೆ. ಅದು ಇನ್ನೂ ಚಾಲ್ತಿಯಲ್ಲಿದೆ, ಆದರೆ ಅದು ಹೊದ್ದುಕೊಂಡಿರುವ ಮುಸುಕು ಲೌವ್ಲಿಯಾಗಿದೆ. ಫೇರ್ ಅಂಡ್ ಲೌವ್ಲಿಯ ಗುಲಾಮಗಿರಿ ಇದು.

ನಮ್ಮ ಪುರಾಣದ ಗೌರಿಗೂ ಒಂದು ಫೇರ್ ಅಂಡ್ ಲವ್ಲಿಯ ಹಿನ್ನೆಲೆಯಿದೆ.

ಶಿವನು ತನ್ನ ಹೆಂಡತಿಯಾದ ಪಾರ್ವತೀದೇವಿಯನ್ನು ಅವಳ ಕಪ್ಪು ವರ್ಣದ ಕಾರಣ ಅನೇಕ ಬಾರಿ ಅಥವಾ ಬಾರಿಬಾರಿಗೂ ಕಾಳೀ ಅಥವಾ ಕರಿಪೀ ಎಂದು ನಿಂದಿಸಿರುವ ನಿದರ್ಶನಗಳು ಅನೇಕ ಪುರಾಣಗಳಲ್ಲಿ ಕಾಣಬರುತ್ತವೆ. ಹೀಗೆ ತನ್ನ ಗಂಡನಿಂದ ನಿಂದನೆಗೊಳಗಾದ ಪಾರ್ವತಿಯು ತಪಸ್ಸನ್ನಾಚರಿಸಿ ಗೌರವರ್ಣವನ್ನು ಪಡೆದು ಗೌರಿಯಾದಳು!

ಆ ಕತೆ ವಿಶ್ವಯೋನಿಯ ಪರಿಕಲ್ಪನೆಯನ್ನು ಉಳ್ಳಂತಹ ಪುರುಷರ ವಿರೋಧ ಮನೋಭಾವದವರು ಎಂದು ನನಗೆ ಅನ್ನಿಸುತ್ತದೆ. ಇಲ್ಲಿ ಗೌರಿಯು ಗಂಡನ ನಿಂದನೆಯನ್ನು ಅನುಭವಿಸುತ್ತಾಳೆ. ಅವನ ನಿರೀಕ್ಷೆಯನ್ನು ಮುಟ್ಟಲು ತಪಸ್ಸನ್ನು ಮಾಡುವಳು. ಅವನಿಗೆ ಬೇಡವಾದ ಅಥವಾ ಅವನ ನಿಂದನೆಗೆ ಗುರಿಯಾದ ಗುಣವನ್ನು ಕಳಚಿಕೊಳ್ಳುವಳು. ಅವನು ಮೆಚ್ಚುವಂತಹ ರೂಪವನ್ನು ಪಡೆದುಕೊಂಡಳು. ಇಲ್ಲಿ ಗೌರಿಯ ಸಾರ್ಥಕತೆಯು ಬಾಗುವುದರಲ್ಲಿದೆ. ಬಾಗಿ ತನ್ನತನದ ಗುಣವನ್ನೇ ಗೆಲ್ಲುವುದರಲ್ಲಿದೆ. ಇಲ್ಲಿ ನಮಗೆ

ಸಮಾಜವು ನೈಸರ್ಗಿಕವಾದ ಪ್ರಕೃತಿಯನ್ನು ಮಣಿಸುವ ಬಗೆಗಳು ಅನೇಕ. ಅವುಗಳಿಗೆ ನಮ್ಮ ಪುರಾಣಗಳ ನಿದರ್ಶನಗಳು ಮಹಾಸಾಕ್ಷಿ.

ಶಿವ ಮತ್ತು ಪಾರ್ವತಿಗೆ ನೃತ್ಯ ಸ್ಪರ್ಧೆ. ಶಿವ ಮತ್ತು ಪಾರ್ವತಿ ಇಬ್ಬರೂ ಅದ್ಭುತ ನೃತ್ಯಪಟುಗಳು, ಇಬ್ಬರೂ ಸರಿಸಮಾನವಾಗಿ ನರ್ತಿಸುತ್ತಿದ್ದಾರೆ. ಶಿವನಿಗೆ ತಾನೇ ಸೋಲುವ ಭಯವಾಗಿದೆ. ಅದಕ್ಕೆ ತನ್ನ ಕಾಲನ್ನು ಊರ್ಧ್ವಮುಖವಾಗಿ ಮೇಲೆತ್ತಿ ನರ್ತಿಸುತ್ತಾನೆ. ಹೆಣ್ಣಾದ ಸಂಕೋಚದಿಂದ ಪಾರ್ವತಿಯು ಹಾಗೆ ಮಾಡಲಾಗದೇ ಸೋಲನ್ನು ಒಪ್ಪುತ್ತಾಳೆ.

ಪ್ರಕೃತಿಯಲ್ಲಿ ಲಜ್ಜೆ ಸಂಕೋಚ, ನಾಚಿಕೆ, ಸ್ತ್ರೀಯಾದವಳು ಕಾಲನ್ನೆತ್ತುವುದು ಅಶ್ಲೀಲ; ಇವೇನಿಲ್ಲ. ಇವೇನಿದ್ದರೂ ನಾಗರಿಕ ಸಮಾಜದ್ದು. ಮಾನವ ನಿರ್ಮಿತ ಸಮಾಜದ ಕೃತಕತೆಯು ನೈಸರ್ಗಿಕವಾದ ಪ್ರಕೃತಿಯನ್ನು ಮಣಿಯುವಂತೆ ಮಾಡುವುದೇ ಪುರುಷನ ದಬ್ಬಾಳಿಕೆಯ ಮನೋಧರ್ಮ!

ನೈಸರ್ಗಿಕವಾಗಿ ಯಾರೇ ಇದ್ದರೂ, ಅವರನ್ನು ಖಂಡಿಸುವ ಪ್ರವೃತ್ತಿ ಶಿಷ್ಟ ಸಮಾಜದ ನೇರ ಗುಣ.

ನಮ್ಮ ದೇಶದಲ್ಲಿ ನೈಸರ್ಗಿಕವಾಗಿ ಪ್ರಕೃತಿಯ ಮಕ್ಕಳಾಗಿದ್ದ ನಿವಾಸಿಗಳಿಗೂ, ಶಿಷ್ಟ ಆರ್ಯ ಸಮಾಜದ ಅಧಿಕಾರಿ ಶಾಹಿಗಳಿಗೂ ನಡೆದ ಸಂಘರ್ಷದ ಕತೆಯಾಗಿ ರಾಮಾಯಣ ನನಗೆ ಕಾಣುತ್ತದೆ.

ಶೂರ್ಪನಖಿ ಪ್ರಕೃತಿಯಲ್ಲಿ ನೈಸರ್ಗಿಕವಾಗಿದ್ದ ಅಸುರಳು. ಎಲ್ಲದರಲ್ಲಿ ಮುಕ್ತವಾಗಿರುವುದೇ ಅವರ ಮೂಲಗುಣ. ಗೋದಾವರಿ ನದಿಯ ತೀರದಲ್ಲಿ, ದಂಡಕಾರಣ್ಯದಲ್ಲಿ ವನವಾಸಕ್ಕೆ ಬಂದಿದ್ದ ರಾಮನು ಅವಳಿಗೆ ಕಂಡ. ಅವನ ರೂಪಕ್ಕೆ ಮನಸೋತ ಅವಳು ಅವನಲ್ಲಿ ಮಿಲನಕ್ಕಾಗಿ ಹಾತೊರೆದಳು. ಸೀತೆಯನ್ನು ತೋರಿದ ರಾಮ ತಾನು ಏಕಪತ್ನಿ ವ್ರತನೆಂದು ಹೇಳಿಕೊಂಡ. ಅವಳಿಗೆ ಅದು ಅಸಂಬದ್ಧ. ಒತ್ತಾಯಿಸಿದಳು. ಹೆಣ್ಣಿನ ಜೊತೆಯಿಲ್ಲದೇ ಇರುವ ಲಕ್ಷ್ಮಣನನ್ನು ತೋರಿದ ರಾಮ. ಲಕ್ಷ್ಮಣನೂ ನಿರಾಕರಿಸಿದ. ಸೀತೆಯಿಂದಾಗಿ ತನ್ನ ಆನಂದಕ್ಕೆ ಭಂಗ ಉಂಟಾಯಿತೆಂದು ಶೂರ್ಪನಖಿ ಸೀತೆಯ ಮೇಲೇರಿ ಹೋಗಲು ಲಕ್ಷ್ಮಣ ಅವಳನ್ನು ಶಿಕ್ಷಿಸಿ ಕಳುಹಿಸಿದ.

ಇನ್ನೂ ಕೆಲವು ಬೇರೆ ಪ್ರತಿಗಳಲ್ಲಿ ಶೂರ್ಪನಖಿಯು ನಿನ್ನ ಅಣ್ಣನೇ ನನ್ನ ಕಳುಹಿಸಿದ ಎಂದು ಲಕ್ಷ್ಮಣನನ್ನು ಸಮೀಪಿಸುತ್ತಾಳೆ. ಅದನ್ನು ನಂಬದ ಲಕ್ಷ್ಮಣ ಸಾಕ್ಷಿ ಕೇಳುತ್ತಾನೆ.

ರಾಮನಿಗೆ ಸ್ತ್ರೀಯನ್ನೂ ದಂಡಿಸುವ ಪಾಠವಾಗಿದ್ದು ವಿಶ್ವಾಮಿತ್ರನಿಂದ. ಶರೀರದ ಕಾಮನೆಯ ಪ್ರಕೃತಿಯನ್ನು ಗೆಲ್ಲುವ ತನ್ನ ಹಟದ ಪೌರುಷವು ಪ್ರಕೃತಿಯ ಹೆಣ್ಣಿಂದಲೇ ಭಂಗವಾಗಿದ್ದು ನೆನಪಿರಲಿ.

ವಿಶ್ವಾಮಿತ್ರನ ಆಶ್ರಮದಲ್ಲಿ ನಡೆಯುವ ಯಜ್ಞಯಾಗಾದಿಗಳಿಗೆ ತಾಟಕಿ ಎಂಬ ಅಸುರ ಕುಲದ ಹೆಣ್ಣು ಉಪದ್ರವ ಕೊಡುತ್ತಿದ್ದಳಂತೆ. ಧರ್ಮ ರಕ್ಷಕ, ಶಿಷ್ಟ ಜನಪಾಲಕ ರಾಮನಲ್ಲಿ ವಿಶ್ವಾಮಿತ್ರ ದೂರನ್ನೊಯ್ದ. ಆದರೆ, ತಾಟಕಿಯು ಹೆಣ್ಣಾದ ಕಾರಣ ತಾನು ಕೊಲ್ಲಲು ನಿರಾಕರಿಸಿದ ರಾಮನಿಗೆ ವಿಶ್ವಾಮಿತ್ರ ಪಾಠ ಮಾಡಿದ. ದುರ್ಬಲರನ್ನು ರಕ್ಷಿಸಲು ಧರ್ಮಕಾರ್ಯಗಳಿಗೆ ಅಡ್ಡಿಯೊಡ್ಡುವ ಹೆಣ್ಣನ್ನು ಕೊಲ್ಲುವುದರಲ್ಲಿ ದೋಷವಿಲ್ಲ! ಸರಿ, ರಾಮ ತಾಟಕಿಯೆಂಬ ಹೆಣ್ಣನ್ನು ಕೊಂದ. ಶೂರ್ಪನಖಿ ಎಂಬ ಹೆಣ್ಣನ್ನು ಘಾಸಿಗೊಳಿಸುವ ಆಜ್ಞೆ ನೀಡಿದ. ಸೀತೆ ಎಂಬ ಗರ್ಭಿಣಿ ಹೆಣ್ಣನ್ನು ಕಾಡಿಗಟ್ಟಿದ.

ಪ್ರಕೃತಿಯ ಹೆಣ್ಣಿಗೆ ಕೊಡುವ ವಚನಕ್ಕೆ ಮಾನ್ಯತೆಯಿಲ್ಲ, ಒಬ್ಬ ಋಷಿಗೆ ಕೊಡುವ ಮಾತಿಗೆ ಎಷ್ಟು ಪ್ರಾಮುಖ್ಯತೆ ಕೊಡುತ್ತದೆ ಈ ಪುರುಷ ನಿರ್ಮಿತ ಧರ್ಮ ಎಂಬುದನ್ನು ನೋಡಿ.

ಸತ್ಯ ಹರಿಶ್ಚಂದ್ರನು ತಾನು ವಿಶ್ವಾಮಿತ್ರನಿಗೆ ದಾನ ನೀಡುವ ಧರ್ಮಕ್ಕೆ ಬದ್ಧನಾಗಿ ಎಲ್ಲವನ್ನೂ ಕೊಟ್ಟು ಕಳಕೊಂಡು ತನ್ನ ಪತ್ನಿ ಚಂದ್ರಮತಿಯೊಡನೆ ಕಾಶಿಗೆ ಬಂದ. ಮಾರುಕಟ್ಟೆಯಲ್ಲಿ ದಾಸಿಯನ್ನಾಗಿ ತನ್ನ ಹೆಂಡತಿಯನ್ನು ಮಾರಿದ. ಚಂದ್ರಮತಿಯ ಪಾಣಿಗ್ರಹಣದ ಸಮಯದಲ್ಲಿ (ಧರ್ಮೇಚ, ಅರ್ಥೇಚ, ಕಾಮೇಚ ನಾತಿಚರಾಮಿ) ತನ್ನ ಹೆಂಡತಿಯ ಕೈಯನ್ನೂ ಬಿಡುವುದಿಲ್ಲ ಎಂದು ಮಾಡಿದ ವಾಗ್ದಾನದ ಕಥೆ ಏನಾಯಿತು?

ಗಾಂಧೀಜಿಗೆ ಸತ್ಯ ಹರಿಶ್ಚಂದ್ರನಾಗಲಿ ಅಥವಾ ರಾಮನಾಗಲಿ ಹೇಗೆ ಆದರ್ಶ ಪ್ರಾಯರಾದರೆಂದು ನನಗೆ ಈಗಲೂ ಕಾಡುವ ಪ್ರಶ್ನೆಯಾಗಿದೆ.

ಸಮಾಜದಲ್ಲಿ ನೈಸರ್ಗಿಕವಾಗಿ ಪ್ರಕೃತಿಯ ತತ್ವಗಳನ್ನೇ ಪ್ರತಿನಿಧಿಸಿದ ಸ್ತ್ರೀಯರು ಏನೇನೆಲ್ಲಾ ಅನುಭವಿಸಿದರು ಹಾಗೂ ಅವೆಲ್ಲಾ ಬವಣೆಗಳ ನಡುವೆ ಗೌರಿ ಎಂಬ ಸ್ತ್ರೀಮೂರ್ತಿ ಹೇಗೆ ಆರಾಧನೆಗೊಳಗಾಯಿತು ನಿಜಕ್ಕೂ ಅಧ್ಯಯನ ಯೋಗ್ಯ ವಿಷಯ. ●

ಬಂಗಾರಪ್ಪನ ಹೆಸರೇಳಿದರೆ ಹುಷಾರ್!

ಥೂತ್ತೇರಿ

ಧಾರವಾಡದಲ್ಲಿ ನಡೆದ ಸಾಹಿತ್ಯ ಸಂಭ್ರಮದಲ್ಲಿ ನಮ್ಮ ಸಂತೆಶಿವರದ ಚೆಡ್ಡಿ ಭೈರಣ್ಣ ಭಾಗವಹಿಸಿದ್ದು ನಂದಿ ಮಾರ್ಕಿನ ಪತ್ರಿಕೆಗೆ ವೈಯಕ್ತಿಕವಾದ ಸಂಭ್ರಮದಂತೆ ಕಾಣುತ್ತಿದೆಯಲ್ಲಾ, ಏಕೆಂದರೆ ಬಿಜೆಪಿ ಅಥವಾ ಆರೆಸ್ಸೆಸ್ ಸಭೆಯ ಅಧ್ಯಕ್ಷತೆಗೆ ಹೇಳಿಮಾಡಿಸಿದಂತಿರುವ ಚೆಡ್ಡಿ ಭೈರಣ್ಣ ಧಾರವಾಡದ ಸಾಹಿತ್ಯ ಸಂಭ್ರಮಕ್ಕೆ ಹಾಜರಾದಕೂಡಲೇ ಸಭೆ ಸ್ತಬ್ಧವಾಗಿ, ಭೈರಣ್ಣನನ್ನು ನೋಡಿದ್ದೂ ಅಲ್ಲದೆ ಕೆಲಹೊತ್ತು ಸಭೆಯೇ ಅಸ್ತವ್ಯಸ್ತವಾಗಿ ಅನಂತಮೂರ್ತಿ, ಚಂಪಾ ಕೂಡ ಅದ್ವಾನಿ, ರಾಜನಾಥಸಿಂಗ್, ಮೋದಿ ಕಡೆಗೆ ಕೈಚಾಚದಂತೆ ಹಸ್ತಲಾಘವ ಮಾಡಿದ್ದಂತೂ ನಂದಿ ಮಾರ್ಕಿಗೆ ಸಂಭ್ರಮದ ಸುದ್ದಿಯಾಯ್ತಂತಲ್ಲಾ, ಸದರಿ ಪತ್ರಿಕೆ ಹಿಡಿದ ಚೆಡ್ಡಿಗಳು ಖುಷಿಯಿಂದ ಇಡೀ ಕರ್ನಾಟಕದಲ್ಲಿ ಸಿಕ್ಕ ಸಿಕ್ಕವರಿಗೆಲ್ಲಾ ತೋರಿಸುತ್ತ "ನೋಡ್ರಿ, ನಮ್ಮ ಭೈರಪ್ಪ ಧಾರವಾಡದ ಸಾಹಿತಿಗಳ ಹಿಂದಿನಲ್ಲಿ ಹೇಗೆ ಮಿಂಚುತ್ತಿದ್ದಾರೆ. ಮೊದಲು ಅವರ ಸಂದರ್ಶನ ಓದಿ. ನಂತರ ಬೇಕಿದ್ದರೆ ನಮ್ಮಲ್ಲಿ ಸ್ಟಾಕಿರುವ 'ಆವರಣ' ಪ್ರತಿ ಕೊಡುತ್ತೇವೆ. ಕೇವಲ ಐವತ್ತು ಪರಸೆಂಟ್ ಡಿಸ್‌ಕೌಂಟ್" ಎಂದವಂತಲ್ಲಾ, ಥೂತ್ತೇರಿ!

* * **

ಅಂತಂತವರೇ ಸೇರಿಕೊಂಡು ಅಂತರಗಟ್ಟೆ ಜಾತ್ರೆ ಮಾಡಿದರೆ ಇನ್ನೇನಾದೀತು ಎಂಬಂತೆ ಸಾಹಿತ್ಯ ಸಂಭ್ರಮದಲ್ಲಿ ನಡೆದ ಕೆಲ ಗೋಷ್ಠಿಗಳಲ್ಲಿ ಅವರೇ ಇದ್ದರಂತಲ್ಲಾ, ಅಂದರೆ ಧಾರವಾಡದ ಅಟ್ಟದಲ್ಲಿ ಸೇರುತ್ತಿದ್ದವರ ಮಕ್ಕಳಂತಿದ್ದವರೇ ಸೇರಿಕೊಂಡು ಇಡೀ ಸಂಭ್ರಮದಲ್ಲಿ ಹುಡುಕಿದರೂ ಒಬ್ಬ ಸಾಬಿ ಇರಲಿಲ್ಲವಂತಲ್ಲ. ಇದೆಲ್ಲಕ್ಕಿಂತ ಮುಖ್ಯವಾಗಿ ಸತ್ತ ಹೂ.ವೆ. ಶೇಷಾದ್ರಿಯನ್ನು ನೆನಪಿಸುವಂತೆ ಮಾತನಾಡ ತೊಡಗಿದ ಸಂತೆ ಶಿವರದ ಭೈರಣ್ಣ "ನೀವು ಮಡೆಸ್ನಾನ ನಿಲ್ಲಿಸಿ. ಕೂಡಲೇ ಇನ್ನೊಂದು ಸ್ನಾನ ಶುರುವಾಗುತ್ತೆ. ಆದ್ದರಿಂದ ಹಿಂದೂ ಧರ್ಮದ ಕಂದಾಚಾರದ ಸುದ್ದಿಗೆ ಹೋಗಬೇಡಿ" ಎಂಬಂತೆ ಕೊರೆದನಂತಲ್ಲಾ. ಇದೆಲ್ಲಕ್ಕಿಂತ ಮಜಾ ಎಂದರೆ ಕಳೆದ ಶತಮಾನದ ಮಧ್ಯಭಾಗದಿಂದ ಇಲ್ಲಿಯವರೆಗೆ ಸುಳ್ಳನ್ನೇ ಬೊಗಳುತ್ತ ಸುಳ್ಳನ್ನೇ ಬರೆಯುತ್ತ ಸುಳ್ಳಿನಲ್ಲೇ ಬದುಕುತ್ತಿರುವ ಭೈರಣ್ಣ "ಸತ್ಯ ಬಿಟ್ಟು ದೇಶ ಕಟ್ಟಲು ಸಾಧ್ಯವೇ ಇಲ್ಲ" ಎಂದು ಘೋಷಿಸಿದನಂತಲ್ಲ. ಈ ಮಾತು ಕೇಳಿದ ಕೂಡಲೇ ಸಭಾಂಗಣದ ಸೆಕ್ಯುಲರ್ ಮನಸ್ಸುಗಳು ನಿಧಾನವಾಗಿ ಎದ್ದು ಜಾಗ ಖಾಲಿ ಮಾಡಿದವಂತಲ್ಲಾ, ಇಂತಹ ಸರಿಬುದ್ಧಿಗೆ ಬದಲು "ಮಿಸ್ಟರ್ ಭೈರಪ್ಪ ನಿನ್ನ ಧರ್ಮಶ್ರೀ, ಸಾರ್ಥ, ಆವರಣ ಸುಳ್ಳಿನ ಕಂತೆ. ನಿನ್ನ ಕುತಂತ್ರಗಳನ್ನೆಲ್ಲಾ ಇಲ್ಲಿ ತಂತ್ರವೆಂದು ಪ್ರತಿಪಾದಿಸಬೇಡ. ಈ ಭಾರತ ಕಷ್ಟಪಟ್ಟು ಕಾಪಾಡಿಕೊಂಡು ಬಂದಿರುವ ಜಾತ್ಯತೀತ ಮನೋಭಾವಕ್ಕೆ ಬೆಂಕಿ ಇಡುವುದಕ್ಕಿಂತ ಎಲ್ಲಾದರೂ ಮರೆಯಾಗು" ಎಂದು ಕೂಗಿ ಹೇಳುವ ಗಂಡು ದನಿಯೊಂದು ಧಾರವಾಡದ ಸಂಭ್ರಮದಲ್ಲಿ ಕಾಣಿಸಿಕೊಳ್ಳಲಿಲ್ಲವಲ್ಲಾ, ಥೂತ್ತೇರಿ!!

* * **

ಕೊಡಗಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ನಾ. ಡಿಸೋಜ ಎಂಬ ಸಜ್ಜನ ವ್ಯಕ್ತಿ ಸಕಾರಣವಾಗಿಯೇ ಭೈರಪ್ಪನನ್ನು ಟೀಕಿಸಿದ್ದರಿಂದ ಶ್ಯಾನೆ ಸಿಟ್ಟಾಗಿರುವ ಮಾಸ್ಟರ್ ಹಿರಣ್ಣಯ್ಯ ಎಂಬ ಮಹಾ ಮಾತುಗಾರ ತನ್ನ ಎಂದಿನ ಹರಕು ಬಾಯನ್ನ ಇನ್ನೂ ಅಗಲ ಮಾಡಿಕೊಂಡಿದ್ದಾನಂತಲ್ಲಾ, ಹೇಳಿಕೇಳಿ ನಾಟಕ ಆಡುವ ನೆಪದಲ್ಲಿ ಸ್ಟೇಜಿನ ಮೇಲೆ ನಿಂತು ತನಗಾಗದ ಜಾತಿಗಳನ್ನು ಬಾಯಿಗೆ ಬಂದಂತೆ ಟೀಕಿಸಿ, ಬ್ರಾಹ್ಮಣ ಸಂಘ ಸ್ಥಾಪಿಸಿ, ಅದರ ಉದ್ಧಾರಕ್ಕಾಗಿ ಅವಿರತವಾಗಿ ಶ್ರಮಿಸುತ್ತಿರುವ ಈ ಹಿರಣ್ಣಯ್ಯ ಭೈರಪ್ಪನನ್ನು ಯಾರಾದರೂ ಟೀಕಿಸಿದರೆ ಸುಮ್ಮನಿದ್ದಾನ. ಕವಲುದಾರಿಗಳಲ್ಲಿ ಕೆಲಸ ಮಾಡುವಂತೆ ಕಾಣುವ ಭೈರಪ್ಪ ಮತ್ತು ಹಿರಣ್ಣಯ್ಯನ ಅಜೆಂಡಾ ಒಂದೇ ಆಗಿದ್ದರೂ ವರಸೆಗಳು ಬೇರೆಯಾದ್ದರಿಂದ ಇಬ್ಬರ ತಂತ್ರವನ್ನರಿಯಲು ಇಷ್ಟು ವರ್ಷ ಬೇಕಾಯ್ತಲ್ಲಾ ಎಂದು ಶೂದ್ರರು ಹಣೆ ಗಟ್ಟಿಸಿಕೊಳ್ಳುವಂತಾಗಿದೆಯಲ್ಲಾ, ಥೂತ್ತೇರಿ!!!

* * **

"ಬಂಗಾರಪ್ಪನವರ ಹೆಸರನ್ನ ಬಳಸಿಕೊಂಡು ಯಾರಾದರೂ ರಾಜಕಾರಣ ಮಾಡಿದ್ದಾದರೆ, ಹುಷಾರು" ಎಂಬ ಎಚ್ಚರಿಕೆಯನ್ನು ಕೊಟ್ಟಿರುವ ಮಧು ಬಂಗಾರಪ್ಪನವರನ್ನು ಮಾತನಾಡಿಸಿ ಕಾರಣ ತಿಳಿಯಬೇಕೆನ್ನಿಸಿತಲ್ಲಾ, ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: 'ಬಂಗಾರಿ ಯಾರೆ ನೀನು ಬುಲ್‌ಬುಲ್'

"ಹಲೋ ಯಾರ್ರಿ?"

"ನಾನು ಸಾರ್, ಬಂಗಾರಪ್ಪನ ಅಭಿಮಾನಿ, ಯಾಹು ಅಂತ."

"ಏನು ಮಾಡ್ತಯಿದ್ದಿರಿ?"

"ಪತ್ರಕರ್ತ ಆಗಿದ್ದಿನಿ ಸಾರ್."

"ಯಾವ ಪತ್ರಿಕೆ?"

"ಗೌರಿ ಲಂಕೇಶ್ ಪತ್ರಿಕೆ ಸಾರ್."

"ಗೌರಿ ಲಂಕೇಶ್ ಪತ್ರಿಕೆಲಿದ್ದು ಲಂಕೇಶ್ ಅಭಿಮಾನಿ ಯಾಗದೆ ಬಂಗಾರಪ್ಪನ ಅಭಿಮಾನಿ ಯಂಗಾದ್ರಿ?"

"ಅದೂ ಬಂಗಾರಪ್ಪ ಹಿಂದುಳಿದ ವರ್ಗದ ನಾಯಕನಾಗಿದ್ದಾಗ ಅವರ ಅಭಿಮಾನಿಯಾಗಿದ್ದೆ. ಸಾರ್.



ಆಮೇಲೆ ಬಂಗಾರಪ್ಪನ ದಾರೀನೆ ಸರಿಯಲ್ಲ ಅನ್ನುಸ್ತು. ಅಂಗಾಗಿ ಈಗ ನಾನವರ ಮಾಜಿ ಅಭಿಮಾನಿ."

"ಅವರ ನಿಜವಾದ ಅಭಿಮಾನಿ ಅಂತ ಎಲ್ಲಾದ್ರು ಅವರ ಹೆಸರೇಳಿಕೊಂಡು ಅವರ ಹೆಸರನ್ನು ದುರುಪಯೋಗ ಮಾಡಿಕೊಬೇಡ್ರಿ, ಹುಷಾರು."

"ಇದೇನು ಸಾರ್ ಕಾಂಗ್ರೆಸ್ಸಿನೋರಿಗೆ ಎಚ್ಚರಿಕೆ ಕೊಟ್ಟಂಗೆ ನನಿಗೆ ಕೊಡ್ತಿರಲ್ಲಾ, ಯಾಕೆ ಸಾರ್? ನಾನೇನು ನಿಮ್ಮಣ್ಣ ಕುಮಾರ ಬಂಗಾರಪ್ಪನೆ?"

"ನೋಡ್ರಿ, ಯಾರೇ ಆಗ್ಲಿ ನಮ್ಮ ತಂದೆ ಹೆಸರನ್ನ ದುರುಪಯೋಗಮಾಡಿಕೊಂಡ್ರೆ ನಾನು ಸಹಿಸಲ್ಲ."

"ಬಂ ಹೇಟೆಂಟ್ ನಿಮಗೆ ಸಿಕ್ಕಸ ಸಾರ್?"

"ಹೇಳಿದನ್ನ ಅರ್ಥಮಾಡಿಕೊಳ್ಳಿ, ನಮ್ಮ ತಂದೆ ಹೆಸ... ಎಲ್ಲೂ ಬಳಸಬೇಡ್ರಿ."

"ಮಧು ಬಂಗಾರಪ್ಪನವರೆ ನೀವು ಹುಟ್ಟಿದಕ್ಕಿ... ಮೊದಲಿಂದ್ಲೂ ನಾನು 'ಬಂ' ಅಭಿಮಾನಿಯಾಗಿದ್ದೆ. ಯಾಕಂ... ಅವರೊಬ್ಬ ವಿಶಿಷ್ಟ ರಾಜಕಾರಣಿ. ಒಂದು ತರದಲ್ಲಿ ತಿಕ್ಕಲ... ರಾಜಕಾರಣಿ ಅಂತ್ಲೂ ಹೇಳಬಹುದು."

"ತಿಕ್ಲು ಗಿಕ್ಲು ಅಂತ ಮಾತಾಡಬೇಡಿ, ಹುಷಾರು."

"ತಿಕ್ಲು ಅಂದ್ರೆ, ಕ್ರಿಯಾಶೀಲತೆ ಮತ್ತು ಹುಮ್ಮಸ್ಸು... ಸಾರ್. ಅವರೊಂದು ಸತಿ ಕ್ಷೇತ್ರದಲ್ಲಿದ್ದೂ ಯಾರನ್ನೂ... ಓಟು ಕೇಳದೆ ಗೆದ್ದು ಬಂದ್ರು. ಇನ್ನೊಂದು ಸಾರಿ ಕ್ಷೇತ್ರ... ಹೋಗದೆ ಈ ನಾಡನ್ನು ತಿರುಗಿ ಗೆದ್ದುಬಂದ್ರು. ಅವ... ದೀರ್ಘ ರಾಜಕಾರಣದಲ್ಲಿ ಒಂದು ಮೂರೋರ್ಷ ಮಂತ್ರಿ... ಎರಡೂರ್ಷ ಮುಖ್ಯಮಂತ್ರಿಯಾಗಿದ್ರು ಅಷ್ಟೆ. ಆದ್ರು ಎರಡು... ಬಾರಿ ಪಾರ್ಟಿ ಕಟ್ಟಿ, ಸಮಾವೇಶಗಳನ್ನು ಮಾಡಿ, ರಾಜ್ಯ... ತಿರುಗಿ, ನಾನು ಎಂಜಿನ್ನೇ ಹೊರತು ಬೋಗಿಯಲ್ಲ ಅಂತ... ಉಗಿಬಂಡಿ ನಡೆಸಿದ್ರು. ಆ ಉಗಿಬಂಡಿಗೆ ಅಷ್ಟು ವರ್ಷ... ಇಜ್ಜಲು ತುಂಬಿಸಿದ್ದು ಯಾರು ಗೊತ್ತೆ ಸಾರ್?"

"ಯಾರೂ?"

"ಕಾಂಗ್ರೆಸ್ ಪಾರ್ಟಿ."

"ಆ ಕಾಂಗ್ರೆಸ್ ಪಾರ್ಟಿ ಹೆಸರೆತ್ತಬೇಡಿ. ಸಿಟ್ಟು ಬರುತ್ತೆ."

"ಬರಲ್ವ ಸಾರ್? ಬರ್ಲೆ ಬೇಕು. ಯಾಕೆ ಅಂದ್ರೆ... ಕಾಂಗ್ರೆಸ್‌ನಿಂದ್ಲೆ ನಿಮ್ಮ ತೋಳಿಗೆ ಶಕ್ತಿ ಬಂದಿರೋದು... ಬಂಗಾರಪ್ಪನ್ನ ಮೊಟ್ಟ ಮೊದಲು ಮಂತ್ರಿ ಮಾಡಿದ್ದು... ಕಾಂಗ್ರೆಸ್ಸು. ಮುಖ್ಯಮಂತ್ರಿ ಮಾಡಿದ್ದೂ ಕಾಂಗ್ರೆಸ್ಸು. ಪಾರ್ಟಿ... ಪ್ರೆಸಿಡೆಂಟ್ ಮಾಡಿದ್ದು ಮತ್ತು ಲೋಕಸಭಾ ಸದಸ್ಯ... ಮಾಡಿದ್ದೂ ಕಾಂಗ್ರೆಸ್ಸು. ಇದೆಲ್ಲದಕ್ಕಿಂತ್ಲೂ ಅವರು... ಮುಖ್ಯಮಂತ್ರಿಯಾಗಿದ್ದಾಗ ಎರಡು ವರ್ಷ ಎಂಥಾ ಕೊ... ರಾಜಕಾರಣ ಮಾಡಿದ್ರು ಅಂದ್ರೆ ಸ್ವಪಾರ್ಟಿಯವರೇ ಹೆದರಿ... ಕೆಳಗಿಳಿಸಬೇಕಾಯ್ತು, ಆಗವರ ಸಪೋರ್ಟಿಗೆ ಯಾರೂ... ಬರಲಿಲ್ಲ."

"ಅದ್ಕೆ ಕಂಡ್ರಿ, ಆ ಕಾಂಗ್ರೆಸ್ಸು ನಮ್ಮ ತಂದೆನ ಹಾಳ... ಮಾಡ್ತು ಆ ಪಾರ್ಟಿ ಸರಿಲ್ಲ ಅಂತ ನಾನು ದ್ವೇಷ ಮಾಡದು."

"ನೋಡಿ ಮಧು, ತಲೆ ಕೂದಲನ್ನಷ್ಟೆ ಬೆಳೆ...

ಮಾನವನ ದುಷ್ಟತನವೂ, ಪ್ರಾಣಿಗಳ ಅಸಹಾಯಕತೆಯೂ

ಜನವರಿ 15, 2014ರ ಪತ್ರಿಕೆಯ ಮುಖಪುಟ ವರದಿ 'ನರಭಕ್ಷಕನಾ ನರಹಂತಕನಾ? ಹಸಿದ ಹುಲಿ, ಕುಪಿತ ಭೂಮಾತೆ!' ಓದಿದೆ. ಕಾಡುಪ್ರಾಣಿಗಳು ಕಳೆದ ಒಂದು ವರ್ಷದಿಂದೀಚೆಗೆ ನಿರಂತರವಾಗಿ ದಾಳಿ ಮಾಡಿ ಕಾಡಂಚಿನ ಗ್ರಾಮಗಳಲ್ಲಿ ಭಯದ ವಾತಾವರಣ ಸೃಷ್ಟಿಸಿವೆಯಲ್ಲದೇ ಈಗ ನಗರ ಪ್ರದೇಶಗಳಿಗೂ ದಾಳಿ ಮಾಡಿ ಕಾಂಕ್ರೀಟ್ ಕಾಡು ಪ್ರವೇಶಿಸುತ್ತಿವೆ. ಇದಕ್ಕೆಲ್ಲಾ



ಕಾರಣ ನಾವೇ ಅಲ್ಲವೆ? ಎಲ್ಲಾ ಪ್ರಾಣಿ-ಪಕ್ಷಿಗಳಿಗೂ ಮೀರಿ ಬೆಳೆದಿರುವ ಮನುಷ್ಯ ತನ್ನ ಬುದ್ಧಿವಂತಿಕೆಯನ್ನು ಉಪಯೋಗಿಸಿ ಮಾತನಾಡುವ ಶಕ್ತಿಯನ್ನು ಪಡೆದಿದ್ದಾನೆ. ಆದರೆ ಪ್ರಕೃತಿಯ ಮುಂದೆ ಮಾತ್ರ ಕುಬ್ಜನಾಗಿದ್ದಾನೆ. ಅಭಿವೃದ್ಧಿಯ ಹೆಸರಿನಲ್ಲಿ ತಾನು ತೋಡಿದ ಗುಂಡಿಗೆ ತಾನೇ ಬೀಳುತ್ತಿದ್ದಾನೆ. ಕಾಡು ಕಡಿದು ಪ್ರಾಣಿ-ಪಕ್ಷಿಗಳ ತಾಣವನ್ನು ಮಾನವ ಅಕ್ರಮವಾಗಿ ಒಂದಲ್ಲ ಒಂದು ರೀತಿಯಲ್ಲಿ ಆಕ್ರಮಿಸಿಕೊಳ್ಳುತ್ತಿರುವುದರಿಂದ ಅವುಗಳಿಗೆ ವಾಸಸ್ಥ ಬೇಡವೇ?

ಇದೆಲ್ಲದರ ಪರಿಣಾಮವಾಗಿ ಕಾಡಂಚಿನ ಗ್ರಾಮಸ್ಥರುಗಳು ಸದಾ ಭಯದ ನೆರಳಿನಲ್ಲಿ ಬದುಕುವಂತಾಗಿದೆ. ಆದುದರಿಂದ ಪ್ರಾಣಿಗಳ ದಾಳಿಗಳಿಂದ ಮನುಷ್ಯರನ್ನು ರಕ್ಷಿಸಲು ಶಾಶ್ವತ ಪರಿಹಾರ ನಿರ್ಮಿಸಬೇಕಿದೆ. ಆಗ ಅವೂ ಬದುಕುತ್ತವೆ. ನಾವೂ ಬದುಕಬಹುದು.


- ಕಾಳೀಹುಂಡಿ ಕೆ.ವಿ ಶಿವಕುಮಾರ್, ಮೈಸೂರು

'ಗುಜರಾತ್ ಅಭಿವೃದ್ಧಿ' ಎಂಬ ಭ್ರಮೆ

ತಮ್ಮ ಜನವರಿ 22ರ ಸಂಚಿಕೆಯಲ್ಲಿ ಡಾ.ಎಚ್.ವಿ.ವಾಸು ತಮ್ಮ ಅಂಕಣದಲ್ಲಿ ಬರೆದಿರುವಂತೆ "ಗುಜರಾತಿನಲ್ಲಿಯ ಅಭಿವೃದ್ಧಿ ಕೇವಲ ಕಾಗದದ ಮೇಲೆ ಮಾತ್ರ" ಎಂಬುದನ್ನು ಗುಜರಾತ್ ರಾಜ್ಯದಲ್ಲಿ ಬ್ಯಾಂಕ್ ಅಧಿಕಾರಿಯಾಗಿದ್ದು ಇತ್ತೀಚೆಗೆ ರಿಟೈರ್ ಆಗಿರುವ ನಾನೇ ಸ್ವತಃ ನೋಡಿದ್ದೇನೆ. ಮೋದಿಯ ಔದ್ಯಮಿಕ ಅಭಿವೃದ್ಧಿಯ ಅಬ್ಬರದ ಪ್ರಚಾರದ ಸದುಪಯೋಗಪಡಿಸಿಕೊಂಡು ಹಲವು ಕಪಟ ಗುಜರಾತಿ ಉದ್ಯಮಿಗಳು ಗುಜರಾತ್ ಸರ್ಕಾರವನ್ನು ಮತ್ತು ಗುಜರಾತ್ ಮೂಲದ ರಾಷ್ಟ್ರೀಕೃತ ಬ್ಯಾಂಕುಗಳಾದ ಬ್ಯಾಂಕ್ ಆಫ್ ಬರೋಡಾ ಹಾಗು ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಇವುಗಳನ್ನು ಮೋಸ ಮಾಡಿ ಕೋಟ್ಯಾಧೀಶರಾಗಿದ್ದಾರೆ. ವಿಪರ್ಯಾಸವೆಂದರೆ ಕಪಟ ಗುಜರಾತಿ ಉದ್ಯಮಿಗಳೊಂದಿಗೆ ಗುಟ್ಟಾಗಿ ಕೈಜೋಡಿಸಿ ಅವರಿಗೆ ಭಾರಿ ಸಾಲ ಕೊಟ್ಟಿದ್ದು ಈ ಎರಡೂ ಬ್ಯಾಂಕುಗಳ ಮಹಾಭ್ರಷ್ಟ ಮೇಲಧಿಕಾರಿಗಳಾದರೂ, ಈಗ ಕೆಲಸ ಕಳೆದುಕೊಂಡು ಬೀದಿಗೆ ಬೀಳುತ್ತಿರುವುದು ಕೆಳಹಂತದ ಬ್ರಾಂಚ್ ಮ್ಯಾನೇಜರ್‌ಗಳು. ಯಾಕೆಂದರೆ ಭ್ರಷ್ಟ ಮೇಲಧಿಕಾರಿಗಳು ಫೇಕೂ ಉದ್ಯಮಿಗಳಿಗೆ ಯಾವುದೇ ಸೆಕ್ಯೂರಿಟಿ ಇಲ್ಲದೇ ಭಾರಿ ಸಾಲ ಕೊಡಲು ಕೆಳಹಂತದ ಅಮಾಯಕ ಬ್ರಾಂಚ್ ಮ್ಯಾನೇಜರುಗಳಿಗೆ ಕೊಟ್ಟ ಮೌಖಿಕ ಆದೇಶಗಳಿಗೆ ದಾಖಲೆಗಳಿಲ್ಲವಲ್ಲಾ! ದಾಖಲೆಗಳು ಹೇಳುವುದೇನೆಂದರೆ ಬ್ರಾಂಚ್ ಮ್ಯಾನೇಜರ್ ತಾನೇ ನೇರವಾಗಿ ಸಾಲ ಕೊಟ್ಟಿದ್ದು. ಹಾಗಾಗಿ ಅವನೇ ತಪ್ಪಿತಸ್ಥ ಎಂದು. ಮಂಗ ತಾನು ಬೆಣ್ಣೆ ತಿಂದು ಕುರಿಯ ಬಾಯಿಗೆ ಒರೆಸಿದಂತೆ!

ಮೊದಲೆಲ್ಲಾ ಉತ್ತರ ಪ್ರದೇಶ ಮತ್ತು ಬಿಹಾರದ ಬ್ಯಾಂಕು ಶಾಖೆಗಳು ತಮ್ಮ ದಕ್ಷಿಣ ಭಾರತದ ಶಾಖೆಗಳ ಮೇಲೆ 8,200 ರೂಪಾಯಿಯ ಡಿ.ಡಿ. ಇಷ್ಯೂ ಮಾಡಿ ಆದನ್ನು ಆ ಶಾಖೆಯ ಖದೀಮ ಸಿಬ್ಬಂದಿಗಳೇ ರೂ. 80,200/ ಎಂದು ಕೆಮಿಕಲ್‌ನಿಂದ ತಿದ್ದಿ ಅವರದೇ ದಕ್ಷಿಣ ಭಾರತೀಯ ಶಾಖಾಧಿಕಾರಿಗಳನ್ನು ಮೋಸ ಮಾಡಿ ಹಣ ಲಪಟಾಯಿಸುವ ಒಂದು ವ್ಯವಸ್ಥಿತ ರ್‍ಯಾಕೆಟ್ ಸೆಂಟ್ರಲ್ ಬ್ಯಾಂಕಿನಂತಹ ಕಳಪೆ ತಾಂತ್ರಿಕತೆಯ ಬ್ಯಾಂಕಿನಲ್ಲಿ ಇದ್ದು, ಅದರ ದಕ್ಷಿಣ ಭಾರತೀಯ ಶಾಖಾಧಿಕಾರಿಗಳು ತಮ್ಮವರಿಂದಲೇ ಮೋಸ ಹೋಗಿ ಹಣ ಕಳೆದುಕೊಳ್ಳುತ್ತಿದ್ದರು. ಆದರೆ ಈಗ ಮೋದಿಯ 'ವೈಬ್ರಂಟ್ ಗುಜರಾತ್' ಎಂಬ ಫೇಕೂ ಘೋಷಣೆಯ ಅಡಿಯಲ್ಲಿ ಬ್ಯಾಂಕುಗಳಿಗೆ ಮೋಸ ಮಾಡುವ ಸುಲಭ ಸಾಧನಗಳನ್ನು ಗುಜರಾತಿನ ವಂಚಕ ಉದ್ಯಮಿಗಳಿಗೆ ಒದಗಿಸುವ ಒಂದು ರ್‍ಯಾಕೆಟ್ ಬ್ಯಾಂಕ್ ಮೇಲಧಿಕಾರಿಗಳ ಒಳಗೆಯೇ ಹುಟ್ಟಿಕೊಂಡಿದೆ. ಇದರಿಂದಾಗಿ ಗುಜರಾತ್ ಕೇಂದ್ರಿತ ಬ್ಯಾಂಕುಗಳು ಭಯಂಕರ ಸುಸ್ತಿ ಸಾಲದ ಸುಳಿಯಲ್ಲಿ ಸಿಲುಕಿ ಷೇರುಪೇಟೆಯಲ್ಲಿ ತೀವ್ರ ಬಂಡವಾಳ ಸವೆತ ಕಂಡು ಷೇರು ಹೂಡಿಕೆದಾರರಿಗೆ ವಿಪರೀತ ನಷ್ಟ ಉಂಟುಮಾಡಿವೆ. ಇದುವೇ ಗುಜರಾತಿನ ಅಭಿವೃದ್ಧಿಯ ವಿಷ ವೃತ್ತ.

- ಎಸ್.ಎಸ್.ರವೀಂದ್ರನಾಥ್, ಬೆಂಗಳೂರು



ಜನ ಮರುಳೋ! ವಾರ್ತೆ ಮರುಳೋ!!!

ಇತ್ತೀಚೆಗಿನ ಕೆಲ ವರ್ಷಗಳಿಂದ ಜನವರಿ 14 ಸಮೀಪಿಸುತ್ತಿದ್ದಂತೆ ಟಿವಿ ಮಾಧ್ಯಮಗಳಲ್ಲಿ ಬೆಂಗಳೂರಿನ ಗವಿಗಂಗಾಧರೇಶ್ವರ ದೇಗುಲದ ಸೂರ್ಯ ರಶ್ಮಿ ಪವಾಡದ ಕತೆ ಅತಿರಂಜಿತವಾಗಿ ಪ್ರಚಾರ ಗಿಟ್ಟಿಸಿಕೊಳ್ಳುತ್ತಿದೆ. ಮಾಮೂಲಿನಂತೆ ಈ ವರ್ಷದ ಸುದ್ದಿಯೂ ಕೂಡ ವಿಸ್ಮಯ ಪವಾಡ ಎಂಬಂತಹ ಅತಿರಂಜಿತ ಶೀರ್ಷಿಕೆಯನ್ನೇ ಹೊಂದಿಕೊಂಡಿತ್ತು. ವಾಸ್ತವವಾಗಿ ಇದು ನಿಜಕ್ಕೂ ಪವಾಡವೇ ಅಥವಾ ವಿಸ್ಮಯವೇ ಅಥವಾ ಬರೀ ಬೊಗಳೆಯೇ?

ಈ ವರ್ಷದ ಮಕರ ಸಂಕ್ರಾಂತಿ 14ಕ್ಕೋ ಇಲ್ಲ 15ಕ್ಕೋ ಎಂಬ ಗೊಂದಲದಿಂದ ಕೂಡಿತ್ತು. ಅದೇ ರೀತಿ 'ಪವಾಡ'ದ ಸೂರ್ಯರಶ್ಮಿ ಲಿಂಗದ ದರ್ಶನವೂ ಯಾವ ದಿನ ಎಂಬ ಮಾತು ಬಂದಿತ್ತು. ಇದು 15 ಅಲ್ಲ 20ನೆಯ ತಾರೀಖಿಗೆ ಸಂಕ್ರಾಂತಿ ಆಚರಿಸಿದರೂ ಸೂರ್ಯರಶ್ಮಿ ಲಿಂಗಕ್ಕೆ ತಾಗೇ ತಾಗುತ್ತದೆ. ಇದರಲ್ಲಿ ಪವಾಡವೂ ಇಲ್ಲ ವಿಸ್ಮಯವೂ ಇಲ್ಲ.

ಭೂಕೇಂದ್ರಿತವಾಗಿ ನೋಡಿದಾಗ ಭೂಮಿಯ



...ರ್ಮ, ಬುದ್ಧಿನೂ ಬೆಳೆಸಿಕೊಬೇಕು. ಬಂಗಾರಪ್ಪ ...ಸ್ನಲ್ಲಿದ್ದು ಏನೇನೊ ಆದ್ರು. ಅದೇ ಬೇರೆ ಪಾರ್ಟಿಲಿದ್ದು ...ದ್ರು ಆಗಕ್ಕಾಯ್ತಾ? ಒಬ್ಬರೇ ಇದ್ದು ಏನಾರ ...ಯ್ತಾ? ಒಂದಿಷ್ಟು ಸಹನೆ ಸೈರಣೆ ಇದ್ರೆ ಮೊಯ್ಲಿ ...ಖ್ಯಮಂತ್ರಿಯಾಯ್ತಿರಲಿಲ್ಲ, ಎಸ್.ಎಂ.ಕೃಷ್ಣ ಆಯ್ತಿರಲಿಲ್ಲ, ...ಏ ತರ ಬಂಗಾರಪ್ಪನೆ ಎರಡವಧಿಗೆ ಮುಖ್ಯಮಂತ್ರಿ ...ಗಬಹುದಿತ್ತು, ನಿಮಗಿನ್ನೊಂದು ವಿಷಯ ಗೊತ್ತ?"

"ಏನ್ರಿ ಅದು?"

"ಬಂಗಾರಪ್ಪ ಬದುಕಿದ್ದಾಗ್ಲೆ ಅವರ ಶಿಫಾರಸ್ಸು ನಡೀಲಿಲ್ಲ ... ಪ್ರಭಾವ ಸತ್ತು ಬಹಳ ದಿನ ಆಗಿತ್ತು."

"ನೀವು ಪತ್ರಿಕೆಯವರೆಲ್ಲ ಕಾಂಗ್ರೆಸ್ಸಿನವುರು ಕಂಡ್ರಿ."

"ಥೂ, ನಾನ್ಯಾವತ್ತು ಕಾಂಗ್ರೆಸ್ಸಲ್ಲ. ಈಚಿಗೆ ಆಮ್ ... ಪಾರ್ಟಿ ಸೇರನಾ ಅಂಥ ಇದ್ದೆ. ಅದ್ಯಾಕೋ ...ರ್ಖರ ಗುಂಪಿನಂಗೆ ಕಾಣ್ತು. ಅದ್ಕೆ ಪತ್ರಿಕೆನೆ ವಾಸಿ ... ಇದೀನಿ. ವಿಷಯಾಂತರ ಬೇಡಿ. ಬಂಗಾರಪ್ಪನ ...ು ಬಳಸಬೇಡಿ ಅಂತೀರಲ್ಲಾ, ಯಾವತ್ತು ಬಂಗಾರಪ್ಪ ...ರಪ್ಪನೆದ್ರಿಗೆ ಸೋತು, ಆತನ ಮಗ ರಾಘವೇಂದ್ರನ ...ರಿಗೂ ಸೋತರೊ, ಅವತ್ತಲೇ ಅವರ ಪ್ರಭಾವ ...ಯ್ತು. ಅದ್ಕೆ ಹೆದ್ರಿಕಂಡ ಬಂಗಾರಪ್ಪ ...ಎಸ್‌ಗೋದ್ರು. 'ನಾನು ಬೋಗಿಯಲ್ಲ ಇಂಜಿನ್' ಅಂತ ...ತ್ತಿದ್ದ ಬಂಗಾರಪ್ಪ ಜೆ.ಡಿ.ಎಸ್‌ನಲ್ಲಿ ಐದನೇ ...ಗಿಯಾಗಿ ತಾಗಯ್ಕಂಡ್ರು. ಅವತ್ತಿಗೆ ಅವರ ಪ್ರಭಾವ ...ಷ್."

"ಮತ್ತೆ ನಾನು ಗೆದ್ದು ಬಂದಿದ್ದು ಯಾರ ಪ್ರಭಾವದಿಂದ ...ರಿ?"

"ಅದು ಪ್ರಭಾವ ಅಲ್ಲ, ಸಾವಿನ ಅನುಕಂಪದ ಅಲೆ. ...ರಲ್ಲೂ ಹಿಂದುಳಿದ ವರ್ಗದ ಭಾಗಕ್ಕೆ ಬಂಗಾರಪ್ಪನ ...ವ ಯಾವತ್ತು ಸತ್ತೋಯ್ತು ಅಂದ್ರೇ ಗುಜರಾತಿನ ...ಂತಕ ನರೇಂದ್ರ ಮೋದಿ ತೀರ್ಥಹಳ್ಳಿಗೆ ಬಂದಾಗ. ... ಜೊತೆ ಕೈ ಎತ್ತಿಕೊಂಡು ನಗಾಡಕ್ಕೆ ಟ್ರೈ ಮಾಡಿದರಲ್ಲಾ ...ತ್ತೇ ಅವರ ಇತಿಹಾಸ ಕ್ಲೋಸಾಗಿತ್ತು. ಅದ್ಕೆ ಅಲ್ಲಿಂದ ...ಳದೋರು ಮತ್ತೆ ಮೇಲೆ ಬರಲಿಲ್ಲ. ಅಂತದ್ರಲ್ಲಿ ...ಸರೇಳಿದ್ರೆ ಹುಷಾರು ಅಂತಿರಲ್ಲಾ, ಯಾರಿಗೆ ...ಗಿದೇರಿ ನಿಮ್ಮಪ್ಪನೆಸರು?"

""ರೀ ತಲೆಯೆಲ್ಲಾ ಹರಟಬೇಡಿ. ನಾನೇಳಿದ್ದು ...ರನಿಗೆ. ನಮ್ಮಪ್ಪ ಇಲ್ದೆಯಿದ್ರೆ ಅವನು ಎಮ್ಮೆಲ್ಲೆನೂ ...ಲಿಲ್ಲ, ಮಂತ್ರಿನೂ ಆಗ್ತಿರಲಿಲ್ಲ, ಅಂಥವನು ಪುನಃ ... ತಂದೆ ಹೆಸರ ಬಳಸಕೂಡದು ಅಂತ ನಾನೇಳಿದ್ದು."

""ಸಾರಿ ಮಧು."

""ಏನ್ ಸಾರಿ, ಹೇಳಿದನೆಲ್ಲಾ ಹೇಳಿಬುಟ್ಟು."

""ಥೂತ್ತೇರಿ!!!"

● ಯಾಹೂ


ನಾಟಕ ಮತ್ತು ಸಿನಿಮಾದಲ್ಲಿನ ನಟನೆ ಎರಡೂ ಬೇರೆ ಬೇರೆ ಮಜಲುಗಳು'

ಸಂದರ್ಶನ

'ವಟಿಕುಟೀರ' ಎಂಬ ರಂಗತಂಡವನ್ನು ಆರಂಭಿಸಿ ಯು.ಆರ್.ಅನಂತಮೂರ್ತಿಯವರ 'ಸೂರ್ಯನ ಕುದುರೆ', ತೇಜಸ್ವಿಯವರ 'ಮಾಯಾಮೃಗ', ಜಯಂತ ಕಾಯ್ಕಿಣಿಯವರ 'ನೋ ಪ್ರೆಸೆಂಟ್ಸ್ ಪ್ಲೀಸ್', ಶ್ರೀನಿವಾಸ ವೈದ್ಯ ಹಾಗೂ ವಸುದೇಂಧ್ರರ ಎರಡು ಕಥೆಗಳ ಆಧಾರಿತ 'ಶ್ರದ್ಧ ಮತ್ತು ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳು' - ಹೀಗೆ ಸಣ್ಣಕಥೆಗಳ ಆಧಾರಿತ ರಂಗಪ್ರಯೋಗಗಳನ್ನ ಮಾಡಿ ಜೊತೆಗೆ 'ನಿಂಬೆಹುಳಿ', 'ಶ್ವೇತ', 'ಬಹುಪರಾಕ್' ಸಿನಿಮಾಗಳಲ್ಲಿ ನಟರಾಗಿ ಕಾಣಿಸಿಕೊಳ್ಳುತ್ತಿರುವ ರಂಗ ನಟ-ನಿರ್ದೇಶಕ ಕಿರಣ್ ವಟಿ ಇಲ್ಲಿ ಮಾತಾಡಿದ್ದಾರೆ....

*** ನಿಮ್ಮ ಊರು, ಓದು, ಕುಟುಂಬದ ಹಿನ್ನೆಲೆ ಬಗ್ಗೆ ಹೇಳ್ತೀರಾ?**

ಹಾಸನದ ಬಳಿಯ ಬೇಲೂರು ನನ್ನೂರು. ಹುಟ್ಟಿ ಬೆಳೆದದ್ದು ಬೆಂಗಳೂರಿನಲ್ಲಿ, ಅಪ್ಪ ಮೇಷ್ಟ್ರು. ಹೆತ್ತವರಿಗೆ ನಾನು ಮುದ್ದಿನ ಮಗ. ಅಣ್ಣಂದಿರ ಪ್ರೀತಿಯ ತಮ್ಮ. ರೇಷ್ಮೆ ಕೃಷಿಯಲ್ಲಿ ಪದವಿ ಪಡೆದೆ. ಕನ್ನಡದಲ್ಲಿ ಎಂ.ಎ. ಹಾಗೂ ಚಿತ್ರಕಲೆಯ ಬಿ.ಎಫ್.ಎ ಪದವಿಯು ಪಕ್ಕಕ್ಕೆ ಸೇರಿದವು. ಈಗ ಸಂಗೀತದೆಡೆ ಮನಸ್ಸು ಒಲಿಯುತ್ತಿದೆ, ಮುಂದಿನದು ಗೊತ್ತಿಲ್ಲ.



*** ಕಲೆ ಯಾವಾಗ, ಯಾರನ್ನು ತನ್ನೆಡೆಗೆ ಸೆಳೆಯುತ್ತದೆಂದು ಹೇಳಲಾಗದು. ಕಲೆ ಬಗ್ಗೆ ನಿಮಗೆ ಆಸಕ್ತಿ ಮೂಡಿದ್ದು ಯಾವಾಗ?**

ಅಮ್ಮ, ಅಪ್ಪ ಅಣ್ಣಂದಿರು ಮನೆಯಲ್ಲಿ ಯಾವಾಗಲೂ ಏನಾದರೂ ಓದುತ್ತಲೇ ಇರುತ್ತಾರೆ. ಅಮ್ಮ ಹೇಳಿಕೊಟ್ಟ ಡಿವಿಜಿಯವರ 'ವನಸುಮ' ಕವನ ಇಂದಿಗೂ 'ಕಾನನದಿ ಮಲ್ಲಿಗೆಯಾಗಿರು' ಎಂದು ಪಾಠ ಹೇಳಿದಂತಿದೆ. ಆಶ್ಚರ್ಯವಾಗುವಂತೆ ಶಾಲಾದಿನಗಳಲ್ಲಿ ಪಠ್ಯದಲ್ಲಿದ್ದ ಎಲ್ಲಾ ಕವನಗಳು ಇಂದಿಗೂ ನೆನಪಿದೆ. ಕಾಲೇಜಿನ ದಿನಗಳಲ್ಲಿ ಸಾಹಿತ್ಯಾಸಕ್ತರು ಸ್ನೇಹಿತರಾದರು, ಅಲ್ಲಿಯವರೆಗೂ ಕನ್ನಡ ಸಾಹಿತ್ಯದ ಬಗ್ಗೆ ಹೆಚ್ಚಿನದಾಗಿ ಏನೂ ಗೊತ್ತಿರಲಿಲ್ಲ (ಈಗಲೂ ಅಷ್ಟೆ). ಸಾಹಿತ್ಯದ ಅಭಿರುಚಿ ಹತ್ತಿದ ಮೇಲೆ ಕಲೆಯೆಡೆಗೆ ಆಸಕ್ತಿ ತಾನೇ ತಾನಾಗಿ ಮೂಡಿತು.

*** ನೀವು ಮೂಲತಃ ರಂಗಾಸಕ್ತರು. ಅದರ ಬಗ್ಗೆ ಹೇಳಿ. ಆ ಆಸಕ್ತಿ ಹೇಗೆ ಹುಟ್ಟಿಕೊಂಡಿತು?**

ಕಾಲೇಜಿನ ದಿನಗಳಲ್ಲಿ ಮನೆಯಲ್ಲಿ ಸುಳ್ಳು ಹೇಳಿ ಸಿಕ್ಕಿಹಾಕಿಕೊಂಡೆ. ಆಗ ಏನೂ ಗೊತ್ತಿಲ್ಲದಂತೆ ನಟಿಸುತ್ತಿದ್ದೆ. ನಮ್ಮ ತಂದೆ ಕೋಪದಲ್ಲಿ ಯಾವುದಾದರೂ ನಾಟಕದ ಕಂಪನಿಗೆ ಸೇರಿಕೋ ಎಂದು ಬೈದಿದ್ದರು. ದುಃಖದಲ್ಲಿ ನೇರವಾಗಿ ಕಲಾಕ್ಷೇತ್ರಕ್ಕೆ ಹೋಗಿದ್ದೆ ಏನೂ ಆಗದೆ ವಾಪಸ್ ಬಂದೆ. ಬಹುಶಃ ಅದೇ ಅನುಭವ ಕಾಲೇಜು ಮುಗಿದ ನಂತರ ನನಗೆ ನಾಟಕಕ್ಕೆ ದಾರಿ ತೋರಿಸಿತು. ಸ್ನೇಹಿತ ವಿನೋದ್ ಪನ್ನನ ಪರಿಚಯದಿಂದ 'ಸಂಚಯ' ರಂಗತಂಡದೊಂದಿಗೆ ಗುರುತಿಸಿಕೊಂಡೆ. ಸಂಚಯದ ಗೆಳೆಯರು ಬೆನ್ನುತಟ್ಟಿದರು, ನನ್ನ ರಂಗಪಯಣಕೆ ದಾರಿತೋರಿಸಿದರು. ನಂತರ ಗುರುಗಳಾದ ಸಿ.ಜಿ.ಕೆಯವರ ಮಾರ್ಗದರ್ಶನ ದೊರಕಿತು. ಸ್ನೇಹಿತ ರವಿಕುಮಾರ್ ನಿರ್ದೇಶನದ ಮೊದಲ ನಾಟಕದೊಂದಿಗೆ ನಮ್ಮ 'ವಟಿಕುಟೀರ' ಪ್ರಾರಂಭವಾಯಿತು.

*** ನಿಮ್ಮ 'ವಟಿಕುಟೀರ' ಸಂಸ್ಥೆಯಿಂದ ಮಾಡಿದ ನಾಟಕಗಳಾವುವು? ಅವನ್ನೇ ಯಾಕೆ ಆಯ್ಕೆ ಮಾಡಿಕೊಂಡಿರಿ? ಹಾಗೇನೆ ನಿಮ್ಮ ರಂಗಭೂಮಿ ಅನುಭವಗಳನ್ನು ಹೇಳ್ತೀರಾ?**

ಸಣ್ಣಕಥೆಗಳು ನನಗೆ ಮುಂಚಿನಿಂದಲೂ ಆಪ್ತವಾದವು. ನಮ್ಮ ತಂಡದ ಹೆಚ್ಚಿನ ನಾಟಕಗಳು ಸಣ್ಣಕಥೆಗಳನ್ನ ಆಧರಿಸಿದ್ದವು. ಯು.ಆರ್.ಅನಂತಮೂರ್ತಿಯವರ 'ಸೂರ್ಯನ ಕುದುರೆ', ತೇಜಸ್ವಿಯವರ 'ಮಾಯಾಮೃಗ', ಜಯಂತ ಕಾಯ್ಕಿಣಿಯವರ 'ನೋ ಪ್ರಸೆಂಟ್ಸ್ ಪ್ಲೀಸ್' ಹಾಗೂ ಇತ್ತೀಚೆಗೆ ಶ್ರೀನಿವಾಸ ವೈದ್ಯ ಹಾಗೂ ವಸುದೇಂಧ್ರರ ಅವರ ಎರಡು ಕಥೆಗಳ ಆಧಾರಿತ 'ಶ್ರದ್ಧ ಮತ್ತು ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳು' - ಹೀಗೆ ಸಣ್ಣಕಥೆಗಳ ಆಧಾರಿತ ರಂಗಪ್ರಯೋಗಗಳನ್ನ ಮಾಡಿದ್ದೇವೆ. ರಂಗಭೂಮಿಯ ಅನುಭವಗಳನ್ನ ಹೇಳುವುದಕ್ಕಿಂತ ಅನುಭವಿಸಲು ಯೋಗ್ಯವಾದದು. ನಮ್ಮ ಹಳೆಯ ಫೋಟೋ ನೋಡಿದಾಗ ನಮಗೆ ಮಾತ್ರ ಅದರ ರಸಾನುಭವ ಆಗುವುದು. ಬೇರೆಯವರಿಗೆ ಅದು ಕೇವಲ ಚಿತ್ರವಾಗಿರುತ್ತದೆ. ಕಲೆ ಹಾಗೂ ಸಂಸ್ಕೃತಿಗಳ ಮಿಶ್ರವಾದ ರಂಗಭೂಮಿಯಲ್ಲಿ ಕ್ಷಣಕ್ಕೊಂದು ಅನುಭವಗಳು ದೊರಕುತ್ತವೆ. ನೀವೂ ಬನ್ನಿ ಅನುಭವಿಸಿ ಎಂದಷ್ಟೇ ಹೇಳಬಹುದು.

*** ನೀವು ಪ್ರಕಾಶಕರೂ ಹೌದು. ಯಾವ ಯಾವ ಪುಸ್ತಕಗಳನ್ನು ಪ್ರಕಟಿಸಿದ್ದೀರಿ? ಅವನ್ನೇ ಪ್ರಕಟಿಸಲು ಕಾರಣವೇನು?**

ಪ್ರಕಾಶಕನಾಗಿ ಒಂದು ವಿಶಿಷ್ಟವಾದ ವಿಷಯವನ್ನು ಇಟ್ಟುಕೊಂಡು ಕೆಲಸವನ್ನು ಪ್ರಾರಂಭಿಸಿದೆ. ಈಗಿನ ಕಾಲದಲ್ಲಿ ಮಕ್ಕಳನ್ನು ನೋಡಿಕೊಳ್ಳುವುದು ಒಂದು ದುಸ್ತರವಾದ ಕೆಲಸವಾಗುತ್ತಿದೆ. ಮುಂಚಿನಂತೆ ಅವಿಭಕ್ತ ಕುಟುಂಬಗಳು ಕಣ್ಮರೆಯಾಗಿ, ತಂದೆ-ತಾಯಿ ಇಬ್ಬರೂ ಕೆಲಸಕ್ಕೆ ಹೋಗಿ ಮಕ್ಕಳ ಬಗ್ಗೆ ಗಮನ ಕಡಿಮೆಯಾಗುತ್ತಿದೆ. ಹೀಗಾಗಿ ತಂದೆ-ತಾಯಂದರಿಗೆ ಮಕ್ಕಳ ಪೋಷಣೆಗೆ ಸಹಾಯವಾಗುವ ಪುಸ್ತಕಗಳನ್ನು ಪ್ರಕಟಿಸುತ್ತಿದ್ದೇನೆ. ಕೆ.ಟಿ. ಗಟ್ಟಿಯವರ 'ಉತ್ಕೃಷ್ಟತೆಗಾಗಿ ತಾಯಿ-ತಂದೆ' ಹಾಗೂ ಆರ್. ಶ್ರೀನಾಗೇಶ್ ಅವರ 'ಮಕ್ಕಳನ್ನು ಬೈಯ್ಯುವುದು ಹೇಗೆ' ಮಾರುಕಟ್ಟೆಯಲ್ಲಿ ಉತ್ತಮ ಪುಸ್ತಗಳೆಂದು ಹೆಸರು ಪಡೆದಿವೆ.

*** ನೀವು ಓದಿಕೊಂಡಿರುವ ಸಾಹಿತಿಗಳು ಯಾರ್‍ಯಾರು? ಆ ಓದಿನಿಂದ ನೀವು ಗ್ರಹಿಸಿದ್ದೇನು?**

ಅಬ್ಬಾ ಇದೊಂದು ಪ್ರಶ್ನೆಗೆ ಉತ್ತರ ಕೊಡುವುದು ತುಂಬಾ ಕಷ್ಟ. ನಾನು ಓದಿದ ಎಲ್ಲಾ ಸಾಹಿತಿಗಳ ಹೆಸರನ್ನ ಬರೆಯುತ್ತ ಕೂರಬೇಕಾಗುತ್ತದೆ. ನನಗೆ ಎಲ್ಲರ ಬರವಣಿಗೆಯೂ ಇಷ್ಟ. ತೇಜಸ್ವಿ, ಲಂಕೇಶ್, ಶ್ರೀಕೃಷ್ಣ ಆಲನಹಳ್ಳಿ, ಕುಂವೀ, ದೇವನೂರು, ಬೆಸಗರಹಳ್ಳಿ, ಜಯಂತ ಕಾಯ್ಕಿಣಿ, ವಸುಧೇಂದ್ರ, ಜೋಗಿ, ಶ್ರೀನಿವಾಸ ವೈದ್ಯ ಇವರೆಲ್ಲರ ಇಲ್ಲಿಯವರೆಗೆ ಪ್ರಕಟವಾಗಿರುವ ಹೆಚ್ಚಿನಭಾಗವನ್ನು ಓದಿದ್ದೇನೆ. ಓದಬೇಕಾದ್ದು ತುಂಬಾ ಇದೆ. ಈಗ ಕೈಯಲ್ಲಿರುವ ಕುವೆಂಪು ಅವರ ಸಮಗ್ರಸಾಹಿತ್ಯವನ್ನು ಓದಲು ನನ್ನಂಥವನಿಗೆ ಬಹುಶಃ ಈ ಜೀವಿತಾವಧಿ ಸ್ವಲ್ಪ ಕಡಿಮೆಯೇ ಅನ್ನಿಸಿದೆ. ಇವುಗಳನ್ನು ಓದುವುದರ ಮೂಲಕ ಒಂದು ವಿಚಾರ ಮನಸ್ಸಿಗೆ ಹೊಳೆದಿದೆ; ಮನಮುಟ್ಟುವಂತೆ ಬರೆಯುವುದು ಸುಲಭಸಾಧ್ಯವಲ್ಲ, ಅದನ್ನ ರಂಗರೂಪಕ್ಕೆ ತರಲು ಮಾತ್ರ ನಾನು ಅಲ್ಪ ಪ್ರಯತ್ನಪಡಬಹುದಷ್ಟೆ.

*** ನೀವು ನಟರೂ ಕೂಡ. ಯಾವ್ಯಾವ ಸಿನಿಮಾಗಳಲ್ಲಿ ನಟಿಸಿದ್ದೀರಿ? ನಾಟಕಗಳಲ್ಲಿ ಅಭಿನಯಿಸೋದಕ್ಕೂ, ಸಿನಿಮಾದಲ್ಲಿ ಅಭಿನಯಿಸೋದಕ್ಕೂ ಏನಾದರು ವ್ಯತ್ಯಾಸಗಳಿವೆಯೇ?**

ನಾಟಕದಲ್ಲಿನ ನಟನೆ ಹಾಗೂ ಸಿನಿಮಾ/ಸೀರಿಯಲ್ ನಟನೆಗೆ ಹೋಲಿಸುವುದು ಕಷ್ಟ. ಎರಡೂ ಬೇರೆ ಬೇರೆ ಮಜಲುಗಳು, ನನಗೆ ಸಿನೆಮಾ ನಟನೆ ಸ್ವಲ್ಪ ಕಷ್ಟದ್ದೇ. ಅಲ್ಲಿ ಎದುರಿನ ವ್ಯಕ್ತಿ (ಸಹನಟ/ಪ್ರೇಕ್ಷಕ) ಇರುವುದಿಲ್ಲ, ಯಾರಿಗಾಗಿ ನಟಿಸುತ್ತಿದ್ದೇವೆ ಎಂಬ ಗೊಂದಲ ನನ್ನಲ್ಲಿ ಹಲವಾರು ಬಾರಿ ಮೂಡಿದೆ. ಸದ್ಯಕ್ಕೆ ನಾನು ನಟಿಸುತ್ತಿರುವ 'ಬಹುಪರಾಕ್' ಮತ್ತು 'ಶ್ವೇತ' ಸಿನಿಮಾಗಳ ನನ್ನ ಪಾತ್ರ ನನಗೆ ತೃಪ್ತಿ ಕೊಟ್ಟಿದೆ. ಸದ್ಯದಲ್ಲೇ ಬಿಡುಗಡೆ ಆಗಬೇಕಾಗಿರುವ 'ನಿಂಬೆಹುಳಿ' ಹಾಗೂ ಗುರುದರ್ಶನ್ ನಿರ್ದೇಶನದ 'ಲೈಟ್ಸ್ ಕ್ಯಾಮೆರಾ ಆಯಕ್ಷನ್' ಚಿತ್ರದಲ್ಲಿನ ಪಾತ್ರಗಳು ನನಗೆ ಆತ್ಮೀಯವಾಗಿವೆ.

*** 'ಶ್ವೇತ' ಚಿತ್ರದಲ್ಲಿನ ನಿಮ್ಮ ಪಾತ್ರದ ಬಗ್ಗೆ ಹೇಳಿ. ಆ ಅನುಭವ ಹೇಗಿತ್ತು?**



ಪಾತ್ರಗಳ ಆಯ್ಕೆಯಲ್ಲಿ ನನಗೆ ಹೆಚ್ಚು ಆಸಕ್ತಿ ಇದೆ. ವಿಶಿಷ್ಟವಾದ/ವಿಚಿತ್ರವಾದ ಪಾತ್ರಗಳನ್ನು ಮಾಡಬೇಕು ಎನ್ನುವುದು ಬಹುಶಃ ಎಲ್ಲಾ ರಂಗಕರ್ಮಿಗಳ ಆಸೆಯಾಗಿರುತ್ತದೆ. ಹಾಗಾಗಿ ನಿರ್ದೇಶಕ ರಾಜೇಶ ಬಲಿಪ ಹಾಗೂ ಸಹ ನಿರ್ದೇಶಕ ವಿಷ್ಣು ಪ್ರಸನ್ನರವರು ಪಾತ್ರದ ಬಗ್ಗೆ ಹೇಳಿದಾಗ ಥ್ರಿಲ್ ಆದೆ. ಶೂಟಿಂಗ್ ಇನ್ನೂ ಸಂಪೂರ್ಣವಾಗಿ ಆಗಿಲ್ಲದ ಕಾರಣ ಹೆಚ್ಚಿನದನ್ನು ಹೇಳಲಾರೆ. ಚಿತ್ರಕಥೆಯಲ್ಲಿನ ನನ್ನ ಪಾತ್ರಪೋಷಣೆಯಂತೂ ತುಂಬಾ ಹಿಡಿಸಿತು.

*** ನಿಮ್ಮ ಮುಂದಿನ ಯೋಜನೆಗಳೇನು?**

ನಾನು ಸಿನಿಮಾರಂಗಕ್ಕೆ ಬಂದಿರುವುದು ನಿರ್ದೇಶಕನಾಗಲು. ರಂಗಭೂಮಿಯಲ್ಲಿ ಈ ಕಾರ್ಯವನ್ನು ಈಗಾಗಲೇ ನಿರ್ವಹಿಸಿದ್ದೇನೆ. ನನ್ನ ಎರಡು ಕಥೆಗಳು ಈಗಾಗಲೇ ಸಿನಿಮಾ ಆಗಲು ತಯಾರಾಗಿವೆ. ನಿರ್ಮಾಪಕರೂ ಕೂಡ ತುದಿಗಾಲಲ್ಲಿ ನಿಂತಿದ್ದಾರೆ. ಕುತೂಹಲದಿಂದ ಕಾಯುತ್ತಿದ್ದೇನೆ. ಇದರ ಜೊತೆಗೆ ರಂಗಭೂಮಿಯಲ್ಲಿ ಇನ್ನೂ ಹೆಚ್ಚಿನ ಕೆಲಸಗಳು ಇದೆ. ಸಾಧಿಸಿರುವುದು ತುಂಬಾ ಕಡಿಮೆ. ಸಾಧಿಸ ಬೇಕಾದದ್ದು ಬಹಳಷ್ಟಿದೆ.



ಸಂದರ್ಶಕ: ಹೃದಯಶಿವ

...ಭ್ರಮಣ ಹಾಗು ಪರಿಕ್ರಮಣ ಅನೇಕ ಭ್ರಮೆಗೆ ...ವಾಗುತ್ತದೆ ಅಂತಾದ್ದರಲ್ಲಿ ಪ್ರಮುಖವಾದುದು ...ರ್ಯನ ದೈನಂದಿನ ಚಲನೆ. ಅದೇರೀತಿ ವಾರ್ಷಿಕ ...ಮಣದಲ್ಲೂ ಸೂರ್ಯ ಉತ್ತರಕ್ಕೆ ದಕ್ಷಿಣಕ್ಕೆ ಹೋದಂತೆ ...ವಾಗುತ್ತದಾದರೂ ಇದು ಭೂಮಿಯ ಚಲನೆಯ ...ಮವೇ ಹೊರತು ರೂಢಿಯಲ್ಲಿನ ನಂಬಿಕೆಯಂತೆ ...ರ್ಯನ ಚಲನೆ ಅಲ್ಲವೇ ಅಲ್ಲ.

...ಭೂಮಿಯ ಪರಿಭ್ರಮಣ ಕಾರಣದ ಸೂರ್ಯನ ಚಲನೆ ...ತ ವೇಗವಾಗಿ ಭಾಸವಾದರೆ (24 ಗಂಟೆ) ದಿನದ ...ನೆ ರೀತಿಯಂತೆ ಅರ್ಧ ಸುತ್ತನ್ನೂ ಪೂರೈಸದ (ಕೇವಲ ...ಗ್ರಿ ಕೆಳಗೆ) ವಾರ್ಷಿಕ ಪರಿಕ್ರಮಣದ ವೇಗ ಅತ್ಯಂತ ...ಸ ಅಂದರೆ 24 ಗುಣಿಸು 365 ಗಂಟೆ ಅರ್ಥಾತ್ ...ದು ವರ್ಷ. ಇಂತಹ ನಿಧಾನಗತಿಯ ಸೂರ್ಯ ಕಿರಣದ ...ಕ ಚಲನೆ ಸುಮಾರು ಒಂದು ಅಡಿ ಅಗಲದ ...ಂಗಡ ಮೇಲೆ ಬಿದ್ದರೆ ಅದು ಕೇವಲ ನಿರ್ದಿಷ್ಟ ...ದು ದಿನಕ್ಕಷ್ಟೇ ಸೀಮಿತವಾಗಿರದು ಎಂಬುದು ...ಷ್ಟಾಂಶ.

...ಹುಣ್ಣಿಮೆ, ಅಮಾವಾಸ್ಯೆ, ಸಂಕ್ರಾಂತಿ, ಋತುಗಳ ಬಗ್ಗೆ ...ತಿಸುವ ಯಾರೋ ವಾಸ್ತುಶಿಲ್ಪಿ ನಿರ್ದಿಷ್ಟ ಕಾಲಕ್ಕೆ ...ರ್ಯರಶ್ಮಿ ಬೀಳುವಂತೆ ವ್ಯವಸ್ಥೆ ಮಾಡಿ ದೇವಾಲಯವನ್ನು ...ದರೆ ಅದನ್ನೊಂದು ಕೌಶಲ ಎನ್ನಬಹುದೇ ವಿನಃ ...ದ ಎಂಬುದಾಗಿ ಅಲ್ಲ.

... ಕೆಲ ವರ್ಷಗಳ ಹಿಂದೆ, ಪ್ರಸಿದ್ಧ ಪತ್ರಿಕೆಯೊಂದರಲ್ಲಿ ...ಜೆಯ ಮಂಗಳಾರತಿಯ ವೇಳೆ ಕೊನೆಗೆ ...ಾಲಯವೊಂದರಲ್ಲಿ ಅಲ್ಲಿದ್ದ ನಾಯಿಯೂ ಕೂಡ ...ಜೆಯಲ್ಲಿ ಭಾಗಿಯಾಗುವ ಸಚಿತ್ರ ಸುದ್ದಿ ಪ್ರಕಟವಾಗಿತ್ತು ...ಜೆಯ ಗಂಟೆ ಭಾರಿಸುವಾಗ ಅದೂ ಕೂಡ ಓ... ...ಪ್ರಾರ್ಥನೆ ಮಾಡುತ್ತದಂತೆ (ಜನರೊಂದಿಗೆ ನಿಂತು ...ಊಳಿಡುವ ಚಿತ್ರವಿತ್ತು) ಅದರದೇ ಪತ್ರಿಕೆಯೊಂದರ ...ಕುರಿತ ಲೇಖನದ ವಾಕ್ಯ (ನಿರ್ದಿಷ್ಟ ತರಂಗಾಂತರದ ...ಗಳು ನಾಯಿಗಳಿಗೆ ಕಿರಿಕಿರಿಯನ್ನುಂಟುಮಾಡುತ್ತವೆ ...ನ ಸಂಗತಿ) ಹಾಗು ಪಮ್ಮ ಆಫೀಸಿನ ಸೈರನ್ ಧ್ವನಿಗೆ ... ದನಿಗೂಡಿಸುವ ನಾಯಿಗಳ ಉದಾಹರಣೆಯನ್ನು ಕೊಟ್ಟು ಅದು ಸರಿಯಲ್ಲ ದೇಗುಲದ ಗಂಟೆ ಶಬ್ದಕ್ಕೆ ಪ್ರತಿಯಾಗಿ ಅವು ಧ್ವನಿಗೂಡಿಸುತ್ತಿದೆಯೇ ವಿನಃ ಅದು ಭಕ್ತ ಶಿರೋಮಣಿ ಶ್ವಾನ ಆಗಿರದು ಎಂದು ಬರೆದಿದ್ದೆ. ನಂತರದ ಸಂಚಿಕೆಯಲ್ಲಿ ನನ್ನ ಬೇರೆ ಲೇಖನ ಬಂತೇ ವಿನಃ ಜನರ ನಂಬಿಕೆ ಹಾಗು ನಾಯಿಯ ಭಕ್ತಿಯನ್ನು ಅಲ್ಲಗಳೆಯುವ ಮತ್ತು ಅನುಮಾನಿಸುವ ಆ ನನ್ನ ವಿಚಾರ ಪ್ರಕಟವಾಗಲೇ ಇಲ್ಲ, ಜನ ಮರುಳೋ... ಜಾತ್ರೆ ಅಲ್ಲಲ್ಲ, ವಾರ್ತೆ (ಮಾಧ್ಯಮಗಳು ಬಿತ್ತರಿಸುವ ಸುದ್ದಿಗಳು) ಮರುಳೋ... ಆ ಗವಿ ಗಂಗಾಧರನೇ ಹೇಳಬೇಕು.

- ಶಶಿ ಪುತ್ತೂರು, ದಕ

ಆರೆಸ್ಸೆಸ್ ದುರುಳರೇ, ದೇಶ ಬಿಟ್ಟು ತೊಲಗಿ!

ಅಂದು 'ಬ್ರಿಟಿಷರೇ, ದೇಶ ಬಿಟ್ಟು ತೊಲಗಿ' ಎಂದು ಭಾರತೀಯರು ಹೋರಾಡಿದ್ದರು. ಇಂದು 'ಆರೆಸ್ಸೆಸ್



ದುರುಳರೇ, ಭಾರತ ಬಿಟ್ಟು ತೊಲಗಿ' ಎಂದು ನಿರ್ದಾಕ್ಷಿಣ್ಯವಾದ ನಿಲುವು ತಾಳದೆ ಇದ್ದರೆ ದೇಶಕ್ಕೆ ಉಳಿಗಾಲವಿಲ್ಲ, 'ಮೋದಿ ಪ್ರಧಾನಿ ಆಗದಿದ್ದರೆ ಭಾರತದ ಸಮಾಧಿ' ಎಂಬ ಆರೆಸ್ಸೆಸ್ ಸಂಚು ನಮಗೆ ಅರ್ಥವಾಗಬೇಕಿರುವುದು ಈಗಿನ ತುರ್ತು.

- ರವಿಕುಮಾರ್, ಹಾಸನ

ವಿ.ಸೂ.: ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 05-02-2014




ಕನ್ನಡದಲ್ಲಿ 'ಎಕ್ಸ್‌ಕ್ಯೂಸ್ ಮಿ', 'ಆಕಾಶ್', 'ವಂಶಿ', 'ಸವಿಸವಿ ನೆನಪು', 'ಚಪ್ಪಾಳೆ', 'ಉಪ್ಪಿ ದಾದಾ ಎಂಬಿಬಿಎಸ್', 'ಪ್ರೀತಿ ಏಕೆ ಭೂಮಿ ಮೇಲಿದೆ' ಸೇರಿದಂತೆ ಅನೇಕ ಚಿತ್ರಗಳಿಗೆ ಸಂಗೀತ ನೀಡಿರುವ ಆರ್.ಪಿ. ಪಟ್ನಾಯಕ್ ತಮ್ಮ ಮಾತೃಭಾಷೆಯಾದ ತೆಲುಗಿನಲ್ಲಿ ಸುಮಾರು ಐವತ್ತು ಚಿತ್ರಗಳಿಗೆ ಹಾಗೂ ತಮಿಳಿನ ಮೂರ್ನಾಲ್ಕು ಚಿತ್ರಗಳಿಗೆ ಯಶಸ್ವೀ ಸಂಗೀತ ಕೊಟ್ಟಂಥವರು. ಜೊತೆಗೆ ತಮ್ಮ ಹಾಡುಗಾರಿಕೆ ಮೂಲಕವೂ ಕೇಳುಗರನ್ನು ಆಕರ್ಷಿಸಿದಂಥವರು. ಇಂತಹ ಪ್ರತಿಭಾವಂತ ಸಂಗೀತಗಾರ ಹಾಡುವ

ಪಟ್ನಾಯಕ್ ಪೊಲಿಟಿಕ್ಸ್

ಜೊತೆಗೆ ಸಂಗೀತ, ಗಾಯನದ ಜೊತೆಗೆ ನಟನೆ, ನಿರ್ದೇಶನಗಳೆಂಬ ಮತ್ತೆರಡು ದೋಣಿಗಳಲ್ಲಿ ಕಾಲಿಟ್ಟು ತೀರ ಸೇರಬಯಸಿದ್ದು ಈಗ ಇತಿಹಾಸ. ಆ ನಿಟ್ಟಿನಲ್ಲಿ 'ಅಂದಮೈನ ಮನಸುಲೋ', 'ಬ್ರೋಕರ್', 'ಫ್ರೆಂಡ್ಸ್ ಬುಕ್', 'ಆರ್ಮಿ', 'ತುಳಸಿದಳಂ' ಎಂಬ ತೆಲುಗು ಚಿತ್ರಗಳನ್ನು ನಿರ್ದೇಶಿಸಿ ಸೋಲುಗೆಲುವಿನ ಮಿಶ್ರ ಅನುಭವ ಪಡೆದುದ್ದಲ್ಲದೇ, 'ನೀನು ವಾಸಂತಿ ಲಕ್ಷ್ಮಿ' ಎನ್ನುವ ಚಿತ್ರದಲ್ಲಿ ನಾಯಕನಟರಾಗಿ ಕೂಡ ಅಭಿನಯಿಸಿದ್ದರು. ಇಂತಹ ಪಟ್ನಾಯಕ್ ಇತ್ತೀಚಿನ ದಿನಗಳಲ್ಲಿ ತಮ್ಮ ಎಂದಿನ ಪ್ರೀತಿ, ಪ್ರೇಮದ ಸುತ್ತ ಗಿರಕಿ ಹೊಡೆಯುವ ಹಳಸಲು ಕಥೆಗಳನ್ನು ಬಿಟ್ಟು ತೆಲುಗಿನಲ್ಲಿ 'ಬ್ರೋಕರ್' (ಕನ್ನಡದ 'ಅಗ್ರಜ') ಎನ್ನುವ ಚಿತ್ರ ತೆಗೆದು ಕಥೆಗಾಗಿ ರಾಷ್ಟ್ರಪ್ರಶಸ್ತಿ ಪಡೆದಿದ್ದರು.

ಈಗ ಅದೇ ಜೋಷ್‌ನಲ್ಲಿ ಕನ್ನಡದಲ್ಲೂ ಒಂದು ಚಿತ್ರವನ್ನು ನಿರ್ದೇಶಿಸುವ ಯೋಜನೆ ಪಟ್ನಾಯಕ್ ಅವರದ್ದು. ಪ್ರಸ್ತುತ ರಾಜಕೀಯ ವಿದ್ಯಮಾನಗಳ ಸುತ್ತ ಹೆಣೆಯಲ್ಪಡುವ ಈ ಚಿತ್ರದ ಮೂಲಕ ಸಾಮಾಜಿಕ ಪ್ರಜ್ಞೆ ಮೂಡಿಸುವ ಉದ್ದೇಶ ಪಟ್ನಾಯಕ್ ಅವರಿಗಿದೆ. ಅಂದಹಾಗೆ ಈ ಚಿತ್ರದಲ್ಲಿ ರಂಗಾಯಣ ರಘು ಅವರು ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದರೆ, ಶಿರೀನ್ ಎನ್ನುವ ಮಲಯಾಳ ಹುಡುಗಿ ನೆಗೆಟಿವ್ ರೋಲ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಮಾನಸಿ ಎನ್ನುವ ಸುಂದರಿಗೆ ಈ ಚಿತ್ರದಲ್ಲಿ ಪತ್ರಕರ್ತೆಯ ಪಾತ್ರ.

ಕಂಬಾರರು ಡಬ್ಬಿಂಗ್ ಪರ



ಡಬ್ಬಿಂಗ್ ವಿಚಾರವಾಗಿ ಸಿನಿಮಾ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಮಿಶ್ರಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿಯೇ ಕೊಪ್ಪಳದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಜ್ಞಾನಪೀಠ ಪುರಸ್ಕೃತ ಸಾಹಿತಿ ಡಾ.ಚಂದ್ರಶೇಖರ ಕಂಬಾರರು, ಪರಭಾಷಾ ಚಿತ್ರಗಳನ್ನು ಕನ್ನಡಕ್ಕೆ ಡಬ್ ಮಾಡುವುದರಿಂದ ಕನ್ನಡಿಗರ ಜ್ಞಾನಮಟ್ಟ ವಿಸ್ತಾರವಾಗಲು ಸಹಕಾರಿಯಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಜೊತೆಗೆ ಡಬ್ಬಿಂಗ್ ವಿಷಯವಾಗಿಯೇ ಕನ್ನಡ ಸಾರಸ್ವತ ಲೋಕ ಇಬ್ಭಾಗವಾಗುತ್ತಿದೆಯೆಂದು ಕಳವಳ ವ್ಯಕ್ತಪಡಿಸಿದ ಅವರು ಡಬ್ಬಿಂಗ್ ವಿರೋಧಿಸುವುದು ತರವಲ್ಲವೆಂದು ಖಂಡಿಸಿದ್ದಾರೆ. ಇದು ಒಂದೆಡೆಯಾದರೆ, ಇನ್ನೊಂದೆಡೆ ಬೆಂಗಳೂರಿನಲ್ಲಿ ಕಳೆದ ಮಂಗಳವಾರ ನಡೆದ ಸಭೆಯೊಂದರಲ್ಲಿ ವಾಟಾಳ್ ನಾಗರಾಜ್, ಸಾ.ರಾ.ಗೋವಿಂದು, ಶ್ರುತಿ, ತಾರಾ, ಬಿ.ಸುರೇಶ, ಹೇಮಾಚೌಧರಿ ಸೇರಿದಂತೆ ಹಲವರು ಭಾಗವಹಿಸಿ ಜನವರಿ 27ರಂದು ಡಬ್ಬಿಂಗ್ ವಿರೋಧಿಸಿ ಮೆರವಣಿಗೆ ಕೈಗೊಳ್ಳುವುದಾಗಿ ತೀರ್ಮಾನಿಸಿದ್ದಾರೆ. ಮೈಸೂರು ಬ್ಯಾಂಕ್ ವೃತ್ತದಿಂದ ಶುರುವಾಗಿ ಗಾಂಧಿನಗರ ಮೂಲಕ ಸೆಂಟ್ರಲ್ ಕಾಲೇಜಿನವರೆಗೆ ಸಾಗಲಿರುವ ಈ ಪ್ರತಿಭಟನಾ ಮೆರವಣಿಗೆಯಲ್ಲಿ ಡಾ. ರಾಜಕುಮಾರ್ ಕುಟುಂಬವೂ ಭಾಗವಹಿಸಲಿದೆಯೆಂದು ವಾಟಾಳ್ ನಾಗರಾಜ್ ಹೇಳಿದ್ದಾರೆ. ಡಬ್ಬಿಂಗ್ ಬೇಕೇ, ಬೇಡವೇ ಎನ್ನುವುದರಲ್ಲಿ ಕಾಲ ಕಳೆಯುತ್ತಿರುವ ಕನ್ನಡ ಚಿತ್ರರಂಗದ ವಿರುದ್ಧ 'ಒಳ್ಳೆಯ ಚಿತ್ರಗಳನ್ನು ಕೊಡಿ' ಎನ್ನುವ ಸ್ಲೋಗನ್ ಇಟ್ಟುಕೊಂಡು ಪ್ರೇಕ್ಷಕ ಪ್ರಭುಗಳು ಹೋರಾಟಕ್ಕಿಳಿಯದಿದ್ದರೆ ಸಾಕು ಅಲ್ಲವೇ?



ನಿಹಾರಿಕಾ ಮಲ್ಯ 'ದೋಸ್ತಿ'

'ಜಾಕ್ಸನ್' ಎನ್ನುವ ಕ್ಯಾಚಿ ಟೈಟಲ್ ಇರುವ ಚಿತ್ರಕ್ಕೆ ದುನಿಯಾ ವಿಜಯ್ ನಾಯಕ. ಇತ್ತೀಚೆಗಷ್ಟೇ ಬೆಂಗಳೂರಿನಲ್ಲಿ ಆರಂಭವಾದ ಈ ಚಿತ್ರದ ವಿಶೇಷತೆಯೆಂದರೆ 'ಜಾಕ್ಸನ್' ಮುಹೂರ್ತ ಆಚರಿಸಿಕೊಂಡ ದಿನವೇ ವಿಜಯ್ ಬರ್ತ್ ಡೇ. 'ಇದರ್ಕುಂ ದಾನೇ ಆಸೈಪಟ್ಟೈ ಬಾಲಕುಮಾರ' ಎನ್ನುವ ತಮಿಳು ಚಿತ್ರವನ್ನು ಕನ್ನಡಕ್ಕಿಳಿಸುವ ಹೊಣೆಗಾರಿಕೆಯನ್ನು ಸನತ್ ಹೊತ್ತಿದ್ದಾರೆ. ಈ ಸನತ್ ಈ ಮೊದಲು 'ಡ್ರಾಮಾ', 'ಲೈಫು ಇಷ್ಟೇನೆ' ಸೇರಿದಂತೆ ಸುಮಾರು ಐವತ್ತಕ್ಕೂ ಹೆಚ್ಚು ಚಿತ್ರಗಳ ಎಡಿಟರ್ ಆಗಿದ್ದು, ಇದೇ ಮೊದಲಬಾರಿಗೆ



ವಿಜಯ್ ಈಗ ಜಾಕ್ಸನ್

ಡೈರೆಕ್ಟರಾಗುತ್ತಿದ್ದಾರೆ. ಸದ್ಯ 'ಕೋಬ್ರ' ಹಾಗೂ 'ಸಿಂಹಾದ್ರಿ' ಚಿತ್ರಗಳಲ್ಲಿ ಬ್ಯುಸಿಯಿರುವ ವಿಜಯ್ ಈ ಎರಡು ಚಿತ್ರಗಳು ಕಂಪ್ಲೀಟ್ ಆದನಂತರ 'ಜಾಕ್ಸನ್' ಆಗಲಿದ್ದಾರೆ. ವಿಜಯ್ ಈ ಚಿತ್ರಕ್ಕೆ ಹಣ ಹೂಡುತ್ತಿರುವ ತಮ್ಮ ಸ್ನೇಹಿತ ಸುಂದರ್ ಗೌಡರಿಂದ ಒಂದೇ ಒಂದು ನಯಾಪೈಸೆಯನ್ನೂ ಸಂಭಾವನೆಯಾಗಿ ಪಡೆಯದೇ ಫ್ರೀ ಕಾಲ್ ಶೀಟ್ ಕೊಟ್ಟಿದ್ದಾರೆ. ಫೆಬ್ರವರಿ 3 ರಿಂದ ಶೂಟಿಂಗ್ ಶುರುವಾಗಲಿದ್ದು, 'ಗೊಂಬೆಗಳ ಲವ್', 'ಜಟ್ಟ', 'ಅದ್ವೈತ' ಚಿತ್ರಗಳಲ್ಲಿ ನಟಿಸಿದ್ದ ಪಾವನಿ ಈ ಚಿತ್ರದ ನಾಯಕಿ.

ರವಿಚಂದ್ರನ್, ಇಂದ್ರಜಿತ್ ಲಂಕೇಶ್, ಎಂ.ಎಸ್. ರಮೇಶ್, ಎಸ್. ಮಹೇಂದರ್, ಆರ್. ಚಂದ್ರು ಅವರ ಬಳಿ ಅಸೋಸಿಯೇಟ್ ಡೈರೆಕ್ಟರಾಗಿದ್ದ ಚಂದ್ರಮೋಹನ್ ಎನ್ನುವವರು ಈಗ 'ಬಾಂಬೆ ಮಿಠಾಯಿ' ಎನ್ನುವ ಚಿತ್ರಕ್ಕೆ ಮೊದಲಬಾರಿಗೆ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯನ್ನು ಬರೆದಿದ್ದಾರಲ್ಲದೆ ಫೆಬ್ರವರಿ ಮೊದಲನೇ ವಾರದಲ್ಲಿ ನಿರ್ದೇಶನಕ್ಕೂ ಇಳಿಯುತ್ತಿದ್ದಾರೆ.



ಚಂದ್ರಮೋಹನರ ಬಾಂಬೆ ಮಿಠಾಯಿ

ಇದೊಂದು ಪಕ್ಕಾ ಕಾಮಿಡಿ ಚಿತ್ರವಾಗಿದ್ದು, ಕಿರುತೆರೆಯಲ್ಲಿ 'ಪುಟಾಣಿ ಪಂಟ್ರು' ಎಂಬ ರಿಯಾಲಿಟಿ ಷೋ ನಡೆಸಿಕೊಡುತ್ತಿದ್ದ ನಿರಂಜನ್ ಪಾಂಡೆ ಈ ಚಿತ್ರದ ನಾಯಕ. ನಾಯಕಿ ಇನ್ನಷ್ಟೇ ಆಯ್ಕೆಯಾಗಬೇಕಿದೆ. ಮೈಸೂರು, ಕುಶಾಲನಗರ, ಚಿಕ್ಕಮಗಳೂರು, ಕಾರವಾರ, ಗದಗ, ಚಿತ್ರದುರ್ಗ ಮತ್ತು ಬೆಂಗಳೂರಿನ ಸುತ್ತಮುತ್ತ ಮೂವತ್ತೈದು ದಿನಗಳ ಕಾಲ ಚಿತ್ರೀಕರಣಗೊಳ್ಳುವ ಈ ಸಿನಿಮಾಗೆ ಸೌದಾ ಶರೀಫ್ ಹಾಗೂ ಅಮೀರ್ ಶರೀಫ್ ಎಂಬುವವರು ಹಣ ಹಾಕುತ್ತಿದ್ದಾರೆ. ಕಾರ್ಯಕಾರಿ ನಿರ್ಮಾಪಕರಾಗಿ ನಲ್ಲೂರ್ ನಾರಾಯಣ್ ಇದ್ದಾರೆ. ಉಳಿದಂತೆ, ಗಿರೀಶ್ ಛಾಯಾಗ್ರಹಣ ಹಾಗೂ ವೀರ ಸಮರ್ಥ್ ಸಂಗೀತ 'ಬಾಂಬೆ ಮಿಠಾಯಿ'ಗಿರುತ್ತದೆ. ಬುಲೆಟ್ ಪ್ರಕಾಶ್, ಚಿಕ್ಕಣ್ಣ ಪೋಷಕ ನಟರು.



ಮಹೇಂದರ್ ವಿತ್ ಮಹಾಕಾಳಿ

ಸೆಂಟಿಮೆಂಟಲ್ ಸಿನಿಮಾಗಳನ್ನು ನಿರ್ದೇಶಿಸುವುದರಲ್ಲಿ ಎತ್ತಿದ ಕೈ ಎನ್ನಿಸಿಕೊಂಡಿದ್ದ ನಿರ್ದೇಶಕ ಎಸ್. ಮಹೇಂದರ್ ಈಗ ಮಾಲಾಶ್ರೀ ಲೀಡ್ ರೋಲ್‌ನಲ್ಲಿರುವ 'ಮಹಾಕಾಳಿ' ಚಿತ್ರವನ್ನು ನಿರ್ದೇಶಿಸಲು ಸಜ್ಜಾಗಿದ್ದಾರೆ. ಈ ಮೊದಲು 'ಮಹಾಕಾಳಿ' ಚಿತ್ರಕ್ಕೆ ಡಿ.ರಾಜೇಂದ್ರ ಬಾಬು ಅವರು ನಿರ್ದೇಶಕರಾಗಿದ್ದರು. ಆದರೆ ಅವರು ನಿಧನರಾದ ಕಾರಣ ಆ ಚಿತ್ರವನ್ನು ಪೂರ್ಣಗೊಳಿಸುವ ಹೊಣೆ ಎಸ್.ಮಹೇಂದರ್ ಅವರ ಮೇಲೆ ಬಿದ್ದಿದೆ. ಎಸ್.ಮಹೇಂದರ್ ಇದೇ ಮೊದಲ ಬಾರಿಗೆ ಆಕ್ಷನ್ ಚಿತ್ರವನ್ನು ನಿರ್ದೇಶಿಸುತ್ತಿದ್ದರೆ, ಸೆಂಟಿಮೆಂಟಲ್ ಚಿತ್ರಗಳಿಗೆ ಕಥೆ ಬರೆದು ಹೆಸರು ಮಾಡಿದ್ದ ಅಜಯ್ ಕುಮಾರ್ 'ಮಹಾಕಾಳಿ'ಗೆ ಕಥೆ, ಚಿತ್ರಕಥೆ ಬರೆದಿರುವುದೂ ವಿಶೇಷವೇ ಆಗಿದೆ. ಉಳಿದಂತೆ ಸಿಂಹಾದ್ರಿ ಪ್ರೊಡಕ್ಷನ್ ಲಾಂಛನದಡಿ ರಮೇಶ್ ಕಶ್ಯಪ್ ನಿರ್ಮಿಸುತ್ತಿರುವ ಈ ಚಿತ್ರ ಜನವರಿ ಕೊನೇ ವಾರದಲ್ಲಿ ಕಂಠೀರವ ಸ್ಟುಡಿಯೋದಲ್ಲಿ ಸೆಟ್ಟೇರಲಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com